ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 7 ಶನಿವಾರ 2022

ಸಂಪುಟ: 43 | ಸಂಚಿಕೆ: 21 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ

ಕಿಂಗ್‌ಪಿನ್ ಟಚ್ ಮಾಡಿದರೆ ಸರ್ಕಾರ ಉಳಿಯಲ್ಲ

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಬಹು ದೊಡ್ಡ ಹಗರಣ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹೊಸ ಬಾಂಬ್





ಬೆಂಗಳೂರು, ಮೇ 6– ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ ಹಗರಣದ ಮೂಲ ಕಿಂಗ್‌ಪಿನ್ ಹೆಸರು ಹೇಳಲು ಈ ಸರ್ಕಾರದಿಂದ ಸಾಧ್ಯವೇ? ಎಂದು ಪ್ರಶ್ನಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಒಂದು ವೇಳೆ ಅವರ ಹೆಸರು ಹೇಳಿದರೆ ಸರ್ಕಾರವೇ ಬಿದ್ದು ಹೋಗುತ್ತದೆ ಎಂದು ಹೊಸ ಬಾಂಬ್ ಸಿಡಿಸಿದ್ದಾರೆ.

ಇಂದು ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂಲ ಕಿಂಗ್‌ಪಿನ್ ಯಾರು ಎಂಬುದು ಸರ್ಕಾರ ನಡೆಸುತ್ತಿರುವ ಎಲ್ಲರಿಗೂ ಗೊತ್ತಿದೆ. ಆದರೂ ಅವರನ್ನು ಟಚ್ ಮಾಡಲು ಸಾಧ್ಯವಿಲ್ಲ. ಹಾಗೇನಾದರೂ ಮಾಡಿದರೆ ಸರ್ಕಾರ ಉಳಿಯಲ್ಲ ಎಂದರು. ಈ ಹಗರಣದಲ್ಲಿ ಒಬ್ಬರೇ 80 ರಿಂದ 90 ಮಂದಿಯನ್ನು ನೇಮಕ ಮಾಡಿಸಿದ್ದೂ ಇದೆ. ಅದರಲ್ಲಿ ಭವಿಷ್ಯದ ನಾಯಕರೇ ಇದ್ದಾರೆ. ಅವರು ಪ್ರಮುಖ ಚುನಾವಣೆಗಳನ್ನು ನಡೆಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದೂ ಇದೆ ಎಂದು ಮಾರ್ಮಿಕವಾಗಿ ನುಡಿದರು.

ಸರ್ಕಾರವು ತನಿಖೆಯನ್ನು ಪಾರದರ್ಶಕವಾಗಿ, ಕಠಿಣವಾಗಿ ನಡೆಸುತ್ತಿದೆ ಎಂದು ಹೇಳುತ್ತಿದ್ದಾರೆ, ನೋಡೋಣ. 15 ದಿನದ ನಂತರ ಗುಂಡಿ ತೆಗೆದು ಮಣ್ಣು ಹಾಕಿ ಮುಚ್ಚಬಹುದು. ಆಗ ಮಾತನಾಡುತ್ತೇನೆ ಎಂದರು. ಪಿಎಸ್‌ಐ ನೇಮಕಾತಿ ಹಗರಣಕ್ಕಿಂತ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹಗರಣ ಭಾರೀ ದೊಡ್ಡಮಟ್ಟದ್ದು. ಆ ವಿಚಾರವಾಗಿ ಸರ್ಕಾರ ನಡೆಸುವವರು ಸೈಲೆಂಟ್ ಆಗಿದ್ದಾರೆ ಯಾಕೆ? ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಕ್ಕೆ ಸಂಬಂಧಿಸಿದಂತೆ ಕೇವಲ ಇಬ್ಬರನ್ನು ಮಾತ್ರ ಬಂಧಿಸಿದ್ದಾರೆ. 1200 ಸಹಾಯಕ ಪ್ರಾಧ್ಯಾಪಕರ ಆಯ್ಕೆ ವಿಚಾರವದು. ಈ ಹಗರಣದಲ್ಲಿ 500 ರಿಂದ 600 ಜನ ಭಾಗವಹಿಸಿರುವ ಸಾಧ್ಯತೆ ಇದೆ. ಆದರೂ ಇಬ್ಬರನ್ನು ಮಾತ್ರ ಬಂಧಿಸಿ, ಪಿಎಸ್‌ಐ ಅಕ್ರಮ ಹಗರಣವನ್ನು ಮುಂದಿಟ್ಟುಕೊಂಡು ದೊಡ್ಡ ಸ್ಕ್ಯಾಂಡಲ್ ಆಗಿರುವ ಸಹಾಯಕ ಪ್ರಾಧ್ಯಾಪಕರ ಹಗರಣವನ್ನು ಸೈಲೆಂಟ್ ಮಾಡಿಬಿಟ್ಟಿದ್ದಾರೆ ಎಂದರು. ಸಹಾಯಕ ಪ್ರಾಧ್ಯಾಪಕರ ನೇಮಕಕ್ಕೆ ಸಂಬಂಧಿಸಿದಂತೆ ▶ 8ನೇ ಪುಟಕ್ಕೆ

2,500 ಕೋಟಿ ರೂ. ಕೊಡಿ ನಿಮ್ಮನ್ನು ಸಿಎಂ ಮಾಡ್ತೀವಿ ಅಂದ್ರು!

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಿಗ್ ಬಾಂಬ್



ರಾಮದುರ್ಗ (ಬೆಳಗಾವಿ), ಮೇ 6– ನೀವು 2,500 ಕೋಟಿ ರೂಪಾಯಿ ಕೊಡಿ ನಿಮ್ಮನ್ನು ಮುಖ್ಯಮಂತ್ರಿ ಮಾಡ್ತೀವಿ ಎಂದು ಆಫರ್ ಕೊಟ್ಟಿದ್ದರು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ.

ಗುರುವಾರ ರಾಮದುರ್ಗದಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ದೆಹಲಿಯಿಂದ ಬಂದವರು 2,500 ಕೋಟಿ ಕೊಡಿ ನಿಮ್ಮನ್ನು ಸಿಎಂ ಮಾಡ್ತೀವಿ ಅಂದಿದ್ರು. ಜೆ.ಪಿ.ನಡ್ಡಾರನ್ನು ಭೇಟಿ ಮಾಡಿಸ್ತೀವಿ ಅಂತಾನು ನನ್ನ ಬಳಿ ಬಂದಿದ್ದರು. ಆದರೆ ನಾನು, 2,500 ಕೋಟಿ ಅಂದ್ರೆ ಏನ್ ಅಂತಾ ತಿಳಿದಿರಿ. ಆ ಹಣ ಹೆಂಗ್ ಇಡೋದು? ಏನು ಕೋಣೆಯಲ್ಲಿ ಇಡೋದಾ ಅಥವಾ ಗೋದಾಮಿನಲ್ಲಿ ಇಡೋದಾ? ಎಂದು ಪ್ರಶ್ನಿಸಿದ್ದೆ ಎಂದರು. ಟಿಕೆಟ್ ಕೊಡ್ತೀನಿ ಅಂತಾ ರಾಜಕಾರಣದಲ್ಲಿ ಎಲ್ಲಾ ಕಡೆ ಮೋಸ ಮಾಡುತ್ತಾರೆ. ನಾನು ವಾಜಪೇಯಿಯವರ ಕೈಯಡಿ ಕೆಲಸ ಮಾಡಿದವನು. ಅಡ್ವಾಣಿ, ರಾಜನಾಥಸಿಂಗ್, ಅರುಣ್ ಜೇಟ್ಲಿ ನನ್ನ ಬಸನಗೌಡ ಅಂತಾ ಹೆಸರು ಹೇಳಿ ಕರೀತಿದ್ದರು ಎಂದು ನೆನಪಿಸಿಕೊಂಡರು.

ಬಿಜೆಪಿಯಲ್ಲಿ ರೊಕ್ಕ ಇದ್ದವರು ಮಂತ್ರಿ ಆಗ್ತಾರೆ, ರೊಕ್ಕ ತಗೊಂಡು, ರೊಕ್ಕ ಕೊಟ್ಟು ಮಂತ್ರಿ ಆಗುತ್ತಾರೆ. ನಾನು ರೊಕ್ಕ ಕೊಡುವವನಲ್ಲ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ರೊಕ್ಕ ಕೊಟ್ಟು ಮಂತ್ರಿ ಆದ ಕ್ಯಾಂಡಿಡೇಟ್ ಎಂದು ಬಹಿರಂಗವಾಗಿಯೇ ಟೀಕಿಸಿದರು. ▶ 8ನೇ ಪುಟಕ್ಕೆ

ಬರೀ ಅಡ್ಜಸ್ಟ್‌ಮೆಂಟ್ ರಾಜಕಾರಣ

ಗೋಕಾಕ್, ಮೇ 6– ಸ್ವಪಕ್ಷದವರ ವಿರುದ್ಧ ಹರಿಹಾಯುವುದು, ಅವರ ಬಂಡವಾಳವನ್ನು ಬಯಲು ಮಾಡುವುದರಲ್ಲಿ ಸಿದ್ಧಹಸ್ತರು ಶಾಸಕ ಬಸವಗೌಡ ಪಾಟೀಲ್ ಯತ್ನಾಳ್. ಈಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಯಡಿಯೂರಪ್ಪ ಸಚಿವ ಮುರುಗೇಶ್ ನಿರಾಣಿ ಸೇರಿದಂತೆ ಹಲವರ ವಿರುದ್ಧ ಹರಿಹಾಯ್ದಿದ್ದಾರೆ.

ರಾಜ್ಯದಲ್ಲಿ ಅಡ್ಜಸ್ಟ್‌ಮೆಂಟ್ ರಾಜಕೀಯ ನಡೆಯುತ್ತಿದೆ ಎಂದು ಗೋಕಾಕ್‌ನಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಾ ಹೇಳಿದ್ದಾರೆ. ಬಿಜೆಪಿಯ ಮಹಾನ್ ನಾಯಕರು, ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್, ಜೆಡಿಎಸ್‌ನ ಕುಮಾರಸ್ವಾಮಿ ಮಧ್ಯೆ ಅಡ್ಜಸ್ಟ್‌ಮೆಂಟ್ ರಾಜಕೀಯ. ರಾತ್ರಿ ಹೊತ್ತು ಈ ಎಲ್ಲ ನಾಯಕರು ಒಟ್ಟಿಗೆ ಮಾತನಾಡಿಕೊಳ್ಳುತ್ತಾರೆ, ಶಾಸಕರು ಹುಚ್ಚು ನಾಯಿಗಳು, ಸರ್ ಸರ್ ಅಂತ ಅವರ ಹಿಂದೆ ಹೋಗುತ್ತಾರಷ್ಟೆ ಎಂದರು.

ರಮೇಶ್ ಜಾರಕಿಹೊಳಿಯವರು ಬಿಜೆಪಿ ಸರ್ಕಾರ ಬರಲು ಕಾರಣರಾಗಿದ್ದಾರೆ. ಅವರ ವಿರುದ್ಧ ಸೆಕ್ಸ್ ಸಿಡಿ ಹೊರಬರಲು ಷಡ್ಯಂತ್ರ ಮಾಡಲಾಯಿತು. ಅವರಿಗೆ ಮೋಸ ಮಾಡಿದವರಲ್ಲಿ ಒಬ್ಬ ಮಹಾನ್ ನಾಯಕರ ಮಗ ಇದ್ದಾರೆ. ಅವರಿಗೆ ಮತ್ತೆ ಸಚಿವ ಸ್ಥಾನ ಕೊಡಬೇಕು. ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಎಂಬ ನಿಯಮ ಬರುತ್ತದೆ, ಅದರಿಂದ ನಮಗೆ ಖುಷಿಯಿದೆ ಎಂದರು.



ಶುಕ್ರವಾರದಂದು ಹುಟ್ಟುಹಬ್ಬ ಆಚರಿಸಿಕೊಂಡ ಯುವ ಮುಖಂಡ, ಉದ್ಯಮಿ ಬಂಡಿಪಾಳ್ಯ ಗಿರೀಶ್ ಅವರನ್ನು ಅವರ ಹಿತೈಷಿಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಚಿತ್ರದಲ್ಲಿ ಟಾರ್ಪಾಲಿನ್ಸ್ ಮೈಸೂರು ಮಾಲೀಕ ಪ್ರದೀಪ್ ಸಿಂಗ್, ಮುಖಂಡ ಮಹೇಶ್, ಎ.ಪಿ.ಎನ್ ಪ್ರಾಪರ್ಟೀಸ್‌ನ ಮಾಲೀಕರಾದ ಎ.ಪಿ.ನಾಗೇಶ್ ಮುಖಂಡರಾದ ಶರಾವತಿ ವೆಂಕಟೇಶ್, ಪಾರ್ಸಿನಾಥ್ ಜೈನ್ ಅವರನ್ನು ಕಾಣಬಹುದು.

ಸ್ಕೂಟರ್ ಡಿಕ್ಕಿ: ಯುವತಿ ಸಾವು



ಮೈಸೂರು, ಮೇ 6 (ಆರ್‌ಕೆ)–ಎರಡು ಸ್ಕೂಟರ್‌ಗಳ ನಡುವೆ ಡಿಕ್ಕಿಯಾಗಿ ಯುವತಿ ಸಾವನ್ನಪ್ಪಿರುವ ದುರಂತ ಮೈಸೂರಿನ ತಿ. ನರಸೀಪುರ ರಸ್ತೆಯ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಪೊಲೀಸ್ ಬಡಾವಣೆ 3ನೇ ಹಂತದ ನಿವಾಸಿ, ಬಿಎಸ್‌ಎನ್‌ಎಲ್ ನಿವೃತ್ತ ಉದ್ಯೋಗಿ ಲಕ್ಷ್ಮೀಪತಿ ಅವರ ಪುತ್ರಿ ಲತಾ (26) ಸಾವನ್ನಪ್ಪಿದವರು. ಖಾಸಗಿ ಕಂಪನಿಯೊಂದರಲ್ಲಿ ಇಂಟೀರಿಯರ್ ಡಿಸೈನ್ ಆರ್ಕಿಟೆಕ್ಟ್ ಆಗಿ ಕೆಲಸ ಮಾಡುತ್ತಿದ್ದ ಈ ಯುವತಿ ತನ್ನ ಸ್ಕೂಟರ್‌ನಲ್ಲಿ ಕರ್ತವ್ಯಕ್ಕೆ ಹೋಗುತ್ತಿದ್ದಾಗ ಬಂಡಿಪಾಳ್ಯ ಎಪಿಎಂಸಿ ಕಡೆಯಿಂದ ಸುಜುಕಿ ಆಕ್ಸಿಸ್ ಸ್ಕೂಟರ್‌ನಲ್ಲಿ ರಿಂಗ್ ರಸ್ತೆಯಲ್ಲಿ ವೇಗವಾಗಿ ಬಂದ ಮೊಹಮದ್ ಅನ್ಸರ್ ಎಂಬಾತ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಇಂದು ಬೆಳಗ್ಗೆ 9.45 ಗಂಟೆಯಲ್ಲಿ ಡಿಕ್ಕಿ ಹೊಡೆದಿದ್ದಾನೆ.

ಕೆಳಕ್ಕೆ ಬಿದ್ದು ತಲೆಗೆ ತೀವ್ರ ಗಾಯಗೊಂಡ ಲತಾ ಸ್ಥಳದಲ್ಲೇ ಅಸುನೀಗಿದರು. ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ತೆರಳಿದ ಸಿದ್ಧಾರ್ಥ ನಗರ ಠಾಣೆ ಇನ್ಸ್‌ಪೆಕ್ಟರ್ ನಟರಾಜ ಹಾಗೂ ಸಿಬ್ಬಂದಿ ಮಹಜರು ನಡೆಸಿ ಮೃತ ದೇಹವನ್ನು ಮೈಸೂರಿನ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ದೇಹ ಒಪ್ಪಿಸಿದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸ್ಕೂಟರ್ ಸವಾರನನ್ನು ವಶಕ್ಕೆ ಪಡೆದಿದ್ದಾರೆ.

ದೇವರ ದರ್ಶನಕ್ಕೆ ಬಂದಿದ್ದ ಗೃಹಿಣಿ ಕಾಲು ಜಾರಿ ನದಿಗೆ ಬಿದ್ದು ಸಾವು

ಮೈಸೂರು, ಮೇ 6(ಎಸ್‌ಬಿಡಿ)– ದೇವರ ದರ್ಶನಕ್ಕೆ ತೆರಳಿದ್ದ ಗೃಹಿಣಿಯೊಬ್ಬರು ಕಾಲು ಜಾರಿ ನದಿಗೆ ಬಿದ್ದು ಮೃತಪಟ್ಟಿರುವ ಘಟನೆ ನಂಜನಗೂಡು ತಾಲೂಕು ಹುಲ್ಲಹಳ್ಳಿ ಸಮೀಪದ ಶ್ರೀ ಮಹದೇವ ತಾತನವರ ಗದ್ದುಗೆ 'ಶ್ರೀ ಕ್ಷೇತ್ರ ಸಂಗಮ'ದಲ್ಲಿ ಶುಕ್ರವಾರ ಸಂಭವಿಸಿದೆ.

ಚಾಮರಾಜನಗರ ಜಿಲ್ಲೆ ನಂಜದೇವನಪುರ ನಿವಾಸಿ ಗಿರೀಶ್ ಅವರ ಪತ್ನಿ ಕವಿತಾ(38) ದುರಂತ ಸಾವಿಗೀಡಾದವರು. ಇವರು ಮೈಸೂರು ತಾಲೂಕು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ದೂರ ಗ್ರಾಮದ ಡಿ.ಬಿ.ನಾಗರಾಜು ಅವರ ಪುತ್ರಿ.



ಗಿರೀಶ್ ಹಾಗೂ ಕವಿತಾ ದಂಪತಿ ದೇವರ ದರ್ಶನಕ್ಕೆಂದು ಶುಕ್ರವಾರ 'ಶ್ರೀ ಕ್ಷೇತ್ರ ಸಂಗಮ'ಕ್ಕೆ ತೆರಳಿದ್ದರು. ದೇವಾಲಯಕ್ಕೆ ಹೋಗುವ ಮುನ್ನ ರೂಢಿಯಂತೆ ಕೈ–ಕಾಲು ತೊಳೆದು, ತಲೆ ಮೇಲೆ ನೀರು ಪ್ರೋಕ್ಷಣೆ ಮಾಡಿಕೊಳ್ಳಲೆಂದು ಸಮೀಪದ ಕಪಿಲಾ ನದಿ ಬಳಿ ತೆರಳಿದ್ದರು. ಈ ವೇಳೆ ಕಾಲು ಜಾರಿ ನದಿಗೆ ಬಿದ್ದು ಕವಿತಾ ಮೃತಪಟ್ಟಿದ್ದಾರೆ. ಹಲವು ನಿಮಿಷಗಳಾದರೂ ಕವಿತಾ ಅವರು ವಾಪಸ್ಸು ಬರದಿದ್ದಾಗ ದಡದಲ್ಲಿದ್ದ ಪತಿ ಗಿರೀಶ್, ಗಾಬರಿಯಿಂದ ನದಿ ಬಳಿ ತೆರಳಿದ್ದಾರೆ. ಅಷ್ಟರಲ್ಲಿ ದುರಂತ ಸಂಭವಿಸಿದ್ದಾಗಿ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ನಂಜನಗೂಡು ತಾಲೂಕು ಆಸ್ಪತ್ರೆ ಆವರಣದಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಶನಿವಾರ ಮಧ್ಯಾಹ್ನ ನಂಜದೇವನಪುರದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಳೆ ಜಿಲ್ಲಾಡಳಿತದಿಂದ ಭಗೀರಥ ಜಯಂತಿ

ಮೈಸೂರು, ಮೇ 6(ಆರ್‌ಕೆಬಿ)– ಮೈಸೂರಿನ ಕಲಾಮಂದಿರದಲ್ಲಿ ಏ.8ರಂದು ಮೈಸೂರು ಜಿಲ್ಲಾಡಳಿತ ಹಾಗೂ ಉಪ್ಪಾರ ಸಮುದಾಯದ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಭಗೀರಥ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಎಸ್.ಯೋಗೀಶ್ ಉಪ್ಪಾರ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 12.30ಕ್ಕೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸುವರು. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಇನ್ನಿತರರು ಭಾಗವಹಿಸುವರು ಎಂದರು.

ಇದಕ್ಕೂ ಮೊದಲು ಬೆಳಗ್ಗೆ 10 ಗಂಟೆಗೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಉಪ್ಪಿನ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಭಗೀರಥರ ವರ್ಣಚಿತ್ರವುಳ್ಳ ಮೆರವಣಿಗೆ ಸಾಗಿ ಕಲಾಮಂದಿರ ತಲುಪಲಿದೆ. ಹೀಗಾಗಿ ಸಮುದಾಯದವರು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಮಹದೇವಶೆಟ್ಟಿ, ನಿಂಗರಾಜು, ನಂಜುಂಡಸ್ವಾಮಿ, ಶಿವಲಿಂಗಪ್ಪ, ಮಲ್ಲೇಶ್, ಶಿವರಾಜು ಉಪಸ್ಥಿತರಿದ್ದರು.



ಶಂಕರಾಚಾರ್ಯ ಜಯಂತಿ ಅಂಗವಾಗಿ ಮೈಸೂರಿನ ಸದ್ವಿದ್ಯಾ ವೃತ್ತದ ಬಳಿಯಿ ರಾಮಮಂದಿರದಲ್ಲಿರುವ ಶಂಕರಾಚಾರ್ಯ ಮೂರ್ತಿಗೆ ಮುಡಾ ಸದಸ್ಯ ನವೀನ್ ಕುಮಾರ್‌ರವರು ವಿಶೇಷ ಪೂಜೆ ಮಾಡಿ ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು. ಈ ಸಂದರ್ಭದಲ್ಲಿ ವಿಘ್ನೇಶ್ವರ ಭಟ್, ಶ್ರೀನಿವಾಸ್, ಸುದರ್ಶನ್, ಪ್ರಮೋದ್, ನವೀನ್ ಶಿವಕುಮಾರ್ ಉಪಸ್ಥಿತರಿದ್ದರು

ರಾಮದಾಸ್ ಕಚೇರಿಯಲ್ಲಿ ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯರ ಜಯಂತಿ ಆಚರಣೆ



ಮೈಸೂರು, ಮೇ 6– ವಿದ್ಯಾರಣ್ಯಪುರಂನಲ್ಲಿರುವ ಶಾಸಕ ಎಸ್.ಎ. ರಾಮದಾಸ್ ಅವರ ಕಚೇರಿಯಯಲ್ಲಿ ಶ್ರೀ ಶಂಕರಾಚಾರ್ಯರು ಹಾಗೂ ರಾಮಾನುಜಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವೇದಘೋಷದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರಾದ ಎಸ್.ಎ.ರಾಮದಾಸ್, ಕೇವಲ 32 ವರ್ಷಗಳ ಕಾಲ ಬದುಕಿದ್ದ ಶ್ರೀ ಶಂಕರರು ಸಮಾಜಕ್ಕೆ ಅಘಾದವಾದ ಕೊಡುಗೆಯನ್ನು ನೀಡಿದ್ದಾರೆ. ಕಾಲಟಿಯಿಂದ ಕಾಶ್ಮೀರದವರೆಗೆ 2 ಸಲ ಕಾಲ್ನಡಿಗೆಯಲ್ಲಿ ಪರ್ಯಟನೆ ಮಾಡಿ ಸನಾತನ ಧರ್ಮಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ತಮ್ಮ ಚಿಕ್ಕವಯಸ್ಸಿನಲ್ಲಿಯೇ ವಿಷ್ಣುಸಹಸ್ರನಾಮ ಸೇರಿದಂತೆ ಅನೇಕ ಗ್ರಂಥಗಳಿಗೆ ಭಾಷ್ಯವನ್ನು ಬರೆದಿದ್ದಾರೆ. ಇಂತಹ ಮಹಾತ್ಮರ ದಿನದಂದು ನಾವು ಸಮಾಜದ ಮಧ್ಯೆ ನೆಲೆಸಿ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಸೇವೆ ಮಾಡುತ್ತಿರುವವರಿಗೆ ಸನ್ಮಾನ ಮಾಡುತ್ತಿರುವುದು ಅತ್ಯಂತ ಸಂತಸ ತಂದಿದೆ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಎಂ.ಆರ್.ಬಾಲಕೃಷ್ಣ (ಸೇವೆ), ಶ್ರೀಹರಿ (ಯೋಗ ಕ್ಷೇತ್ರ), ಶ್ರೀಮತಿ ಡಾ.ಲಕ್ಷ್ಮೀ(ವೈದ್ಯಕೀಯ ಕ್ಷೇತ್ರ), ಪದ್ಮಶ್ರೀ ಶ್ರೀಮತಿ ಜಯಲಕ್ಷ್ಮೀ ಸಂಪತ್ ಕುಮಾರ್ (ಪತ್ರಿಕೋದ್ಯಮ), ಹೆಚ್.ವಿ. ರಾಜೀವ್ (ರಾಜಕೀಯ), ಶ್ರೀಮತಿ ದೀಪಿಕಾ ಪಾಂಡುರಂಗಿ (ಕಲಾ ಕ್ಷೇತ್ರ), ಸುಬ್ರಾಯರು, ಶ್ರೀಮತಿ ಅನುಪಮ(ಶಿಕ್ಷಣ), ಶ್ರೀ ಪ್ರಸನ್ನ(ವೈದ್ಯಕೀಯ), ಅಚ್ಯುತ್ ರಾವ್ (ಸಮಾಜ ಸೇವೆ), ಪೈಲ್ವಾನ್ ಪ್ರಹ್ಲಾದ (ಸಂಗೀತ), ವಿಶ್ವನಾಥ್, ಶ್ರೀಮತಿ ಕೃಪಾ ಫಡ್ಕೆ(ಕಲಾ), ಸಾಂಭವಮೂರ್ತಿ, ಕುಮಾರಿ ಶಿಲ್ಪ, ಕುಮಾರ್(ಆಧ್ಯಾತ್ಮ) ಅವರನ್ನು ಸನ್ಮಾನಿಸಲಾಯಿತು.

ಸದರಿ ಕಾರ್ಯಕ್ರಮದಲ್ಲಿ ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷರಾದ ಎಂ.ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ನಾಗೇಂದ್ರಕುಮಾರ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ನಗರಪಾಲಿಕಾ ಸದಸ್ಯರಾದ ಮಾವಿ ರಾಮಪ್ರಸಾದ್, ಬಿ.ವಿ.ಮಂಜುನಾಥ್, ಶ್ರೀಮತಿ ಶಾಂತಮ್ಮ ವಡಿವೇಲು, ಶ್ರೀಮತಿ ಸೌಮ್ಯ ಉಮೇಶ್, ಬಿ.ಎಲ್.ಎ 2 ಪ್ರಸಾದ್ ಬಾಬು, ಪ್ರಮುಖರಾದ ರವಿ, ಶಿವಪ್ಪ, ಪ್ರದೀಪ್ ಪ್ರಸಾದ್, ಅಕ್ಷಯ್, ನಾಗಶಂಕರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ನಾಳೆ ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮ



ಮಾಧ್ಯಮ ಮೈತ್ರಿಯಾನ, ವಿಶ್ವಾಕ್ಷರ ಪಯಣ, ವಿಶ್ವನಾಥ್ ಕೃತಿಗಳ ಅವಲೋಕನ

ಮೈಸೂರು, ಮೇ 6(ಆರ್‌ಕೆಬಿ)– ವಿಧಾನ ಪರಿಷತ್ ಸದಸ್ಯ ಹೆಎಚ್.ವಿಶ್ವನಾಥ್ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಂಟಿ ಆಶ್ರಯದಲ್ಲಿ ಮೇ 8 ರಂದು ಬೆಳಗ್ಗೆ 10.30ಕ್ಕೆ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ 'ಅಡಗೂರು ಹೆಚ್. ವಿಶ್ವನಾಥ್ 75ರ ಸಂಭ್ರಮ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪತ್ರಿಕಾ ರಂಗದೊಡನೆ ಅವರು ಹೊಂದಿರುವ ನಿಕಟ ಸಂಬಂಧದ ಹಿನ್ನೆಲೆಯಲ್ಲಿ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಪತ್ರಿಕಾ ರಂಗದ ಪ್ರಮುಖರನ್ನು ಒಳಗೊಂಡಂತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಒಬ್ಬ ಖಂಡಿತವಾದಿ ಪರಮ ನಿಷ್ಠುರಿ, ಹಳ್ಳಿಯ ಪ್ರಶಾಂತ ವಾತಾವರಣದಲ್ಲಿ ಹುಟ್ಟಿ ಬೆಳೆದು ಬಾಳಿ, ವಿಧಾನಸೌಧ–ಸಂಸತ್‌ನ ಜನತಾಂತ್ರಿಕ ಕಾರಿಡಾರ್‌ಗಳಲ್ಲಿ ಅಧ್ಯಯನ, ಆಡಳಿತ ಮುಂತಾದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ ಅಪಾರ ಅನುಭವ ಪಡೆದಿರುವ ಸಾದಾ ಸೀದಾ ಹಳ್ಳಿ ಹಕ್ಕಿ ವಿಶ್ವನಾಥ್. ವಾಸ್ತವತೆಯ ತಮ್ಮ ಹರಿತ ಮಾತುಗಳಿಂದ ಹಲವರಿಗೆ ಇಷ್ಟವಾಗುವ, ಕೆಲವರಿಗೆ ಕಣ್ಣುರಿಯಾಗುವ ವಿಶ್ವನಾಥರ ವಿಶ್ವಕ್ಕೀಗ 75ರ ಪರಿಪಕ್ವತೆ. ಇಂತಹ ಒಂದು ಅಮೃತ ಘಳಿಗೆಯಲ್ಲಿ ಹಿರಿಯ ಜೀವ, ನಡೆದ ಹಾದಿಗಳನ್ನು ಆಧರಿಸಿದ ಅವರ ಬದುಕಿನ ಪಯಣದ ಮುಖ್ಯ ಮೈಲುಗಲ್ಲಾದ ಮಾಧ್ಯಮ ಮೈತ್ರಿ. ಅಕ್ಷರಯಾನ, ಸಾಹಿತ್ಯ ಸಾಂಗತ್ಯ ಮುಂತಾದವುಗಳ ಕುರಿತು ವಿಶ್ವನಾಥರನ್ನು ಬಲ್ಲ ಮಾಧ್ಯಮ ಮಿತ್ರರು, ಸಾಹಿತ್ಯ ಸಂಗಾತಿಗಳು, ವಿದ್ವಾಂಸರು ಮತ್ತು ಅವರ ಅಭಿಮಾನಿಗಳೊಂದಿಗೆ ಈ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಕಾರ್ಯಕ್ರಮ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆ ವಹಿಸುವರು. 'ಮಾಧ್ಯಮ ಮೈತ್ರಿಯಾನ' ಕುರಿತು ಹಿರಿಯ ಪತ್ರಕರ್ತರಾದ ಹೆಚ್.ಆರ್.ರಂಗನಾಥ್, ಡಿ.ಉಮಾಪತಿ, ರವೀಂದ್ರ ರೇಷ್ಮೆ, ಬಿ.ಎಂ.ಹನೀಫ್, ಹುಣಸವಾಡಿ ರಾಜನ್, ಕೆ.ಶಿವಕುಮಾರ್ ಮಾತನಾಡುವರು. ಪತ್ರಕರ್ತ ಟಿ.ಗುರುರಾಜ್ ಪ್ರಾಸ್ತಾವಿಕವಾಗಿ ಮಾತನಾಡುವರು ಎಂದರು.

ಮಧ್ಯಾಹ್ನ 2.30ಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ವಿಶ್ವಾಕ್ಷರ ಪಯಣ' ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪ ಮೊಯ್ಲಿ ನೆರವೇರಿಸುವರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸುವರು. ಅಡಗೂರು ಹೆಚ್.ವಿಶ್ವನಾಥ್ ಅಂತರಾಳದ ಮಾತುಗಳನ್ನು ಆಡುವರು. ಕಸಾಪ ರಾಜ್ಯಾಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ವಿಶೇಷ ಅತಿಥಿಯಾಗಿರುವರು. ವಿಶ್ವನಾಥ್ ಅವರ ಕೃತಿಗಳಾದ 'ಆಪತ್‌ಸ್ಥಿತಿಯ ಆಲಾಪಗಳು 'ಕುರಿತು ಡಾ.ಸಿ.ಎಸ್. ದ್ವಾರಕಾನಾಥ್, 'ಹಳ್ಳಿಹಕ್ಕಿಯ ಹಾಡು' ಕುರಿತು ಡಾ.ಬಂಜಗೆರೆ ಜಯಪ್ರಕಾಶ್, 'ಮತಸಂತೆ' ಕುರಿತು ಡಾ.ಸಿ.ಪಿಕೆ, 'ದಿ ಟಾಕಿಂಗ್ ಶಾಪ್' ಕುರಿತು ವಸುಧೇಂದ್ರ, 'ಅಥೆನ್ಸಿನ ರಾಜ್ಯಾಡಳಿತ' ಕುರಿತು ಡಾ.ಶುಭದಾ ಪ್ರಸಾದ್ ಮಾತನಾಡುವರು. ಸಂಜೆ 5.30ಕ್ಕೆ ಅಡಗೂರು ಹೆಚ್.ವಿಶ್ವನಾಥ್ ಜೊತೆ– ಒಂದಿಷ್ಟು ಮಾತುಕತೆ ನಡೆಯಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಸಾಪ ಮಾಜಿ ಅಧ್ಯಕ್ಷರಾದ ಎಂ. ಚಂದ್ರಶೇಖರ್, ಡಾ.ವೈ.ಡಿ.ರಾಜಣ್ಣ ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ ಹಗರಣ, ಭ್ರಷ್ಟಾಚಾರ ಆರೋಪ

ಸರ್ಕಾರ, ಪಕ್ಷದ ಮುಖಂಡರ ಮೇಲೆ ಬಿಜೆಪಿ ಹೈಕಮಾಂಡ್ ಗರಂ

ಬೆಂಗಳೂರು, ಮೇ 6(ಕೆಎಂಶಿ)– ಕಾಂಗ್ರೆಸ್, ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳ ಸುರಿಮಳೆಗೈಯ್ಯುತ್ತಿದ್ದರೂ ತಿರುಗೇಟು ನೀಡುವಲ್ಲಿ ಸರ್ಕಾರ ಮತ್ತು ಪಕ್ಷದ ನಾಯಕರು ವಿಫಲವಾಗಿರುವುದನ್ನು ಬಿಜೆಪಿ ವರಿಷ್ಠರು ಗಂಭೀರವಾಗಿ ಪರಿಗಣಿಸಿದ್ದಾರೆ.

ಸರ್ಕಾರದ ವಿರುದ್ಧ ಶೇ.40 ಕಮಿಷನ್, ಗೃಹ ಸಚಿವ ಆರಗ ಜ್ಞಾನೇಂದ್ರ ವಿರುದ್ಧ ಟೀಕೆ–ಟಿಪ್ಪಣಿ, ನಂತರ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ ರಾಜೀನಾಮೆ ಪ್ರಕರಣ, ಪಿಎಸ್‌ಐ ನೇಮಕಾತಿ ಹಗರಣ, ಇದೀಗ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅವರ ತೇಜೋವಧೆಗೆ ಕಾಂಗ್ರೆಸ್ ನಾಯಕರು ಬೀದಿಗಿಳಿದಿದ್ದಾರೆ.

ಯಾವ ದಾಖಲೆ ಪುರಾವೆ ಇಲ್ಲದೆ ಪುಂಖಾನು ಪುಂಖವಾಗಿ ಸರ್ಕಾರದ ವಿರುದ್ಧ ಅಸ್ತ್ರಗಳನ್ನು ಪ್ರಯೋಗಿಸಿ, ಜನರ ದಿಕ್ಕುತಪ್ಪಿಸುವ ಕೆಲಸ ನಿರಂತರವಾಗಿ ನಡೆದಿದೆ.

ಇದರಿಂದ ಸರ್ಕಾರ ಮತ್ತು ಪಕ್ಷದ ವರ್ಚಸ್ಸಿಗೆ ದೊಡ್ಡ ಪ್ರಮಾಣದಲ್ಲಿ ಧಕ್ಕೆ ಉಂಟು ಮಾಡುತ್ತಿದ್ದರೂ ಅದನ್ನು ಎದುರಿಸುವ ಶಕ್ತಿ ಮತ್ತು ತಾಕತ್ತು ನಿಮಗಿಲ್ಲವೇ? ಸುಳ್ಳುಗಳನ್ನೇ ಸತ್ಯವೆಂಬಂತೆ ಬಿಂಬಿಸುವಾಗ ಕಾನೂನು ರೀತಿ ಕಠಿಣ ಕ್ರಮಕೈಗೊಳ್ಳಬೇಕಿತ್ತು.

ಇದುವರೆಗೂ ಮೌನ ವಹಿಸಿ ಅಪಪ್ರಚಾರಕ್ಕೆ ಅವಕಾಶ ಕಲ್ಪಿಸಿದಂತಾಗಿದೆ. ಅಲ್ಲದೇ, ಕಾನೂನು ಕ್ರಮ ಜರುಗಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದೆ. ಯಾವುದೇ ವಿಷಯದಲ್ಲಿ ವ್ಯಕ್ತಿ ಮುಖ್ಯ ಅಲ್ಲ. ಪಕ್ಷವೇ ಮುಖ್ಯ ನಿಮ್ಮ ವೈಯಕ್ತಿಕ ವಿಚಾರ ಏನೇ ಇದ್ದರೂ ಬದಿಗಿಟ್ಟು ಪಕ್ಷದ ಪರ ನಿಲ್ಲಬೇಕು.

ಚುನಾವಣಾ ವರ್ಷದಲ್ಲಿ ನೀವೇ ಅವರಿಗೆ ಅಸ್ತ್ರ ಕೊಟ್ಟರೆ ಎಲ್ಲರೂ ಮುಳುಗುತ್ತೇವೆ ಎಂಬುದು ತಿಳಿದಿರಲಿ.

ಹಿಂದೆ ಸಿದ್ದರಾಮಯ್ಯ ಆಡಳಿತದಲ್ಲಿ ಹಲವು ಭ್ರಷ್ಟಾಚಾರದ ಪ್ರಕರಣಗಳಿವೆ. ಅವುಗಳನ್ನು ಬಯಲಿಗೆಳೆದು ಪ್ರತಿ ಅಸ್ತ್ರಗಳನ್ನಾಗಿ ಬಳಸಿ ಎಂಬ ಸೂಚನೆ ನೀಡಿದೆ.

ಗೃಹ ಸಚಿವ ಅಮಿತ್ ಶಾ ರಾಜ್ಯ ಭೇಟಿ ಸಂದರ್ಭದಲ್ಲಿ ಈ ವಿದ್ಯಮಾನಗಳ ಬಗ್ಗೆ ತಿಳಿದೇ ಪದಾಧಿಕಾರಿಗಳ ಹಾಗೂ ಕೋರ್ ಕಮಿಟಿ ಸಭೆ ನಡೆಸದೇ ಪರಿಸ್ಥಿತಿ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಛಾಟಿ ಬೀಸಿದರೂ ನಿಮಗೆ ಅರ್ಥವಾಗಿಲ್ಲವೇ? ಎಂದು ಪ್ರಶ್ನಿಸಿದೆ.

ದೆಹಲಿಯ ಪ್ರಮುಖ ನಾಯಕರೊಬ್ಬರು, ಮುಖ್ಯ ಮಂತ್ರಿ, ರಾಜ್ಯಾಧ್ಯಕ್ಷ ಹಾಗೂ ಹಿರಿಯ ಸಚಿವರನ್ನು ಸಂಪರ್ಕಿಸಿ ಅಸಮರ್ಥತೆಯ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಇದರ ತೀವ್ರತೆಯ ಬಿಸಿ ತಿಳಿದ ನಂತರವೇ ಅಶ್ವತ್ಥನಾರಾಯಣ ಹಾಗೂ ಪಿಎಸ್‌ಐ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗೃಹ ಸಚಿವ ಆರಗಜ್ಞಾನೇಂದ್ರ, ಕಂದಾಯ ಸಚಿವ ಆರ್.ಅಶೋಕ್ ಸೇರಿದಂತೆ ಹಲವು ಸಚಿವರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದಿದ್ದಾರೆ.



ಮೈಸೂರು ತಾಲೂಕು ಆಲನಹಳ್ಳಿಯಲ್ಲಿ ಆಚರಿಸಲಾಗದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿದರು. ಈ ಸಂದರ್ಭದಲ್ಲಿ ವಿಚಾರವಾದಿ ಹ.ರಾ.ಮಹೇಶ್, ಸಮಾಜ ಸೇವಕ ಬಿ.ಗಣೇಶ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ರವಿ, ಮಧು, ಕುಮಾರ್, ಬಾಬು, ಗೋವಿಂದ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ಭಾಗದಲ್ಲಿ ಬಿಜೆಪಿಗೆ ಭವಿಷ್ಯವಿಲ್ಲ

ಮೈಸೂರು, ಮೇ 6(ಎಂಟಿವೈ)– ಮುಂಬರುವ ಚುನಾವಣೆಯಲ್ಲಿ ಎಷ್ಟೇ ಕಸರತ್ತು ಮಾಡಿದರೂ ಮೈಸೂರು ಭಾಗದಲ್ಲಿ ಬಿಜೆಪಿ ಗೆಲುವು ಅಸಾಧ್ಯ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಭವಿಷ್ಯ ನುಡಿದ್ದಾರೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಮೈಸೂರು ಭಾಗದಲ್ಲಿ ಬಿಜೆಪಿ ಹೆಚ್ಚು ಸ್ಥಾನ ಗಳಿಸುವ ಹಗಲು ಕನಸು ಕಾಣುತ್ತಿದೆ. ಈಗಾಗಲೇ ದುರಾಡಳಿತ, ಮಿತಿ ಮೀರಿದ ಭ್ರಷ್ಟಾಚಾರದಿಂದಾಗಿ ಬಿಜೆಪಿ ಕಾರ್ಯಕರ್ತರಿಗೆ ಭ್ರಮನಿರಸನವಾಗಿದೆ. ಬಿಜೆಪಿ ನಾಯಕಿ ದಿವ್ಯಾ ಅವರು ಪಿಎಸ್‌ಐ ಅಕ್ರಮದಲ್ಲಿ ನಡೆಸಿರುವ ದಂಧೆ ಹಾಗೂ ಅದಕ್ಕೆ ಸಚಿವರು ಸಾಥ್ ನೀಡಿರುವುದು ಬಿಜೆಪಿ ಬಣ್ಣವನ್ನು ಬಯಲು ಮಾಡಿದೆ. ಈ ನಿಟ್ಟಿನಲ್ಲಿ ಮಂಬರುವ ದಿನಗಳಲ್ಲಿ ಬಿಜೆಪಿಗೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ. ಅಲ್ಲದೆ, ಮೈಸೂರು ಭಾಗದಲ್ಲಿ ಎಷ್ಟೇ ದೊಡ್ಡ ಲೀಡರ್‌ಗಳು ಬಂದರೂ ಬಿಜೆಪಿಗೆ ಹಿನ್ನಡೆಯಾಗುವುದು ಖಚಿತ ಎಂದರು.

ನರೇಂದ್ರ ಬಾಬು ಹೇಳಿಕೆಗೆ ಖಂಡನೀಯ: ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧಿಸಲು ಹಿಂದುಳಿದ ವರ್ಗಗಳ ಜನರಿಗೆ ಬಿಜೆಪಿಯಿಂದ ಮಾರ್ಗದರ್ಶನ, ತರಬೇತಿ ಕೊಡಿಸಲಾಗುವುದೆಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ನೆ.ಲ. ನರೇಂದ್ರ ಬಾಬು ಬಾಲಿಶ ಹೇಳಿಕೆ ನೀಡಿದ್ದಾರೆ. ಈ ಮೂಲಕ ಗ್ರಾಮೀಣ ಜನರ ಆತ್ಮಗೌರವಕ್ಕೆ ಚ್ಯುತಿ ತಂದಿದ್ದಾರೆ ಎಂದು ದೂರಿದರು.

ಮೆಡಿಕಲ್ ಕೋರ್ಸ್‌ಗಳಿಗೆ ಅರ್ಜಿ ಅವಧಿ ವಿಸ್ತರಣೆ

ಮೈಸೂರು, ಮೇ 6– ಮೆಡಿಕಲ್ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಮೆಡಿಕಲ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಮೇ 31 ರವರೆಗ ವಿಸ್ತರಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ವೆಬ್‌ಸೈಟ್ www.ssp.postmatric.karnataka.gov.in ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದು ಇಲಾಖೆಯ www.bcwd.karnataka.gov.in ವೆಬ್‌ಸೈಟ್ ಮೂಲಕ 2022ರ ಮೇ 31ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿಗಾಗಿ ಇಮೇಲ್ ಐಡಿ: postmetrichelpdesk @karnataka.gov.in ಹಾಗೂ ದೂರವಾಣಿ ಸಂಖ್ಯೆ :080–35254757 ಸಂಪರ್ಕಿಸಬಹುದು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ತಿಳಿಯಲು ಹೆಚ್ಚಿನ ಮಾಹಿತಿಗಾಗಿ www.bcwd.karnataka.gov.in ವೆಬ್‌ಸೈಟ್, ಇಮೇಲ್ ಐಡಿ: Bcwd.scholarship@karnataka.gov.in ಅಥವಾ ಸಹಾಯವಾಣಿ ಸಂಖ್ಯೆ: 8050770005, 8050770004 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.05.2022 ಶನಿವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಷಷ್ಠೀ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ :** ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಮಾರಿಯಮ್ಮನವರ ಕರಗ ದೇವಸ್ಥಾನದಿಂದ ಹೊರಟು ಮಾನಸ ರಸ್ತೆ ಮೂಲಕ ಶ್ರೀಕುಪ್ಪಮ್ಮ ದೇವಸ್ಥಾನ, ಲಕ್ಷ್ಮೀದೇವಸ್ಥಾನದ ಮಾರ್ಗವಾಗಿ ಇಟ್ಟಿಗೆಗೂಡಿನ ಬೀದಿಗಳಲ್ಲಿ ಮೆರವಣಿಗೆ, ಸ್ಥಳ: ಟ್ರಸ್ಟ್, ಇಟ್ಟಿಗೆಗೂಡು, ಬೆಳಗ್ಗೆ 7 ಗಂಟೆಗೆ

■ **ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ, ರಂಗಾಯಣ :** ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಖ್ಯಾತ ವ್ಯಂಗ್ಯಚಿತ್ರಕಾರ ಹಾಗೂ ಫುಲ್ ಬ್ರೈಟರ್ ಎಂ.ವಿ. ನಾಗೇಂದ್ರ ಬಾಬು (ಬ್ಯಾಂಟರ್‌ಬಾಬು) ಅವರ 'ಕಾರ್ಟೂನ್ ಕುಂಚದಲ್ಲಿ ಕೊರೊನಾ' ವ್ಯಂಗ್ಯಚಿತ್ರಗಳ ಪ್ರದರ್ಶನ, ಸ್ಥಳ: ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಚಳವಳಿಗಾರರ ಸಂಘ :** ಕನ್ನಡ ಹಬ್ಬ ಹಾಗೂ ಕನ್ನಡ ಸೇವಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಪ್ರಶಸ್ತಿ ಪ್ರದಾನ : ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ. ಎಸ್.ಪಿ. ಯೋಗಣ್ಣ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಪಾಲಿಕೆ ಸದಸ್ಯ ಕೆ.ಪಿ.ಶ್ರೀಧರ್, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ, ಬೆಳಗ್ಗೆ 9.30 ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರನಾಮಾರ್ಚನೆ, ಬೆಳಗ್ಗೆ 11.30 ರಿಂದ ಮಹಾಮಂಗಳಾರತಿ, ರಾಜಾಶೀರ್ವಾದ ಮತ್ತು ಪ್ರಸಾದ ವಿನಿಯೋಗ, ಬೆಳಗ್ಗೆ 10.30 ಗಂಟೆಗೆ ವಾರ್ಷಿಕೋತ್ಸವ ಉದ್ಘಾಟನೆ ಹಾಗೂ ಉಪನ್ಯಾಸ, ವಿದ್ವಾನ್ ಸಿ.ಎ. ಶ್ರೀಧರ್ ಅವರಿಂದ ಮಂತ್ರ ಪುಷ್ಪ, ಅಧ್ಯಕ್ಷತೆ : ಶ್ರೀ ಶಂಕರ ಜಯಂತಿ ಸಭಾ ಅಧ್ಯಕ್ಷ ಹೆಚ್.ಆರ್. ಸುಂದರೇಶನ್, ವಿಶೇಷ ಆಹ್ವಾನಿತರು: ಮಾಜಿ ಮೇಯರ್ ಆರ್. ಲಿಂಗಪ್ಪ, ಪಾಲಿಕೆ ಸದಸ್ಯೆ ವೇದಾವತಿ, ಸಂಜೆ 5.45 ರಿಂದ ವಿದುಷಿ ಡಾ. ವೀಣಾರವಿಕುಮಾರ್ ಮತ್ತು ವೃಂದದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ, 2ನೇ ಮುಖ್ಯ ರಸ್ತೆ, ಸರಸ್ವತಿಪುರಂ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದುಷಿ ದಿವ್ಯಾ ಗಿರಿಧರ್ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.

■ **ಗಾನ ಚಂದನ ಕಲಾಬಳಗ :** ಡಾ. ಪಿ.ಬಿ. ಶ್ರೀನಿವಾಸ್ ಒಂದು ನೆನಪು, ಹಳೆಯ ಕನ್ನಡ ಚಲನಚಿತ್ರ ಗೀತೆಗಳ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ನಂಜು ಮಳಿಗೆ ವೃತ್ತ, ಸಂಜೆ 5ಕ್ಕೆ.

■ **ನಟನ ರಂಗಶಾಲೆ :** ರಜಾಮಜಾ ಮಕ್ಕಳ ಬೇಸಿಗೆ ಶಿಬಿರ, ಉಪಸ್ಥಿತರು : ಗಾಯಕ ವಿಜಯ್ ಪ್ರಕಾಶ್, ಪೊಲೀಸ್ ಇನ್ಸ್‌ಪೆಕ್ಟರ್ ಕೆ. ಷಣ್ಮುಗ ವರ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹನೂರು ಚೆನ್ನಪ್ಪ, ಸಮಾಜ ಸೇವಕರಾದ ಮಾಲಿನ ಆರ್. ಪಾಲಾಕ್ಷ, ಚಲನಚಿತ್ರ ನಟ ಪೃಥ್ವಿ ಅಂಬೂರ್, ನಟಿ ಖುಷಿ ರವಿ, ಗಾಯಕ ಎಂ.ಆರ್. ಶ್ರೀಹರ್ಷ, ಪ್ರಭಾಕರ್ ರಾವ್, ನಟನ ಸಂಸ್ಥೆ ಅಧ್ಯಕ್ಷ ಕೆ.ಎಸ್. ಆನಂದಕುಮಾರ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 5.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಯೂನಿವರ್ಸಲ್ ಅಕಾಡೆಮಿ ಮತ್ತು ಮೈಸೂರು ಸ್ನೇಹ ಬಳಗ :** ವಿವಿಧ ಗಣ್ಯರಿಗೆ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮುಖ್ಯ ಅತಿಥಿಗಳು : ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ದಂತವೈದ್ಯ ಡಾ.ಎಸ್.ಪಿ. ಲೋಕೇಶ್, ಉದ್ಯಮಿ ಡಿ.ಕೆ.ಸ್ವಾಮಿಗೌಡ, ಕಾರ್ಪೊರೇಟರ್ ಎಂ.ಶಿವಕುಮಾರ್, ಮಹಿಳಾ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಹೇಮಾವತಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ರಾಜ್ಯ ಡಿ.ಗ್ರೂಪ್ ನೌಕರರ ಸಂಘದ ಅಧ್ಯಕ್ಷ ಡಾ.ಸಿ.ವೆಂಕಟೇಶ್, ವಕೀಲ ತಮ್ಮಣ್ಣಗೌಡ, ಕೆಎಸ್‌ಹೆಚ್‌ಡಿಸಿ ವ್ಯವಸ್ಥಾಪಕ ಸಿ.ಪುಟ್ಟಸ್ವಾಮಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಸಂಜೆ 5.30ಕ್ಕೆ

■ **ಮೈಸೂರು ಉತ್ಸವ:** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ವಿಪ್ರ ಜಾಗೃತಿ ವೇದಿಕೆ :** ಶ್ರೀ ಶಂಕರಾಚಾರ್ಯರ ಬೃಹತ್ ಮೆರವಣಿಗೆ, ಉಪಸ್ಥಿತರು : ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಪಾಲಿಕೆ ಸದಸ್ಯ ಮಾ.ವಿ. ರಾಂಪ್ರಸಾದ್, ವಿಪ್ರ ಮುಖಂಡರಾದ ಡಿ.ಟಿ. ಪ್ರಕಾಶ್, ರಘುರಾಂ ವಾಜಪೇಯಿ, ಸ್ಥಳ: ಆವನಿ ಶಂಕರ ಮಠ, ವಿದ್ಯಾರಣ್ಯಪುರಂ, ಸಂಜೆ6ಕ್ಕೆ

■ **ರಂಗಾಯಣ :** ರಂಗಾಯಣದ ಸರ್ವರಿಗೂ ಸಂವಿಧಾನ ತಂಡದಿಂದ ಸೂತ್ರಧಾರ ನಾಟಕ ಪ್ರದರ್ಶನ, ರಚನೆ : ಎಸ್. ರಾಮನಾಥ, ಸಂಗೀತ : ಆರ್.ಸಿ. ಧನಂಜಯ, ನಿರ್ದೇಶನ : ಮಹೇಶ್ ಕಲ್ಲತ್ತಿ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಸೋಸಲೆ ಗ್ರಾಮದಲ್ಲಿಂದು, ತಿ. ನರಸೀಪುರ ತಾ.

■ **ಶ್ರೀ ವ್ಯಾಸರಾಜಮಠ (ಸೋಸಲೆ) :** ಶ್ರೀ ವ್ಯಾಸರಾಜ ಗುರುಸಾರ್ವಭೌಮರ ವರ್ಧಂತಿ ಮಹೋತ್ಸವ, ಬೆಳಗ್ಗೆ8.30 ರಿಂದ ಮಂಗಳವಾದ್ಯ, ಶ್ರೀಮಠದ ಪೂರ್ವಯತಿಗಳ ಭವ್ಯ ಮೆರವಣಿಗೆ, ಬೆಳಗ್ಗೆ 9ಕ್ಕೆ ಪ್ರತಿಷ್ಠಾಂಗ ಹೋಮಗಳು, ಪೂರ್ಣಾಹುತಿ, ತೀರ್ಥಪ್ರಸಾದ, ಮಧ್ಯಾಹ್ನ 3ಕ್ಕೆ ಶ್ರೀ ವ್ಯಾಸರಾಜರ ವರ್ಧಂತಿ ಪ್ರಯುಕ್ತ ದಾಸಸಾಹಿತ್ಯ ಗೋಷ್ಠಿ, ಅಧ್ಯಕ್ಷತೆ : 1008 ಶ್ರೀ ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು–ವಚನಕಾರರ ಪರಿಚಯಾತ್ಮಕ ಕಾರ್ಯಕ್ರಮ, ಲೇಖನ ಮತ್ತು ಪ್ರಸ್ತುತಿ–ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಲೇಖನ–ಡಿ. ಸತೀಶ್ ಚಂದ್ರ, ಶ್ರೀನಿವಾಸ ಉಡುಪ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 7.15 ತ್ಯಾಜ್ಯ ನಿಭಾಯಿಸುವ ರೀತಿ–ಪ್ರಾಯೋಜಿತ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಡಾ.ಸಿ.ಎ. ಶ್ರೀಧರ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45ಜನಪದಗೀತೆ–ಮಾದಮ್ಮ ಮತ್ತು ತಂಡ, 1.20 ಭಾವಗೀತೆ, 3.35 ಮಕ್ಕಳ ಮಂಟಪ– ಅಮೃತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 4.30 ನೆನಪಿನಂಗಳ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಜನಪದ ಸಂಗೀತ–ಮದ್ದೂರಮ್ಮ ಮತ್ತು ತಂಡ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ವಿದುಷಿ ವಿ. ಸರಸ್ವತಿ–ಹಾಡುಗಾರಿಕೆ, 11.00 ಸವಿನೆನಪು

ಶಾಲೆಗಳ ಆರಂಭಕ್ಕೆ ಇನ್ನು 10 ದಿನ ಬಾಕಿ
ಪಠ್ಯ ಪುಸ್ತಕಗಳ ಪೂರೈಕೆಯೇ ಆಗಿಲ್ಲ
ಮುದ್ರಣಾಲಯಗಳಿಗೆ ದಂಡ ಎಚ್ಚರಿಕೆ

ಬೆಂಗಳೂರು, ಮೇ 6– ಸರ್ಕಾರಿ ಪಠ್ಯ ಪುಸ್ತಕಗಳನ್ನು ಕಾಲಮಿತಿಯಲ್ಲಿ ಪೂರೈಕೆ ಮಾಡುವಂತೆ ಮುದ್ರಣಾಲಯ ಮಾಲೀಕರಿಗೆ ಶಿಕ್ಷಣ ಇಲಾಖೆ ಎಚ್ಚರಿಕೆ ರವಾನಿಸಿದೆ. ಕಾಲಮಿತಿಯಲ್ಲಿ ಪಠ್ಯ ಪುಸ್ತಕಗಳನ್ನು ಪೂರೈಕೆ ಮಾಡದಿದ್ದರೆ ದಂಡ ವಿಧಿಸುವ ಸಂದೇಶವನ್ನು ರವಾನಿಸಲಾಗಿದೆ. ರಾಜ್ಯದಲ್ಲಿ ಮೇ. 16 ರಿಂದ ಶಾಲೆಗಳನ್ನು ಪ್ರಾರಂಭ ಮಾಡುವಂತೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಇನ್ನು ಶಾಲೆಗಳ ಆರಂಭಕ್ಕೆ ಹತ್ತು ದಿನ ಬಾಕಿ ಇದೆ. ಶಾಲೆ ಪ್ರಾರಂಭ ಸಮೀಪಿಸಿದ್ದರೂ, ಪಠ್ಯ ಪುಸ್ತಕಗಳು ಶಾಲೆಗಳಿಗೆ ತಲುಪಿಲ್ಲ. ಎರಡು ವರ್ಷದಿಂದ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಲಿಕೆಗೆ ಒತ್ತು ನೀಡುವ ಕಾರಣದಿಂದ ಶಾಲೆಗಳ ತ್ವರಿತ ಆರಂಭಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಇದೀಗ ಪಠ್ಯ ಪುಸ್ತಕಗಳು ಕೈಗೆ ಸಿಗದೇ ಇದ್ದಲ್ಲಿ ಶಾಲೆ ತೆರೆದರೂ ಪ್ರಯೋಜನವಿಲ್ಲ ಎಂಬಂತಾಗುತ್ತದೆ.

ಕೊರೊನಾ ಮತ್ತು ರಷ್ಯಾ ಉಕ್ರೇನ್ ಯುದ್ಧದ ಪರಿಣಾಮ ಮುದ್ರಣ ಕಾಗದದ ಬೆಲೆ ಗಗನಕ್ಕೇರಿದೆ. ಪಠ್ಯ ಪುಸ್ತಕ ಮುದ್ರಣದ ಗುತ್ತಿಗೆ ಮುನ್ನ ಇರುವ ಬೆಲೆಗೆ ಹೋಲಿಸಿದರೆ ದುಪ್ಪಟ್ಟು ಜಾಸ್ತಿಯಾಗಿದೆ. ಅಷ್ಟು ಬೆಲೆ ಕೊಟ್ಟರೂ ಪೇಪರ್ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿಲ್ಲ. ಹೀಗಾಗಿ ಪಠ್ಯ ಪುಸ್ತಕ ಮುದ್ರಣ ಗುತ್ತಿಗೆ ಪಡೆದ ಮುದ್ರಣಕಾರರು ಇದೀಗ ಸಂಕಷ್ಟದಲ್ಲಿ ಸಿಲುಕಿದ್ದಾರೆ. ನಷ್ಟವಾದರು ಪರವಾಗಿಲ್ಲ, ಕಾಲಮಿತಿಯಲ್ಲಿ ಪುಸ್ತಕ ಕೊಡಲು ಮುದ್ರಣ ಪೇಪರ್ ಲಭ್ಯವಾಗುತ್ತಿಲ್ಲ ಎಂದು ಮುದ್ರಣಾಲಯ ಮಾಲೀಕರು ಕಷ್ಟ ತೋಡಿಕೊಂಡಿದ್ದಾರೆ.

ದಂಡ ಕಟ್ಟಬೇಕಾದ ಪರಿಸ್ಥಿತಿ: ಪಠ್ಯ ಪುಸ್ತಕಗಳನ್ನು ಕಾಲಮಿತಿಯಲ್ಲಿ ಪೂರೈಕೆ ಮಾಡದೆ ಮುದ್ರಣಾಲಯಗಳು ವಿಳಂಬ ಮಾಡುತ್ತಿವೆ. ಮತ್ತಷ್ಟು ವಿಳಂಬವಾದರೆ ಅದಕ್ಕೆ ಮುದ್ರಣಾಲಯ ಮಾಲೀಕರನ್ನು ಹೊಣೆ ಮಾಡಲಾಗುತ್ತದೆ. ಮುದ್ರಣಾಲಯ ಮಾಲೀಕರ ಮನವಿ ಮೇರೆಗೆ ಹಲವು ಬದಲಾವಣೆ ತಂದಿದ್ದೇವೆ. ಇಷ್ಟಾಗಿಯೂ ಪಠ್ಯ ಪುಸ್ತಕ ಕಾಲಕ್ಕೆ ಸರಿಯಾಗಿ ಪೂರೈಕೆ ಮಾಡಿಲ್ಲ ಅಂದರೆ ದಂಡ ವಿಧಿಸಬೇಕಾಗುತ್ತದೆ ಎಂದು ಶಿಕ್ಷಣ ಸಚಿವ ಬಿ. ಸಿ. ನಾಗೇಶ್ ಎಚ್ಚರಿಕೆ ನೀಡಿದ್ದಾರೆ.

ಬಾಗಿಲು ತೆರೆದ ಕೇದಾರನಾಥ ದೇವಾಲಯ

ಕೇದಾರನಾಥ, ಮೇ 6– ಉತ್ತರಾಖಂಡದ ಕೇದಾರನಾಥ ದೇವಾಲಯದ ಬಾಗಿಲನ್ನು ಧಾರ್ಮಿಕ ವಿಧಿಗಳು ಮತ್ತು ವೇದ ಪಠಣದೊಂದಿಗೆ ಯಾತ್ರಾರ್ಥಿಗಳಿಗಾಗಿ ತೆರೆಯಲಾಯಿತು.



ಕೇದಾರನಾಥ ದೇವಸ್ಥಾನಕ್ಕೆ ಆಗಮಿಸಿದ್ದ ಉತ್ತರಾಖಂಡ ಸಿಎಂ ಪುಷ್ಕರ್ ಸಿಂಗ್ ಧಾಮಿ ಮತ್ತು ಪತ್ನಿ, ಹಾಗೂ 10 ಸಾವಿರಕ್ಕೂ ಹೆಚ್ಚು ಮಂದಿ ಈ ಶುಭ ಗಳಿಗೆಗೆ ಸಾಕ್ಷಿಯಾಗಿದ್ದರು. ಇದಕ್ಕೂ ಮೊದಲು, ಮೇ 3 ರಂದು, ಅಕ್ಷಯ ತೃತೀಯ ದಿನದಂದು ಗಂಗೋತ್ರಿ ಧಾಮ್ ಮತ್ತು ಯಮುನೋತ್ರಿ ಧಾಮದ ಪೋರ್ಟಲ್‌ಗಳನ್ನು ತೆರೆಯುವ ಮೂಲಕ ಚಾರ್ ಧಾಮ್ 2022 ರ ಯಾತ್ರೆಗೆ ಅನುವು ಮಾಡಿಕೊಟ್ಟಿತು.

ಏತನ್ಮಧ್ಯೆ, ಕೋವಿಡ್ –19 ಸಾಂಕ್ರಾಮಿಕ ರೋಗವನ್ನು ಗಮನದಲ್ಲಿಟ್ಟುಕೊಂಡು ಚಾರ್ ಧಾಮ್ ಯಾತ್ರೆ 2022 ಕ್ಕೆ ಯಾತ್ರಾರ್ಥಿಗಳ ಸಂಖ್ಯೆಯ ಮೇಲೆ ಸರ್ಕಾರವು ದೈನಂದಿನ ಮಿತಿಯನ್ನು ನಿಗದಿಪಡಿಸಿದೆ. ಅಧಿಕಾರಿಗಳು ಕೇದಾರನಾಥ ದೇವಾಲಯದ ದೈನಂದಿನ ಮಿತಿಯನ್ನು 12,000 ಮತ್ತು ಬದರಿನಾಥಕ್ಕೆ 15,000 ಮಂದಿಗೆ ನಿಗದಿಪಡಿಸಿದ್ದಾರೆ.

ಆದಾಗ್ಯೂ, ಉತ್ತರಾಖಂಡ ಸರ್ಕಾರವು ಚಾರ್ ಧಾಮ್ ಯಾತ್ರೆಗೆ ನೆಗೆಟಿವ್ ವರದಿ ಅಥವಾ ಕೋವಿಡ್ –19 ಲಸಿಕೆ ಪ್ರಮಾಣಪತ್ರ ಕಡ್ಡಾಯವಲ್ಲ ಎಂದು ಹೇಳಿದೆ.

ಮೇ 10ಕ್ಕೆ ಗುರುದರ್ಶನ

ಮೈಸೂರು, ಮೇ 6– ಮೈಸೂರಿನ ಚಾಮುಂಡಿಪುರಂ ಜೆಎಲ್‌ಬಿ ರಸ್ತೆಯ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಕಟ್ಟಡ(ಶಾರದಾ ನಿಕೇತನ)ದಲ್ಲಿ ಮೇ 10ರಂದು ಬೆಳಿಗ್ಗೆ 9ರಿಂದ 10ರವರೆಗೆ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳ ಗುರುದರ್ಶನ ಇರಲಿದೆ. ಆ ವೇಳೆ ಭಿಕ್ಷಾ ವಂದನೆ ಏರ್ಪಡಿಸಿದ್ದು, ಭಾಗಿಯಾಗಲು ಮೇ.8ರ ಸಂಜೆ 6 ಗಂಟೆಯೊಳಗೆ ಸಂಘದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಮೇ 8ಕ್ಕೆ ಸಾಮೂಹಿಕ ಗಿರಿಜಾ ಕಲ್ಯಾಣ

ಮೈಸೂರು, ಮೇ 6– ಮೈಸೂರಿನ ದೇವರಾಜ ಮೊಹಲ್ಲಾ ದಿವಾನ್ಸ್ ರಸ್ತೆಯ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಮೇ 8ರಂದು ಬೆಳಿಗ್ಗೆ 10ಕ್ಕೆ ಸಾಮೂಹಿಕ ಗಿರಿಜಾ ಕಲ್ಯಾಣ ಮಹೋತ್ಸವ ಜರುಗಲಿದ್ದು, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿರಲಿದೆ. ಹೆಚ್ಚಿನ ಮಾಹಿತಿಗೆ ಸೋಮಶೇಖರ(ಮೊ:9535413361) ಅವರನ್ನು ಸಂಪರ್ಕಿಸಬಹುದು.

ಸಬ್‌ಇನ್ಸ್‌ಪೆಕ್ಟರ್‌ಗೆ ಮೂಡಿಗೆರೆ ಶಾಸಕ ಕುಮಾರಸ್ವಾಮಿ ಧಮ್ಕಿ
ತಮ್ಮ ಆವಾಜ್‌ಗೆ ಶಾಸಕರು ಸಮರ್ಥನೆ

ಮೂಡಿಗೆರೆ, ಮೇ 6– ತನ್ನ ಅನುಮತಿ ಇಲ್ಲದೇ ಠಾಣೆಯಲ್ಲಿ ಅಧಿಕಾರ ವಹಿಸಿಕೊಂಡ ಸಬ್‌ಇನ್ಸ್‌ಪೆಕ್ಟರ್ ಒಬ್ಬರನ್ನು ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ ಏಕವಚನದಲ್ಲೇ ನಿಂದಿಸಿ, ಠಾಣೆಯಿಂದ ವಾಪಸ್ ಹೋಗುವಂತೆ ಧಮ್ಕಿ ಹಾಕಿದ ಆಡಿಯೋ ವೈರಲ್ ಆಗಿದೆ.





ಚಿಕ್ಕಮಗಳೂರು ತಾಲೂಕು ಮಲ್ಲಂದೂರು ಪೊಲೀಸ್ ಠಾಣೆಗೆ ವರ್ಗಾವಣೆಯಾಗಿ ಬಂದು ಅಧಿಕಾರ ವಹಿಸಿಕೊಂಡ ಸಬ್‌ಇನ್ಸ್‌ಪೆಕ್ಟರ್ ರವೀಶ್ ಜೊತೆ ಮೊಬೈಲ್‌ನಲ್ಲಿ ಮಾತನಾಡಿರುವ ಶಾಸಕರು, 'ನಾನು ನಿನ್ನನ್ನು ಬೇಡ ಅಂದೆನಲ್ಲ ಯಾಕೆ ಬಂದೆ. ಸ್ಟೇಷನ್‌ನಲ್ಲಿ ಇರಬೇಡ ಮರ್ಯಾದೆಯಿಂದ ಬಂದ ದಾರಿಯಲ್ಲೇ ಹೋಗು' ಎಂದಿದ್ದಾರೆ. 'ಐಜಿಪಿಯವರು ಚಾರ್ಜ್ ತೆಗೆದುಕೊಳ್ಳಲು ಹೇಳಿದ್ದಾರೆ ಸರ್' ಎಂದು ಸಬ್‌ಇನ್ಸ್‌ಪೆಕ್ಟರ್ ಹೇಳುತ್ತಿದ್ದಂತೆ 'ಮರ್ಯಾದೆಯಿಂದ ಹೋಗೆ ಲೇ... ಅಲ್ಲೆ ಇದ್ರೆ ಒದ್ದು ಓಡಿಸ್ತೀನಿ, ಐಜಿಪಿಗೆ ಲಂಚ, ಯಾರಿಗೆ ಎಷ್ಟು ಕೊಟ್ಟು ಬಂದಿದ್ದೀಯಾ ನನಗೆ ಗೊತ್ತು ಎಂದು ಶಾಸಕರು ಹೇಳಿದಾಗ ಹಾಗೇನಿಲ್ಲ ಸರ್ ನಿಮ್ಮ ಹತ್ರನೂ ಬರ್ತೀನಿ ಸಾರ್ ಎಂದು ಸಬ್‌ಇನ್ಸ್‌ಪೆಕ್ಟರ್ ಹೇಳುತ್ತಾರೆ. ಆದರೂ ಬಿಡದೇ ಶಾಸಕ ಕುಮಾರಸ್ವಾಮಿ ಐಜಿಪಿ ಮತ್ತು ಸಬ್‌ಇನ್ಸ್‌ಪೆಕ್ಟರ್ ಅನ್ನು ಏಕವಚನದಲ್ಲಿ ನಿಂದಿಸಿದ್ದಾರೆ. ಈ ಆಡಿಯೋ ವೈರಲ್ ಆಗುತ್ತಿದ್ದಂತೆಯೇ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕರು, ನನ್ನ ಗೌರವಕ್ಕೆ ಧಕ್ಕೆ ಬಂದಾಗ ನಾನು ಸುಮ್ಮನಿರುವುದಿಲ್ಲ. ಸಬ್‌ಇನ್ಸ್‌ಪೆಕ್ಟರ್ ಜೊತೆ ಮಾತನಾಡಿದ್ದು ನಿಜ. ಐಜಿಪಿ ದೊಡ್ಡವರೆಂದು ನಾನು ಒಪ್ಪಿಕೊಳ್ಳುವುದಿಲ್ಲ. ಪೊಲೀಸ್ ಇಲಾಖೆಯ ಬಣ್ಣ ಬಯಲು ಮಾಡುತ್ತೇನೆ. ಯಾವ ಯಾವ ಬಾರ್‌ನಿಂದ ಎಷ್ಟು ದುಡ್ಡು ಹೋಗುತ್ತಿದೆ ಎಂದು ನನಗೆ ಗೊತ್ತಿದೆ ಎಂದರು.

2023ರ ಚುನಾವಣೆ ವೇಳೆಗೆ ಹಳೇ ಉಂಡುವಾಡಿಯಿಂದ ಮೈಸೂರಿಗೆ ನೀರು ಪೂರೈಕೆ
ಸಂಸದ ಪ್ರತಾಪ್‌ಸಿಂಹ ಭರವಸೆ

ಮೈಸೂರು, ಮೇ 6 (ಆರ್‌ಕೆ)– ಮಹತ್ವಾಕಾಂಕ್ಷೆಯ ಹಳೇ ಉಂಡುವಾಡಿ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿ ಭರದಿಂದ ನಡೆಯುತ್ತಿದ್ದು, 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣಾ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದ್ದಾರೆ.

ಕಳೆದ ಜೂನ್ ತಿಂಗಳಲ್ಲಿ ಆರಂಭವಾದ ಮೈಸೂರು ನಗರ ಹಾಗೂ ಸುತ್ತಮುತ್ತಲಿನ 92 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಹಳೇ ಉಂಡುವಾಡಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂದಿನ ವರ್ಷ ಚುನಾವಣೆ ವೇಳೆಗೆ ಜನರಿಗೆ ನೀರು ತಲುಪಿಸುತ್ತೇವೆ ಎಂದು ಭರವಸೆ ನೀಡಿದರು.







ಈಗಾಗಲೇ ಜಾಕ್‌ವೆಲ್‌ಗಳು, ನೀರು ಶುದ್ಧೀಕರಣ ಘಟಕ (STP) ಹಾಗೂ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಶೇ.45ರಷ್ಟು ಮುಗಿದಿದ್ದು, ನಿರಂತರವಾಗಿ, ತ್ವರಿತವಾಗಿ ಕೆಲಸ ಸಾಗಿರುವುದರಿಂದ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ, ಮೈಸೂರು ನಗರ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುತ್ತೇವೆ ಎಂದು ಪ್ರತಾಪ್‌ಸಿಂಹ ನುಡಿದರು.

ಜಾಕ್‌ವೆಲ್‌ನಿಂದ ಬೀಚನಕುಪ್ಪೆ ಟ್ರೀಟ್‌ಮೆಂಟ್ ಪ್ಲಾಂಟ್‌ಗೆ ತಲುಪಿದ ನೀರನ್ನು ಶುದ್ಧೀಕರಿಸಿ ಸರಬರಾಜು ಮಾಡಲು ಭೂಮಿಯಲ್ಲಿ ಪೈಪ್‌ಲೈನ್ ಅಳವಡಿಸುವ ಕೆಲಸವೂ ಭರದಿಂದ ಸಾಗಿದೆ. 150 ಎಂಎಲ್‌ಡಿ (Million litres per Day- MLD) ನೀರಿಗೆ ಬೇಡಿಕೆ ಇದೆಯಾದರೂ ಹಳೇ ಉಂಡುವಾಡಿ ಯೋಜನೆಯಲ್ಲಿ ದಿನಕ್ಕೆ 300 ಎಂಎಲ್‌ಡಿ ನೀರನ್ನು ಪೂರೈಸಲು ಸಾಧ್ಯವಾಗುತ್ತದೆ. ಮುಂದಿನ 50 ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಶಾಶ್ವತವಾಗಿ ಮೈಸೂರು ನಗರದಲ್ಲಿ ಎಂತಹ ಪರಿಸ್ಥಿತಿ ಬಂದರೂ ನೀರಿಗೆ ತೊಂದರೆಯಾಗದಂತೆ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದು ತಿಳಿಸಿದರು.

545 ಕೋಟಿ ರೂ.ಗಳ ಈ ಬೃಹತ್ ಯೋಜನೆಗೆ ರಾಜ್ಯ ಸರ್ಕಾರ 264.3 ಕೋಟಿ ರೂ ಅನುದಾನ ಬಿಡುಗಡೆ ಮಾಡಿದೆ ಮೊದಲ ಹಂತದಲ್ಲಿ 350 ಕೋಟಿ ರೂ. ಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕುರಿತು ಗುತ್ತಿಗೆ ಪಡೆದಿರುವ ಬೆಂಗಳೂರಿನ ಶುಭಾ ಸೇಲ್ಸ್ ಸಂಸ್ಥೆಯ ಪ್ರಾಜೆಕ್ಟ್ ಮ್ಯಾನೇಜರ್ ಕೇಶವನಂದ ಅವರು, 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ್ದು, ಈವರೆಗೆ ಶೇ.45ರಷ್ಟು ಕಾಮಗಾರಿ ಮುಗಿದಿದೆ. ಯೋಜನೆಯ ಅನುದಾನದ ಪೂರ್ಣ ಹಣವನ್ನು ಬಿಡುಗಡೆ ಮಾಡುವಂತೆ ನಾವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಈಗ ಅದು ಅನುಮೋದನೆ ಹಂತದಲ್ಲಿದೆ ಎಂದರು.

ಪೂರ್ಣ ಪ್ರಮಾಣದ ಅನುದಾನ ಬಿಡುಗಡೆಯಾದಲ್ಲಿ ಉಳಿದ ಕಾಮಗಾರಿಯೂ ವೇಗವಾಗಿ ನಡೆಯಲಿದೆ. ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮೇಲ್ವಿಚಾರಣೆಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಬೀಚನಕುಪ್ಪೆಯಿಂದ ಮೈಸೂರು ನಗರ 2ನೇ ಹಂತದ ಮಾಸ್ಟರ್ ಬ್ಯಾಲೆನ್ಸಿಂಗ್ ರಿಸರ್ವರ್ (Master Balancing Reservoir-MBR) ಮತ್ತು ಯಾದವಗಿರಿಯ ಹೈ ಲೆವೆಲ್ ಜಲ ಸಂಗ್ರಹಣಾಗಾರ(High Level Reservoir-HLR) ಗಳಿಗೆ ಶುದ್ಧ ನೀರು ಪಂಪ್ ಮಾಡಿ ಅಲ್ಲಿಂದ ವಿವಿಧ ವಸತಿ ಬಡಾವಣೆ ಗಳಿಗೆ ಪೂರೈಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರಿನಿಂದ ಚುಂಚನಕಟ್ಟೆಗೆ ಬೃಹತ್ ಶ್ರೀ ಆಂಜನೇಯಸ್ವಾಮಿ ಮೂರ್ತಿ
31 ಅಡಿ ಎತ್ತರದ ಏಕಶಿಲಾ ಮೂರ್ತಿಗೆ ಸರ್ವ ಧರ್ಮೀಯರಿಂದ ಸ್ವಾಗತ



ಮೈಸೂರಿನ ಸರಸ್ವತಿಪುರಂನಲ್ಲಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೆತ್ತನೆ ಸ್ಥಳದಲ್ಲಿ ಬೃಹತ್ ಆಂಜನೇಯಸ್ವಾಮಿ ಮೂರ್ತಿಗೆ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಲಾಯಿತು.



ಮೈಸೂರು, ಮೇ 6(ಪಿಎಂ)– ಕೆಆರ್ ನಗರ ಕ್ಷೇತ್ರದ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಗ್ರಾಮದ ಶ್ರೀ ಕೋದಂಡ ರಾಮ ಸ್ವಾಮಿ ದೇವಸ್ಥಾನದ ಮುಂಭಾಗ ಪ್ರತಿಷ್ಠಾಪನೆಗೊಳ್ಳಲಿರುವ 31 ಅಡಿ ಎತ್ತರದ ಶ್ರೀ ಆಂಜನೇಯಸ್ವಾಮಿಯ ಏಕಶಿಲಾ ಬೃಹತ್ ಮೂರ್ತಿಯನ್ನು ಮೈಸೂರು ನಗರದಿಂದ ಶುಕ್ರವಾರ ಬೆಳಗ್ಗೆ ಕಳುಹಿಸಿಕೊಡಲಾಯಿತು.

ಅಂದಾಜು 40 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ ಬೃಹತ್ ಮೂರ್ತಿ, 28ರಿಂದ 30 ಟನ್ ತೂಕವಿದ್ದು, ಶಿಲ್ಪಿ ಅರುಣ್ ಯೋಗಿರಾಜ್ ಈ ಮೂರ್ತಿಯ ಕೆತ್ತನೆ ಕಾರ್ಯ ಮಾಡಿದ್ದಾರೆ. ಮೈಸೂರಿನ ಸರಸ್ವತಿಪುರಂನ ಅರುಣ್ ಯೋಗಿರಾಜ್ ಅವರ ಕೆತ್ತನೆ ಸ್ಥಳದಿಂದ ಇಂದು ಬೆಳಗ್ಗೆ ಕ್ರೇನ್ ಸಹಾಯದಿಂದ ತೆರೆದ ಲಾರಿಯ ಮೂಲಕ ಚುಂಚನಕಟ್ಟೆಗೆ ಕೊಂಡೊಯ್ಯಲಾಯಿತು.

ಇದಕ್ಕೂ ಮುನ್ನ ಸದರಿ ಮೂರ್ತಿಗೆ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಸಾ.ರಾ.ಮಹೇಶ್, ಮಾಜಿ ಮೇಯರ್ ಲಿಂಗಪ್ಪ, ಮೈಸೂರು ಜಿಪಂ ಮಾಜಿ ಸದಸ್ಯ ಸಾ.ರಾ.ನಂದೀಶ್, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಮತ್ತಿತರರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ಶಾಸಕ ಸಾ.ರಾ.ಮಹೇಶ್ ಅವರು ಪ್ರವಾಸೋದ್ಯಮ ಸಚಿವರಾಗಿದ್ದ ಸಂದರ್ಭದಲ್ಲಿ ಚುಂಚನಕಟ್ಟೆ ಕ್ಷೇತ್ರದ ಅಭಿವೃದ್ಧಿಗೆ ಒಟ್ಟಾರೆ 12 ಕೋಟಿ ರೂ. ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಿಸಿದ್ದರು. ಅದರಲ್ಲಿ ಈ ಬೃಹತ್ ಮೂರ್ತಿಯನ್ನು 40 ಲಕ್ಷ ರೂ. ವೆಚ್ಚದಲ್ಲಿ ಕೆತ್ತಿಸಲಾಗಿದೆ' ಎಂದು ಸಾ.ರಾ.ಮಹೇಶ್ ಅವರ ಆಪ್ತ ಸಹಾಯಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ಕೆಆರ್ ನಗರ ಪಟ್ಟಣದ ಶ್ರೀ ತೋಪಮ್ಮ ದೇವಿ ದೇವಸ್ಥಾನದ ಆವರಣದಲ್ಲಿ ಪುರ ಪ್ರವೇಶ ಪಡೆದ ಮೂರ್ತಿಯನ್ನು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ಇನ್ನಿತರೆ ಧರ್ಮೀಯರಿಂದ ಜಾತ್ಯತೀತವಾಗಿ ಪುಷ್ಪಾರ್ಚನೆ ಮೂಲಕ ಬರಮಾಡಿಕೊಳ್ಳಲಾಯಿತು. ಬಳಿಕ ಮೂರ್ತಿಯು ಚುಂಚನಕಟ್ಟೆ ತಲುಪಿತು.



ಮೈಸೂರಿನ ನೆರಳು ಟ್ರಸ್ಟ್ ವತಿಯಿಂದ ನಗರದ ಪುರಭವನದಲ್ಲಿ ಆಯೋಜಿಸಿದ್ದ ಕಲಾಕಲರವ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಉದ್ಯಮಿ ಹರೀಶ್ ಶೆಣೈ, ಸಾಹಿತಿ ವೈ.ಸಿ.ಭಾನುಮತಿ, ಉದ್ಯಮಿ ಟಿ.ಎಸ್. ಲೋಕೇಶ್ ಹಾಗೂ ನೆರಳು ಟ್ರಸ್ಟ್ ಸಂಸ್ಥಾಪಕ ಎಸ್. ಕಾರ್ತಿಕ್ ಉಪಮನ್ಯು ಇದ್ದರು.

ಮಂಡ್ಯದಲ್ಲಿ ಬಿಜೆಪಿ ಸಮಾವೇಶ ಸಂಬಂಧ ಚರ್ಚಿಸಿ ತೀರ್ಮಾನ: ಸಿಎಂ
ಎಸ್.ಎಂ.ಕೃಷ್ಣರ 90ನೇ ಹುಟ್ಟು ಹಬ್ಬದ ಅಂಗವಾಗಿ ಅಭಿನಂದನೆ

ಬೆಂಗಳೂರು, ಮೇ6(ಕೆಎಂಶಿ) – ಮಂಡ್ಯದಲ್ಲಿ ಬಿಜೆಪಿ ಪಕ್ಷದ ಸಮಾವೇಶ ನಡೆಸುವ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಅವರು ಇಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಭೇಟಿ ಮಾಡಿ ಸೌಹಾರ್ದಯುತವಾಗಿ ಮಾತುಕತೆ ನಡೆಸಿ ಹುಟ್ಟುಹಬ್ಬದ ಶುಭಾಶಯ ಕೋರಿ ನಂತರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು.



ರಾಜ್ಯದ ಎಲ್ಲಾ ಭಾಗದಿಂದಲೂ ಬಹಳ ಜನ ಬಿಜೆಪಿಗೆ ಬರುತ್ತಿದ್ದಾರೆ. ವಿಶೇಷವಾಗಿ ಕೋಲಾರ, ಮಂಡ್ಯದಿಂದ ಹೆಚ್ಚು ಜನ ಬರುತ್ತಿದ್ದಾರೆ. ಬ್ಯಾಚ್‌ವಾರು ಸೇರ್ಪಡೆ ಮಾಡುವ ಕೆಲಸವಾಗುತ್ತಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಸಾರ್ವಜನಿಕರು ಹಾಗೂ ವಿಶೇಷವಾಗಿ ಯುವಕರು ಪಕ್ಷಕ್ಕೆ ಬರಲು ಒಲವು ತೋರುತ್ತಿದ್ದಾರೆ. ಹೀಗಾಗಿ ಮಂಡ್ಯ ಜಿಲ್ಲೆಯಲ್ಲಿ ಹೊಸ ಯುವ ನಾಯಕತ್ವ ಹೊರಹೊಮ್ಮುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ಬಿಜೆಪಿಯ ಪರವಾಗಿ ಮಂಡ್ಯದಲ್ಲಿ ಬಹಳ ದೊಡ್ಡ ಅಲೆ ಕಾಣುತ್ತಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.


ಯಾರು ನಮ್ಮ ಪಕ್ಷದ ಬಗ್ಗೆ ಹಾಗೂ ಪಕ್ಷದ ವಿಚಾರಗಳ ಬಗ್ಗೆ ಒಲವು ತೋರಿಸಿದ್ದಾರೆಯೋ ಅವರೆಲ್ಲ ಬಳಿ ಮಾತನಾಡಲಾಗುವುದು ಎಂದರು.

90ನೇ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಆರೋಗ್ಯವಂತರಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸಿರುವುದಾಗಿ ಮುಖ್ಯಮಂತ್ರಿಗಳು ಶುಭ ಹಾರೈಸಿದರು. ಅವರ ಮಾರ್ಗದರ್ಶನ ಸರ್ಕಾರ ಮತ್ತು ರಾಜ್ಯದ ಜನತೆಗೆ ದೊರೆಯುವಂತಾಗಲಿ ಎಂದು ತಿಳಿಸಿದರು.

ಮೈಸೂರು ವಿವಿ ಗೌರವ ಡಾಕ್ಟರೇಟ್ ಪುರಸ್ಕೃತ ಜಾನಪದ ಕಲಾವಿದ ಡಾ. ಮಳವಳ್ಳಿ ಮಹದೇವಸ್ವಾಮಿಗೆ ಅಭಿನಂದನೆ
ಕಲಿತ ಕಲೆಯಿಂದ ಜೀವನ ನಿರ್ವಹಣೆ ಮಾಡಿದ ಅನಿವಾರ್ಯತೆ ಅನಾವರಣ

ಮೈಸೂರು,ಮೇ.6(ಜಿಎ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸಪ್ತಸ್ವರ ಸಿಂಚನ ಟ್ರಸ್ಟ್ ಮತ್ತು ಅಮ್ಮ ವಸುಂಧರೆ ಟ್ರಸ್ಟ್ ವತಿಯಿಂದ ಜಾನಪದ ಕಲಾವಿದ ಡಾ.ಎಂ. ಮಳವಳ್ಳಿ ಮಹದೇವಸ್ವಾಮಿ ಅವರನ್ನು ಶುಕ್ರವಾರ ಸಂಜೆ ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಜಾನಪದ ವಾದ್ಯಗಳನ್ನು ನುಡಿಸುವ ಮೂಲಕ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಎಸ್. ಸದಾನಂದ್ ಅವರು ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು, ಇಂದಿನ ಕಾರ್ಯಕ್ರಮದಲ್ಲಿ ಇಬ್ಬರು ಡಾಕ್ಟರ್‌ಗಳಿದ್ದೇವೆ. ನಾನು ಮನುಷ್ಯನ ಶರೀರದ ಕಾಯಿಲೆಗಳಿಗೆ ಚಿಕಿತ್ಸೆ ನೀಡಿದರೆ, ಮಳವಳ್ಳಿ ಮಹದೇವಸ್ವಾಮಿ ಅವರು ಮನುಷ್ಯನ ಮಾನಸಿಕ ಕಾಯಿಲೆ ಮತ್ತು ಸಮಾಜದ ಕಾಯಿಲೆಗಳಿಗೆ ತಮ್ಮ ಸಂಗೀತದ ಮೂಲಕ ಚಿಕಿತ್ಸೆ ನೀಡುತ್ತಿದ್ದಾರೆ. ಇಂದಿಗೂ ಅನೇಕ ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡುವ ಸಮಯದಲ್ಲಿ ಸಂಗೀತವನ್ನು ಬಳಸುತ್ತಾರೆ ಎಂದರು.

ಮಹದೇವಸ್ವಾಮಿ ಅವರ ಮಾತು ಮತ್ತು ಸಂಗೀತ ಮನಸ್ಸಿಗೆ ನಾಟುತ್ತದೆ. ಅಂತಹವರನ್ನು ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್ ಕುಮಾರ್ ಅವರು ಗುರುತಿಸಿ ಡಾಕ್ಟರೇಟ್ ನೀಡಿರುವುದು ಸಂತಸದ ವಿಚಾರವಾಗಿದೆ ಎಂದರು.

ಅಭಿನಂದನೆ ಸ್ವೀಕರಿಸಿದ ಡಾ.ಎಂ. ಮಳವಳ್ಳಿ ಮಹದೇವಸ್ವಾಮಿ ಮಾತನಾಡಿ, ನಾನು ಎಲ್ಲಾ ವೇದಿಕೆಗಳಲ್ಲಿ ತಿಳಿಸಿರುವಂತೆ ಈ ಕಲೆಯನ್ನು ಹೊಟ್ಟೆ ಪಾಡಿಗಾಗಿ ಬಳಸುತ್ತಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ಬಡತನದ ಜೀವನ. ನಾವು ನಡೆದುಬಂದ ಹಾದಿಯನ್ನು ಎಂದಿಗೂ ಮರೆಯಬಾರದು ಎಂದು ಕಿವಿಮಾತು ಹೇಳಿದರು.

ನನ್ನ ಕಲೆಗೆ ಡಾ. ರಾಜ್‌ಕುಮಾರ್ ಅವರು ಚಲನಚಿತ್ರಗಳು ಮತ್ತು ಭಕ್ತಿ ಪ್ರಧಾನ ಗೀತೆಗಳೇ ಮುಖ್ಯ ಪ್ರೇರಣೆಯಾಗಿತ್ತು ಅಂದಿನ ದಿನಗಳಲ್ಲಿ ನಾವು ಒಂದು ಹೊತ್ತಿನ ಊಟಕ್ಕಾಗಿ ರಾತ್ರಿ ಪೂರ್ತಿ ಕಥೆಗಳನ್ನು ಹೇಳುತ್ತಿದ್ದೆವು, ಆದರೆ ಇಂದು ಕೇವಲ ಕೆಲ ಹಾಡುಗಳನ್ನು ಹಾಡಿ ಸಾವಿರಾರು ರೂ. ಗಳನ್ನು ಪಡೆಯುತ್ತಾರೆ. ಇತ್ತೀಚಿನ ಪೀಳಿಗೆಗೆ ಹೊಟ್ಟೆ ತುಂಬ ಊಟವಿರುವುದರಿಂದ ಕಲೆ ಕಲಿಕೆಯಲ್ಲಿ ಆಸಕ್ತಿ ಇಲ್ಲದಂತಾಗಿದೆ ಎಂದು ಬೇಸರವ್ಯಕ್ತಪಡಿಸಿದರು.

ನಾನು ಜಾನಪದ ಉಳಿವಿಗಾಗಿ ಈಗಾಗಲೇ ಟ್ರಸ್ಟ್ ಅನ್ನು ಸ್ಥಾಪಿಸಿದ್ದೇನೆ. ಅದಕ್ಕೆ ಸ್ಥಳದ ಅವಶ್ಯಕತೆ ಇದೆ. ಸರ್ಕಾರ ಸ್ಥಳ ನೀಡಿದರೆ ಅನುಕೂಲವಾಗುತ್ತದೆ. ಕಲಿಕೆಗೆ ಬರುವ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡುವ ಮೂಲಕ ಕಲೆಯನ್ನು ಪೋಷಿಸುವ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಪಾಲಿಕೆ ವಲಯ ಆಯುಕ್ತ ಎಂ.ನಂಜುಂಡಯ್ಯ, ಮಾನಸ ಗಂಗೋತ್ರಿ ಜಾನಪದ ವಿಭಾಗದ ಮುಖ್ಯಸ್ಥ ಪ್ರೊ ನಂಜಯ್ಯ ಹೊಂಗನೂರು, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮೈಸೂರು ಜಿಲ್ಲಾ ಕನ್ನಡ ಜನಪದ ಪರಿಷತ್ ಅಧ್ಯಕ್ಷ ಡಾ.ಹೆಚ್. ಕ್ಯಾತನಹಳ್ಳಿ ಪ್ರಕಾಶ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಕೇಂದ್ರದ ಡಾ.ಕೆ.ಆರ್. ಮಂಜುನಾಥ್, ವಿಷ್ಣು ಏಜೆನ್ಸಿಸ್‌ನ ಶ್ರೀರಾಮ ಭಗವತ್, ಎವಿಎಸ್‌ಎಸ್ ಸಂಸ್ಥೆ ಅಧ್ಯಕ್ಷ ತುಂಬಲ ರಾಮಣ್ಣ, ಸಪ್ತಸ್ವರ ಸಿಂಚನ ಟ್ರಸ್ಟ್ ಅಧ್ಯಕ್ಷ ಎನ್. ಹರೀಶ್ ಹಾಗೂ ಅಮ್ಮ ವಸುಂಧರೆ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಜಿ. ಅಮ್ಮ ರಾಮಚಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೌಲಂದೆಯಲ್ಲಿ ಆಕ್ಷೇಪಾರ್ಹ ಪ್ರಸ್ತಾಪ: ಇಬ್ಬರ ಬಂಧನ
ಯುವಕರ ವರ್ತನೆಗೆ ಮುಸ್ಲಿಂ ಮುಖಂಡರ ಖಂಡನೆ

ಮೈಸೂರು, ಮೇ 6(ಎಸ್‌ಬಿಡಿ)– ನಂಜನಗೂಡು ತಾಲೂಕು ದೊಡ್ಡ ಕೌಲಂದೆ ಗ್ರಾಮದಲ್ಲಿ ಆಕ್ಷೇಪಾರ್ಹ ಪ್ರಸ್ತಾಪ ಮಾಡಿದ್ದ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಗ್ಯಾರೇಜ್‌ನಲ್ಲಿ ಕೆಲಸ ಮಾಡುವ ಫೈಸ್ ಷರೀಫ್ (22) ಹಾಗೂ ಅನಾನ್ ಅಲಿಖಾನ್ (25)ನನ್ನು ಕೌಲಂದೆ ಠಾಣೆ ಪೊಲೀಸರು ಬಂಧಿಸಿ, ಆಕ್ಷೇಪಾರ್ಹ ಪ್ರಸ್ತಾಪ ಮಾಡಿದ್ದ ಸ್ಥಳಕ್ಕೆ ಆರೋಪಿಗಳನ್ನು ಕರೆದೊಯ್ದು ಮಹಜರು ನಡೆಸಿದರು.

ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ವೈರಲ್ ವಿಡಿಯೋದಲ್ಲಿ ಆಕ್ಷೇಪಾರ್ಹ ಪ್ರಸ್ತಾಪವಿದ್ದ ಧ್ವನಿ ಆಧರಿಸಿ ಇಬ್ಬರು ಆರೋಪಿಗಳನ್ನು ಬಂಧಿಸಿ, ತನಿಖೆ ಮುಂದುವರೆಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಪ್ರಾರ್ಥನೆ ಬಳಿಕ ರಸ್ತೆಯಲ್ಲಿ ಮುಸ್ಲಿಮರ ದೊಡ್ಡ ಗುಂಪು ನೋಡಿದಾಗ ಅಚಾನಕ್ಕಾಗಿ ಬಾಯ್ತಪ್ಪಿನಿಂದ ತಪ್ಪಾಗಿ ಮಾತನಾಡಿದ್ದೇವೆ ಎಂದು ಪೊಲೀಸರ ವಿಚಾರಣೆ ವೇಳೆ ಆರೋಪಿಗಳು ಹೇಳಿದ್ದಾಗಿ ತಿಳಿದುಬಂದಿದೆ. ಗ್ಯಾರೇಜ್‌ನಲ್ಲಿ ಕೆಲಸ ಮಾಡಿಕೊಂಡಿರುವ ಇಬ್ಬರೂ ಯಾವ ಸಂಘಟನೆಗಳಲ್ಲೂ ಗುರುತಿಸಿಕೊಂಡಿಲ್ಲ. ಇವರಿಗೆ ಯಾರೂ ಕುಮ್ಮಕ್ಕು ನೀಡಿದಂತಿಲ್ಲ. ಅಜ್ಞಾನದಿಂದ ಹೀಗೆ ಹೇಳಿರಬಹುದೆಂದು ಮೇಲ್ನೋಟಕ್ಕೆ ತಿಳಿದುಬಂದಿದೆಯಾದರೂ ಆರೋಪಿಗಳ ಪೂರ್ವಾಪರದ ಬಗ್ಗೆ ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ರಂಜಾನ್ ದಿನ ಸಾಮೂಹಿಕ ಪ್ರಾರ್ಥನೆ ಮುಗಿಸಿ ಮನೆಗೆ ತೆರಳುವಾಗ ಗುಂಪಾಗಿದ್ದ ಜನರ ವಿಡಿಯೋ ಚಿತ್ರೀಕರಿಸುವ ವೇಳೆ ಇಬ್ಬರು 'ಕವಲಂದೆ ಬೋಲೆ ತೋ ಛೋಟಾ ಪಾಕಿಸ್ತಾನ್'(ಕವಲಂದೆ ಎಂದರೆ ಪುಟ್ಟ ಪಾಕಿಸ್ತಾನ) ಎಂದು ಹೇಳಿದ್ದರು. ಈ ವಿಡಿಯೋ ವೈರಲ್ ಆಗಿ ತೀವ್ರ ಆಕ್ರೋಶ ವ್ಯಕ್ತವಾಗಿತ್ತು. ಶತ್ರು ರಾಷ್ಟ್ರದ ಪರ ಒಲವು ವ್ಯಕ್ತಪಡಿಸಿರುವ ದುಷ್ಕರ್ಮಿಗಳನ್ನು ಬಂಧಿಸುವಂತೆ ಒತ್ತಾಯ ಕೇಳಿಬಂದಿತ್ತು. ಮುಖ್ಯಮಂತ್ರಿಗಳೂ ಕ್ರಮಕ್ಕೆ ಸೂಚಿಸಿದ್ದರು.

ಮುಠ್ಠಾಳ ದೇಶದ ಹೆಸರು ನಮಗೇಕೆ?: ಗ್ರಾಮದ ಮುಸ್ಲಿಂ ಮುಖಂಡರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಘಟನೆ ಬಗ್ಗೆ ತೀವ್ರ ವಿಷಾದ ವ್ಯಕ್ತಪಡಿಸಿದ್ದಲ್ಲದೆ ಆರೋಪಿಗಳ ವಿರುದ್ಧ ಕಾನೂನಿನಡಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಗ್ರಾಮದ ಮುಖಂಡ ಜಾವಿದ್ ಅಹಮ್ಮದ್ ಮಾತನಾಡಿ, ನಾವು ಭಾರತದಲ್ಲೇ ಹುಟ್ಟಿ ಬೆಳೆದಿರೋರು. ನಮ್ಮ ಏಳೆಂಟು ತಲೆ ಮಾರಿನ ಇತಿಹಾಸ ಗೊತ್ತಿದೆ. ಆ ಇಬ್ಬರು ಹುಡುಗರು ಮಾಡಿದ್ದು ತಪ್ಪು. ನಾವೇ ಅವರನ್ನು ಹಿಡಿದು ಕೊಟ್ಟಿದ್ದೇವೆ. ಸಂವಿಧಾನದಡಿಯಲ್ಲಿ ಅವರಿಗೆ ಶಿಕ್ಷೆ ನೀಡಲಿ. ನಾವು ಭಾರತೀಯರು, ಎಂದೂ ಅಂತಹ ಹೇಳಿಕೆ ನೀಡುವುದಿಲ್ಲ. ಆ ಮುಠ್ಠಾಳ ದೇಶದ ಹೆಸರು ನಮಗೇಕೆ ಬೇಕು? ಎಂದು ಆಕ್ರೋಶದಿಂದ ಪ್ರಶ್ನಿಸಿದರು.

ಕೇಳಿಸಿದ್ದರೆ ತಕ್ಕ ಶಾಸ್ತಿಯಾಗುತ್ತಿತ್ತು: ಪ್ರಾರ್ಥನೆ ಮಾಡಿ ತೆರಳುತ್ತಿದ್ದ ಜನರನ್ನು ನೋಡಿ ಇಬ್ಬರು ಹುಡುಗರು ಛೋಟಾ ಪಾಕಿಸ್ತಾನ್ ಎಂದು ಹೇಳಿದ್ದಾರೆ. ಆ ವೇಳೆ ನಮಗೆ ಕೇಳಿಸಲಿಲ್ಲ, ವಿಡಿಯೋದಲ್ಲಿ ಗೊತ್ತಾಯಿತು. ಹಾಗೆ ಹೇಳಿದ್ದು ನಮಗೇನಾದರೂ ಕೇಳಿಸಿದ್ದರೆ ಅಲ್ಲೇ ಹೊಡೆಯುತ್ತಿದ್ದೆವು. ಖಂಡಿತವಾಗಿ ಆ ಹುಡುಗರು ಮಾಡಿದ್ದು ತಪ್ಪು. ಈ ರೀತಿಯ ಘಟನೆ ಮುಂದೆ ಆಗಬಾರದು ಎಂದು ಎಚ್ಚರಿಕೆ ನೀಡಿದ್ದೇವೆ. ನಾವು ಹುಟ್ಟಿರುವುದು, ಬೆಳೆದಿರುವುದು, ಸಾಯುವುದು, ಮಣ್ಣಾಗುವುದು ಭಾರತದಲ್ಲೇ. ನಾವು ಭಾರತೀಯರು, ಭಾರತೀಯರೇ ಆಗಿರುತ್ತೇವೆ ಎಂದು ಹೇಳಿದ ಮತ್ತೋರ್ವ ಮುಖಂಡರು, ಜೈ ಹಿಂದ್, ಜೈ ಕರ್ನಾಟಕ ಘೋಷಣೆ ಕೂಗಿದರು.

ನಕ್ಕರೆ ಅದೇ ಸ್ವರ್ಗ

ಆತ : "ತಲೆ ಅಷ್ಟೊಂದು ಗಾಯ ಹೇಗಾಂತ್ತೋ?
ಈತ : "ಹೆಂಡ್ತಿ ಹೊಡೆದ್ಲು"
ಆತ : "ಅವಳ್ಯಾಕೆ ಹೊಡೆದಿದ್ದು?
ಈತ : "ಅವಳ ಅಪ್ಪ–ಅಮ್ಮ ನಮ್ಮನೆಗೆ ಬಂದಿದ್ರು, ಹೊರಗೆ ಹೋಗಿ ಅವರಿಗಾಗಿ ಏನಾದ್ರು ತನ್ನಿ ಅಂದ್ಲು. ನಾನು ಆಟೋ ತಗೊಂಡು ಬಂದೆ ಅಷ್ಟೆ!"

ಮೈಸೂರು ಮಿತ್ರ

ಶನಿವಾರ, 7 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನೀವು ಕತ್ತಲನ್ನು ಕಂಡಿದ್ದೀರಿ. ಆದ್ದರಿಂದಲೇ ಬೆಳಕನ್ನು ಅನುಭವಿಸಬಲ್ಲಿರಿ. ನಿಮ್ಮ ಕಣ್ಣುಗಳ ಸ್ವಭಾವವೇ ಅದು. – ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹುಲಿ ಮುಪ್ಪಾದರೂ ಹುಲ್ಲು ಮೇದೀತೆ?

ನಿಮ್ಮ ಪತ್ರಗಳು

ಮೈಸೂರು ನಗರ ಪಾಲಿಕೆ ದುಂದುವೆಚ್ಚಗಳಿಗೆ ಕಡಿವಾಣ ಹಾಕಲಿ...!!

ಮಾನ್ಯರೆ,



ಮೈಸೂರು ನಗರದ ವಾರ್ಡ್ ನಂ 62 ವಿಶ್ವೇಶ್ವರ ನಗರದ ಪ್ರತಿಯೊಂದು ರಸ್ತೆಯ ಕ್ರಾಸ್‌ಗಳಿಗೆ ಸಂಬಂಧಿಸಿದ ಮಾಹಿತಿಗಾಗಿ ಎರಡೆರಡು ನಾಮಫಲಕಗಳನ್ನು ಅಳವಡಿಸಿರುವುದು ಪಾಲಿಕೆಯ ಬೇಜವಾಬ್ದಾರಿಯನ್ನು ಎತ್ತಿ ತೋರಿಸುತ್ತಿದೆ. ಮೊದಲೇ ಪೂರ್ಣ ಮಾಹಿತಿಯನ್ನು ಹೊಂದಿರುವ ನಾಮಫಲಕವನ್ನು ಅಳವಡಿಸಿದ್ದು, ಇತ್ತೀಚೆಗೆ ಅದರ ಪಕ್ಕದಲ್ಲಿಯೇ ಅವಶ್ಯಕತೆ ಇಲ್ಲದಿದ್ದರೂ ಮತ್ತೊಂದು ನಾಮಫಲಕವನ್ನು ಅಳವಡಿಸಿರುವುದು ಸಾರ್ವಜನಿಕರ ತೆರಿಗೆ ಹಣ ಪೋಲಾದಂತೆ ಕಾಣುತ್ತಿದ್ದು, ಪಾಲಿಕೆಯ ಈ ನಡವಳಿಕೆಯಿಂದ ಅನೇಕ ಜನರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಸಾರ್ವಜನಿಕರು ಕಷ್ಟಪಟ್ಟು ದುಡಿದು ತಮ್ಮ ಬೆವರಿನ ಶ್ರಮದ ಹಣವನ್ನು ತೆರಿಗೆ ರೂಪದಲ್ಲಿ ಪಾಲಿಕೆಗೆ ಕಟ್ಟುತ್ತಾರೆ. ಆದರೆ ತೆರಿಗೆ ಹಣ ಸದ್ವಿನಿಯೋಗವಾಗದೆ ದುಂದುವೆಚ್ಚಕ್ಕೆ ಕಾರಣವಾಗುತ್ತಿದೆ. ಪಾಲಿಕೆಯು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದರೆ ಕೂಲಂಕುಷವಾಗಿ ಚರ್ಚಿಸಿ, ವಾಸ್ತವತೆಯನ್ನು ಅರಿತು, ಪರಿಶೀಲಿಸಿ, ಅವಶ್ಯಕತೆಗೆ ಅನುಗುಣವಾಗಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಬೇಕು. ಸಾರ್ವಜನಿಕರ ತೆರಿಗೆಯ ಒಂದೊಂದು ರೂಪಾಯಿಯೂ ಅತ್ಯಮೂಲ್ಯವಾಗಿರುತ್ತದೆ. "ಖರ್ಚು ಮಾಡಬೇಕಾದರೆ ಸಾವಿರ ಸಲ ಯೋಚಿಸಿ ತಮ್ಮ ಸ್ವಂತ ಹಣದಂತೆ" ಎಂದು ತಿಳಿದು ಜವಾಬ್ದಾರಿಯನ್ನು ಅರಿತು, ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡದೆ, ದುಂದು ವೆಚ್ಚವಾಗದಂತೆ ಕಠಿಣ ಕ್ರಮ ಅನುಸರಿಸಿ, ಅಭಿವೃದ್ಧಿ ಯೋಜನೆಗಳಿಗೆ ತೆರಿಗೆ ಹಣ ಸದುಪಯೋಗವಾಗಬೇಕು.

–ಪರಶಿವಮೂರ್ತಿ ಎನ್.ಪಿ, ಸರಗೂರು ತಾ.

ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮವೆಸಗಿದವರಿಗೆ ಶಿಕ್ಷೆ ಕೊಡಿಸಿ

ಮಾನ್ಯರೆ,

ಈಗಾಗಲೇ 545 ಪಿಎಸ್ಐ ನೇಮಕಾತಿಯಲ್ಲಿ ಹಗರಣ ನಡೆದಿರುವುದು ಬೆಳಕಿಗೆ ಬಂದಿದ್ದು, ಸರ್ಕಾರವು ಸಿಐಡಿ ತನಿಖೆ ನಡೆಸುತ್ತಿದೆ. ಹಲವು ಅಭ್ಯರ್ಥಿಗಳು ಹಗರಣದಲ್ಲಿ ಪಾಲ್ಗೊಂಡಿದ್ದಾರೆಂದು ಸ್ವತಃ ಸರ್ಕಾರವು ಪಿಎಸ್ಐ ಪರೀಕ್ಷೆ ಮತ್ತು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ರದ್ದುಪಡಿಸಿ, ಮರು ಪರೀಕ್ಷೆ ನಡೆಸಲು ತೀರ್ಮಾನಿಸಿದೆ.

ಅದರಂತೆ ತನಿಖೆ ವೇಳೆಯಲ್ಲಿ ಬೇರೆ ಬೇರೆ ಇಲಾಖೆಯ ಪರೀಕ್ಷೆಯಲ್ಲಿ ಕೂಡ ಹಗರಣಗಳು ನಡೆದಿರುವುದಾಗಿ ಮಾಧ್ಯಮದ ಮೂಲಕ ತಿಳಿಯಲಾಗಿದೆ.

2021–22ನೇ ಸಾಲಿನ ಅಧಿಸೂಚನೆ ಸಂಖ್ಯೆ 01/ನೇಮಕ–04, 2021/22–21/05/2021 ಮತ್ತು 18/08/21, ಈ ಅಧಿಸೂಚನೆ ಪೊಲೀಸ್ ಕಾನ್‌ಸ್ಟೇಬಲ್ 4000 ಹುದ್ದೆಗಳ ಪರೀಕ್ಷೆಯನ್ನು 24/10/21ರಂದು ನಡೆಸಲಾಗಿದೆ. ಈ ಪರೀಕ್ಷೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಪ್ರಕಟಿಸಿರುತ್ತಾರೆ. ಈ ಪೊಲೀಸ್ ಕಾನ್‌ಸ್ಟೇಬಲ್ 4000 ಹುದ್ದೆ ನೇಮಕಾತಿಯಲ್ಲೂ ಹಗರಣ ನಡೆದಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂಬುದು ನೊಂದ ಅಭ್ಯರ್ಥಿಗಳ ಅಭಿಪ್ರಾಯವಾಗಿದೆ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳ ತನಿಖೆ ನಡೆಸಿ, ಹಗರಣಕ್ಕೆ ಒಳಗಾಗಿದ್ದ ಅಭ್ಯರ್ಥಿಗಳಿಗೆ ಸೂಕ್ತ ಕಠಿಣ ಶಿಕ್ಷೆ ಕೊಡಿಸಿ ಮತ್ತು ನೊಂದ ಅಭ್ಯರ್ಥಿಗಳಿಗೆ ನ್ಯಾಯ ಕೊಡಿಸಿ.

– ನೊಂದ ವಿದ್ಯಾರ್ಥಿಗಳು, ಮೈಸೂರು

ಗುಂಡಿ ಬಿದ್ದ ರಸ್ತೆ ಅಭಿವೃದ್ಧಿಪಡಿಸಿ

ಮಾನ್ಯರೆ,

ಮೈಸೂರು ಗೋಪಾಲಗೌಡ ಆಸ್ಪತ್ರೆಯಿಂದ ಡಿಎಫ್‌ಆರ್‌ಎಲ್‌ವರೆಗಿನ ರಸ್ತೆ, ಗುಂಡಿಗಳಿಂದ ತುಂಬಿದೆ. ಪ್ರತಿ ದಿನ ಈ ರಸ್ತೆಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತಿವೆ. ಗೋಪಾಲಗೌಡ ಆಸ್ಪತ್ರೆ ನಂತರ 3 ಬೃಹತ್ ಅಪಾರ್ಟ್‌ಮೆಂಟ್ ಗಳಿವೆ. ಇಲ್ಲಿ ನಾರಾರು ಕುಟುಂಬಗಳು ವಾಸಿಸುತ್ತಿವೆ. ಇದಲ್ಲದೇ ತಿ.ನರಸೀಪುರ, ಮಳವಳ್ಳಿ, ಕನಕಪುರಗಳಿಗೆ ಈ ರಸ್ತೆಯಿಂದಲೇ ವಾಹನಗಳು ಸಾಗಬೇಕಿದೆ. ದ್ವಿಚಕ್ರ ವಾಹನಗಳು ಬಿದ್ದು ಹಲವರು ಗಾಯಗೊಂಡಿದ್ದಾರೆ. ಬಾರೀ ವಾಹನಗಳ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು ಸಾಕಷ್ಟು ಮಂದಿ ಬಲಿಯಾಗಿದ್ದಾರೆ.

ಹಲವಾರು ಬಾರಿ ನಗರ ಪೊಲೀಸ್ ಆಯುಕ್ತರಿಗೆ, ಮೈಸೂರು ನಗರ ಪಾಲಿಕೆ ಹಾಗೂ ಇಲ್ಲಿಗೆ ಸಂಬಂಧಪಟ್ಟ ಎಂಎಲ್‌ಎ ಹಾಗೂ ಕಾರ್ಪೊರೇಟರ್‌ಗಳಿಗೆ ಮನವಿ ಮಾಡಲಾಗಿದೆ. ಇಷ್ಟು ವಾಹನ ದಟ್ಟಣೆ, ಜನನಿಬಿಡ ರಸ್ತೆಯಾದರೂ ಸರಕಾರ ಜನಗಳ ತೊಂದರೆಗಳನ್ನು ಪರಿಗಣಿಸುತ್ತಿಲ್ಲ. ಕೋಟ್ಯಾಂತರ ರೂಪಾಯಿ ಮನೆ ಕಂದಾಯ, ರೋಡ್ ಟ್ಯಾಕ್ಸ್‌ಗಳನ್ನು ಸರಕಾರ ಜನರಿಂದ ಪಡೆಯುತ್ತಿದೆ. ಹೀಗಿರುವಾಗ ಈ ರಸ್ತೆಯ ಅಭಿವೃದ್ಧಿಯನ್ನು ಯಾರು ಮಾಡಬೇಕು? ಅಧಿಕಾರಿಗಳು ಈ ರಸ್ತೆಯ ವಾಹನಗಳ ದಟ್ಟಣೆ ನೋಡಿದರೆ ಅವರಿಗೆ ಈ ರಸ್ತೆಯ ನವೀಕರಣದ ಅಗತ್ಯ ಗೊತ್ತಾಗುತ್ತದೆ. ಇನ್ನೂ ಹೆಚ್ಚಿನ ಜೀವಹಾನಿಯಾಗುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಇದನ್ನು ಗಮನಿಸುವರೇ?

– ಶ್ರೀಪಾದ ಮಜೂರು, ತಾ.5–4–2022

ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿಗೆ ಸಮರ್ಪಕ ಸಿಬ್ಬಂದಿ ನಿಯೋಜಿಸಲು ಮನವಿ

ಮಾನ್ಯರೆ,

ನನ್ನ ಉಳಿತಾಯ ಖಾತೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿಗೆ ಭೇಟಿ ನೀಡಿದ್ದೆ. ಈ ಪೋಸ್ಟ್ ಆಫೀಸ್‌ನಲ್ಲಿ ವಾರದ ಎಲ್ಲಾ ದಿನಗಳೂ ಒಂದು ಗಂಟೆಗೆ ಕಡಿಮೆಯಿಲ್ಲದಂತೆ ಕಾಯಬೇಕಾದ ಪರಿಸ್ಥಿತಿಯಿದೆ. ಸಾರ್ವಜನಿಕರಿಗೆ ಟೋಕನ್ ನೀಡಿ, ಕುಳಿತುಕೊಳ್ಳಲು ಕುರ್ಚಿಗಳನ್ನು ಹಾಕಿದ್ದಾರೆ. ವಿಪರ್ಯಾಸವೆಂದರೆ 80 ವರ್ಷ ವಯೋಮಾನದವರು ತಮ್ಮ ಸರದಿ ಬರುವವರೆಗೆ ಗಂಟೆಗಟ್ಟಲೇ ಕಾಯುವ ಪರಿಸ್ಥಿತಿಯಿದೆ.

ಪೋಸ್ಟ್ ಮಾಸ್ಟರ್ ಸೇರಿದಂತೆ ಸಿಬ್ಬಂದಿ ಇತರರಿಗಿಂತ ಭಿನ್ನವಾಗಿ ತುಂಬಾ ಸಹಕರಿಸುತ್ತಾರೆ. ಆದರೆ ಸಿಬ್ಬಂದಿ ಕೊರತೆಯೇ ನಿಧಾನಗತಿಗೆ ಕಾರಣ ಎಂಬುದನ್ನು ಅರ್ಥ ಮಾಡಿಕೊಂಡಿದ್ದೇನೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸರಸ್ವತಿಪುರಂ ಪ್ರಧಾನ ಅಂಚೆ ಕಚೇರಿಗೆ ಹೆಚ್ಚಿನ ಸಿಬ್ಬಂದಿ ನಿಯೋಜಿಸುವ ಮೂಲಕ ಹಿರಿಯ ನಾಗರಿಕರಿಗೆ ಹಾಗೂ ಸಾರ್ವಜನಿಕರು ಗಂಟೆಗಟ್ಟಲೇ ಕಾಯುವುದನ್ನು ತಪ್ಪಿಸಬೇಕೆಂದು ಈ ಮೂಲಕ ಮನವಿ.

– ಕೆ.ಎಲ್. ನಾಗರಾಜು, ನಿವೃತ್ತ ಸಹಾಯಕ ಆಯುಕ್ತರು, ಹೂಟಗಳ್ಳಿ.



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಪವಿತ್ರ ತುಳಸಿಯ ಇತಿಹಾಸ; ಔಷಧೀಯ ಗುಣಗಳು

ಸಾಮಾನ್ಯವಾಗಿ ಎಲ್ಲಾ ಹಿಂದೂಗಳ ಮನೆಯಲ್ಲಿಯೂ ತುಳಸಿ ಗಿಡ ಇರುತ್ತದೆ. ತುಳಸಿಯಲ್ಲಿ ರಾಮತುಳಸಿ, ಕೃಷ್ಣತುಳಸಿ, ಶ್ರೀತುಳಸಿ ಎಂಬ ಬಗೆಗಳುಂಟು. ಶ್ರೀತುಳಸಿಯ ಬಣ್ಣ ಹಸಿರಾಗಿರುತ್ತದೆ. ಹಾಗೂ ಕೃಷ್ಣ ತುಳಸಿಯ ಎಲೆ ನೀಲಿ ಮಿಶ್ರಿತ ಕಪ್ಪು ಬಣ್ಣದ್ದಾಗಿರುತ್ತದೆ. ತುಳಸೀ ಗಿಡವು ಭಾರತ, ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ತುಳಸೀ ಗಿಡಗಳ ಎತ್ತರ ಒಂದಡಿಯಿಂದ ಆರಂಭವಾಗಿ ಮೂರು ಅಡಿಗಳವರೆಗೂ ಇರುವುದುಂಟು. ತುಳಸಿ ಗಿಡದಲ್ಲಿ ಗೊಂಚಲಿನ ರೂಪದಲ್ಲಿ ಬೀಜಗಳು ಇರುತ್ತವೆ. ಎಳೆಯದು ಹಸಿರು ಬಣ್ಣದ್ದಾಗಿದ್ದು, ಗಿಡ ಬಲಿತ ಮೇಲೆ ಅದು ಸುಮಾರಾಗಿ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಅಂತಹ ಬೀಜಗಳನ್ನು ಭೂಮಿಯಲ್ಲಿ ಹಾಕಿದರೆ ನೂರಾರು ಸಸ್ಯಗಳು ಹುಟ್ಟುತ್ತವೆ. ಹೀಗಾಗಿ ಸಾವಿರಾರು ತುಳಸೀ ಗಿಡಗಳು ಹುಟ್ಟಿಕೊಳ್ಳುತ್ತವೆ.

ತುಳಸಿ ಗಿಡಕ್ಕೆ ಪೌರಾಣಿಕ ಹಿನ್ನೆಲೆಯೂ ಇದೆ. ದೂರ್ವಾಸ ಮಹರ್ಷಿಗಳ ಶಾಪದಿಂದ ಇಂದ್ರನು ತನ್ನ ಪದವಿಯನ್ನು ಕಳೆದುಕೊಂಡನು. ಸಮುದ್ರ ಮಂಥನವಾದಾಗ ಮೊದಲು ಐರಾವತ ಹಾಗೂ ಹದಿನಾಲ್ಕು ರತ್ನಗಳು ಸ್ವಯಂ ಹುಟ್ಟುತ್ತವೆ. ನಂತರ ಅಮೃತ ಕಲಶ ಕಾಣಿಸಿಕೊಳ್ಳುತ್ತದೆ. ಮಹಾವಿಷ್ಣುವು ಈ ಕಲಶವನ್ನು ತನ್ನ ಬಲಗೈಗೆ ಕಟ್ಟಿಕೊಳ್ಳುತ್ತಾನೆ. ಮಹಾವಿಷ್ಣುವಿಗೆ ಆನಂದ ಭಾಷ್ಪ ಉಂಟಾಗುತ್ತದೆ. ಈ ಆನಂದ ಭಾಷ್ಪದಿಂದ ಒಂದು ಸಣ್ಣ ಗಿಡ ಕಾಣಿಸಿಕೊಳ್ಳುತ್ತದೆ. ಅದಕ್ಕೆ ತುಲಸೀ (ತುಲನೆ ಇಲ್ಲದ್ದು) ಎಂಬ ಹೆಸರು ಬಂದಿತು. ಹೀಗಾಗಿ **ತುಳಸೀ** ಅಥವಾ **ತುಲಸೀ** ಎಂಬ ಹೆಸರುಗಳಿಂದ ಭಾರತಾದ್ಯಂತ ಇದು ಪ್ರಸಿದ್ಧಿಯಾಗಿದೆ.

ತುಳಸಿಯಲ್ಲಿ ಆರು ಬಗೆಗಳಿವೆ. ಅವುಗಳೇ, ಶ್ರೀತುಳಸಿ, ಕ್ಷುದ್ರ ತುಳಸಿ, ರಕ್ತ ತುಳಸಿ, ಬಿಲ್ವಗಂಧ ತುಳಸಿ, ಕೃಷ್ಣ ತುಳಸಿ ಹಾಗೂ ವರ್ವರಿ ತುಳಸಿ ಎಂಬ ಆರು ವಿಧಗಳ ತುಳಸಿ ಗಿಡಗಳಿವೆ. ದೇವರ ಪೂಜೆಗೆ ತುಳಸಿಯನ್ನು ಉಪಯೋಗಿಸಲಾಗುತ್ತದೆ. ಸಾಮಾನ್ಯವಾಗಿ ನೀರನ್ನು ಕಾಯಿಸುವಾಗ ಒಂದು ತುಳಸೀ ದಳವನ್ನು ಹಾಕಿ ಕುದಿಸಿದರೆ, ಅಂತಹ ನೀರು ಶುದ್ಧವಾಗಿದ್ದು ಕುಡಿಯಲು ಬಳಸಬಹುದು. ಮಹಾವಿಷ್ಣುವಿಗೆ ತುಳಸಿಯಿಂದ ಪೂಜೆ ಮಾಡಿದರೆ ತುಂಬಾ ಒಳ್ಳೆಯದು ಎಂದು ಎಲ್ಲರೂ ನಂಬಿದ್ದಾರೆ. ಹತ್ತಾರು ಮಾರು ಹೂವುಗಳನ್ನು ವಿಷ್ಣುವಿಗೆ ಅರ್ಪಿಸುವುದಕ್ಕಿಂತ, ಭಕ್ತಿಯಿಂದ ಒಂದು ತುಳಸೀ ದಳವನ್ನು ಅರ್ಪಿಸಿದರೆ ಮಹಾವಿಷ್ಣುವಿಗೆ ಸಂತೋಷವಾಗಿ ಭಕ್ತರನ್ನು ಹರಸುತ್ತಾನೆ ಎಂದು ಎಲ್ಲಾ ಹಿಂದೂಗಳು ನಂಬಿದ್ದಾರೆ.



ತುಳಸಿ ಗಿಡ ಒಳ್ಳೆಯ ಔಷಧಿಯೆಂದೂ ಪ್ರಸಿದ್ಧವಾಗಿದೆ. ನೆಗಡಿ ಹಾಗೂ ಶೀತಕ್ಕೆ ತುಳಸಿಯ ರಸ ಉಪಯೋಗಕ್ಕೆ ಬರುತ್ತದೆ. ತುಳಸಿ ರಸವನ್ನು ಶ್ವಾಸಕೋಶ ಬಾಧೆ ಹಾಗೂ ಚರ್ಮ ರೋಗಗಳಿಗೆ ಬಳಸುತ್ತಾರೆ. ಇಷ್ಟೇ ಅಲ್ಲದೆ, ತುಳಸಿಯ ಎಲೆಯಲ್ಲಿರುವ ರಸವನ್ನು ಮನೆಯಲ್ಲಿಟ್ಟು ಕೊಂಡರೆ ಸೊಳ್ಳೆಗಳನ್ನು ದೂರವಿರಿಸುತ್ತದೆ. ತುಳಸಿ ರಸವನ್ನು ಕೀಟನಾಶಕ ಹಾಗೂ ಕ್ರಿಮಿನಾಶಕಗಳಿಗೂ ಉಪಯೋಗಿಸುತ್ತಾರೆ. ತುಳಸಿ ಎಲೆಗಳನ್ನು ನೀರಿನಲ್ಲಿ ಕುದಿಸಿ, ಆ ನೀರನ್ನು ಮಕ್ಕಳಿಗೆ ಕೊಟ್ಟರೆ, ಜಠರ ಹಾಗೂ ಲಿವರ್ ಅನ್ನು ಗುಣಪಡಿಸುತ್ತದೆ. ತುಳಸಿಯ ಒಣಗಿದ ಎಲೆಗಳನ್ನು ಪುಡಿ ಮಾಡಿ ಗಾಯಗಳ ಮೇಲೆ ಹಾಕಿದರೆ ಗಾಯವು ಬೇಗನೆ ಗುಣವಾಗುತ್ತದೆ. ತುಳಸಿ ಬೇರಿನ ಕಷಾಯವನ್ನು ಮಾಡಿ ಕಿವಿಗೆ ಹಾಕಿದರೆ ಕಿವಿಯ ನೋವು ಗುಣವಾಗುತ್ತದೆ. ಇಷ್ಟೇ ಅಲ್ಲದೆ ತುಳಸಿಯ ಜೊತೆ ಜೇನುತುಪ್ಪ ಮತ್ತು ಶುಂಠಿ ರಸವನ್ನು ಕುಡಿಸಿದರೆ ಕಫ ಹೊರಗೆ ಬರುತ್ತದೆ. ಮೂತ್ರ ವಿಸರ್ಜನೆ ಮಾಡುವಾಗ ತೊಂದರೆಯಾದರೆ ತುಳಸಿ ಕಷಾಯವನ್ನು ಸೇವಿಸಿದರೆ ಮೂತ್ರ ವಿಸರ್ಜನೆ ಸಲೀಸಾಗಿ ಆಗುತ್ತದೆ.

ತುಳಸಿ ದಳವನ್ನು ಹಾಕಿದರೆ ನೀರು ಶುದ್ಧವಾಗುತ್ತದೆ. ಇಂತಹ ಶುದ್ಧವಾದ ನೀರನ್ನು ದೇವರ ಅಭಿಷೇಕ ಮುಂತಾದ ಕಾರ್ಯಗಳಿಗೆ ಬಳಸಬಹುದು. ಅಭಿಷೇಕದ ನಂತರ ಈ ತೀರ್ಥವನ್ನು ಪರಮಪಾವನ ಎಂದು ಭಾವಿಸಲಾಗಿದೆ.

ಇಂದಿಗೂ ಅನೇಕರ ಮನೆಗಳಲ್ಲಿ ಕುಡಿಯುವ ನೀರಿಗೆ ಒಂದು ತುಳಸಿ ದಳವನ್ನು ಹಾಕಿ ಕುದಿಸಿ ಕುಡಿಯುತ್ತಾರೆ. ದಾನಗಳನ್ನು ಕೊಡುವಾಗ ತುಳಸಿ ದಳವನ್ನು ಇಟ್ಟು ನೀರನ್ನು ಬಿಟ್ಟು ಕೃಷ್ಣಾರ್ಪಣಾ ಎಂದು ಹೇಳುವುದು ಇಂದಿಗೂ ವಾಡಿಕೆಯಲ್ಲಿದೆ.

ಸ್ನಾನ ಮಾಡಿದ ನಂತರ ಮಹಿಳೆಯರು ತುಳಸಿಯನ್ನು ಪೂಜಿಸಿ ತುಳಸಿಯ ತೀರ್ಥವನ್ನು ಸೇವಿಸುತ್ತಾರೆ.

ಹಿಂದೂ ಸಂಪ್ರದಾಯದಂತೆ ತುಳಸೀ ಬೃಂದಾವನವಿಲ್ಲದ ಮನೆಯೇ ಇಲ್ಲವೆಂಬುದು ಸತ್ಯ. ಮೈಲಿಗೆಯಲ್ಲಿದ್ದಾಗ ತುಳಸೀ ದಳವನ್ನು ಯಾರೂ ಕೀಳಲೇ ಬಾರದು. ತುಳಸಿ ದಳವನ್ನು ಕೀಳುವಾಗಲೂ, ಕೇಶವಪ್ರಿಯಳೂ ಹಾಗೂ ಅಮೃತಜನ್ಮಳೂ ಆದ ನಿನ್ನನ್ನು ಕೇಶವನಿಗಾಗಿ ಕೀಳುತ್ತೇನೆ ಎಂದು ಹೇಳಿ ವರವನ್ನು ನೀಡು ಎಂದು ತುಳಸಿಯನ್ನು ಪ್ರಾರ್ಥಿಸಬೇಕು.

ಎಲಾ ದೇವತೆ ಯರೂ ತುಳಸೀ ಗಿಡದಲ್ಲಿ ನೆಲೆಸಿದ್ದಾರೆ. ಹುಣ್ಣಿಮೆ, ಅಮಾವಾಸ್ಯೆ, ದ್ವಾದಶಿ, ಸಂಕ್ರಮಣದ ದಿನಗಳಲ್ಲಿ ತುಳಸಿ ದಳಗಳನ್ನು ಕೀಳಲೇ ಬಾರದು. ತುಳಸೀ ಪತ್ರದ ಮಧ್ಯದಲ್ಲಿ ಕೇಶವನೂ, ಅಗ್ರಭಾಗದಲ್ಲಿ ಬ್ರಹ್ಮನೂ ಮೂಲಭಾಗದಲ್ಲಿ ಶಿವನೂ ನೆಲೆಸಿರುವರು. ಕಾರ್ತೀಕ ಮಾಸದ ಶುಕ್ಲ ಪಕ್ಷದ ದ್ವಾದಶೀ (ಉತ್ಥಾನ ದ್ವಾದಶಿ) ತುಳಸೀಯ ಜನ್ಮದಿನ. ಮನೆಯಲ್ಲಿ ತುಳಸೀ ಗಿಡ ಇರುವವರೆಗೂ ಯಮನಿಗೆ ಪ್ರವೇಶವೇ ಇಲ್ಲ. ಉತ್ಥಾನ ದ್ವಾದಶಿ ದಿನದಂದು ತುಳಸೀ ಗಿಡದ ಹತ್ತಿರ ದೀಪವನ್ನು ಹಚ್ಚಿಟ್ಟರೆ, ಮನೆಯಲ್ಲಿರುವ ಅಕ್ಕ, ತಂಗಿಯರು ಹಾಗೂ ಸ್ನೇಹಿತರು (ಅವರು ಎಷ್ಟೇ ದೂರದಲ್ಲಿದ್ದರೂ) ಎಲ್ಲರಿಗೂ ಧನ–ಧಾನ್ಯ ಸಮೃದ್ಧಿಯಾಗುತ್ತದೆ ಎಂಬುದು ತುಳಸೀ ಭಕ್ತರ ನಂಬಿಕೆ. ವೈಷ್ಣವರು ತುಳಸೀ ಮೃತ್ತಿಕೆಯನ್ನು ಹಣೆಯಲ್ಲಿ ಧರಿಸುತ್ತಾರೆ. ತುಳಸೀ ಕಾಷ್ಠದಿಂದ ಮಣಿಗಳನ್ನು ರಚಿಸಿ ಜಪಗಳಲ್ಲಿ ಈ ಮಣಿಯನ್ನು ವಿಶೇಷವಾಗಿ ಬಳಸುತ್ತಾರೆ. ಉತ್ಥಾನ ದ್ವಾದಶಿಯಂದು ಸುಮಂಗಲಿಯರು ಶ್ರೀ ಕೃಷ್ಣ ಹಾಗೂ ತುಳಸಿಯ ಮದುವೆಯೆಂದು ಸಂಭ್ರಮಿಸಿ ಆಚರಿಸುತ್ತಾರೆ.

ಪುರಾಣಗಳಲ್ಲಿ ತುಳಸಿಗೆ ಸಂಬಂಧಿಸಿದ ಅನೇಕ ಕಥೆಗಳಿವೆ.

1) ತುಳಸೀ ಎಂಬ ಮಾತೆಯು ಗೋಕುಲದ ಗೋಪಿಕೆಯರಲ್ಲಿ ಒಬ್ಬಳು ಮತ್ತು ಶ್ರೀ ಕೃಷ್ಣನಿಗೆ ಅತ್ಯಂತ ಪ್ರಿಯಳಾಗಿದ್ದವಳು. ಒಮ್ಮೆ ಶ್ರೀಕೃಷ್ಣನೊಡನೆ ತುಳಸಿಯು ಕ್ರೀಡೆಯಲ್ಲಿ ತೊಡಗಿದ್ದಾಗ, ರಾಧೆಯು ಕೋಪದಿಂದ ಮನುಷ್ಯಳಾಗಿ ಹುಟ್ಟುವಂತೆ ಶಾಪವನ್ನು ನೀಡಿದಳು. ನೀನು ಭರತ ಖಂಡದಲ್ಲಿ ಜನಿಸಿ ತಪಸ್ಸು ಮಾಡಿ ಶ್ರೀಮನ್ನಾರಾಯಣನ ಅಂಶದಿಂದ ಹುಟ್ಟಿದ ಪುರುಷನನ್ನು ಹೊಂದುತ್ತೀಯೆ ಎಂದು ಶ್ರೀಮನ್ನಾ ರಾಯಣನು ಅನುಗ್ರಹಿಸಿದನು. ತುಳಸಿಯು ಅದರಂತೆ ಹಂಸಧ್ವಜನ ಮಗನಾದ ಧರ್ಮಧ್ವಜನೆಂಬ ರಾಜನ ಹೆಂಡತಿ ಮಾಧವಿಯ ಗರ್ಭದಲ್ಲಿ ಕಾರ್ತಿಕ ಮಾಸದ ಹುಣ್ಣಿಮೆಯ ದಿನ ಜನಿಸಿದಳು. ಈ ಮಗಳಿಗೆ ತುಳಸೀ ಎಂದೇ ನಾಮಕರಣ ಮಾಡಿದರು. ತನ್ನ ಬಾಲ್ಯದಲ್ಲಿಯೇ ತುಳಸಿಯು ತಪಸ್ಸು ಮಾಡಲು ಕಾಡಿಗೆ ಹೋದಳು. ಗೋವಿನ ಲೋಕದ ತುಳಸಿಯನ್ನು ಮೋಹಿಸಿದ ಸುಧಾಮನೆಂಬ ಗೋಪಾಲಕ ನಿಗೂ ರಾಧೆಯು ಶಾಪವನ್ನು ಕೊಟ್ಟಳು. ಆಗ ಸುಧಾಮನು ಶಂಖಚೂಡ ಎಂಬ ಹೆಸರನ್ನು ಪಡೆದು, ಯಾರಿಂದಲೂ ತನಗೆ ಸಾವು ಬರಬಾರದೆಂಬ ವರವನ್ನು ಬ್ರಹ್ಮನಿಂದ ಪಡೆದನು. ಆದರೆ ಬ್ರಹ್ಮನ ಅಪ್ಪಣೆಯಂತೆ ತುಳಸಿಯನ್ನು ಶಂಖಚೂಡನು ಗಾಂಧರ್ವ ವಿವಾಹವನ್ನು ಮಾಡಿಕೊಂಡನು. ಪಾನಮತ್ತರಾದ ರಾಕ್ಷಸರು ಶಂಖಚೂಡನನ್ನು ಅಪಹರಿಸಿದರು. ಇದರಿಂದ ತೊಂದರೆಗೊಳಗಾದ ದೇವತೆಗಳು, ಬ್ರಹ್ಮನೊಡನೆ ವೈಕುಂಠಕ್ಕೆ ತೆರಳಿ ಶ್ರೀಮನ್ನಾ ರಾಯಣನಿಗೆ ತಮ್ಮ ಸ್ಥಿತಿಯನ್ನು ವಿವರಿಸಿದರು. ಆಗ ಶ್ರೀಮನ್ನಾರಾಯಣನು ದೇವತೆಗಳಿಗೆ ಅಭಯವನ್ನು ನೀಡಿದನು. ಶ್ರೀಮನ್ನಾರಾಯಣನು ತನ್ನ ಆಯುಧವನ್ನು ಶಿವನಿಗೆ ಕೊಟ್ಟು ಕಳುಹಿಸಿದನು. ಶಂಖಚೂಡನು ಯುದ್ಧದಲ್ಲಿ ಮರಣ ಹೊಂದಿದನು. ಇಷ್ಟಕ್ಕೆಲ್ಲಾ ಶ್ರೀಮನ್ನಾರಾಯಣನೇ ಕಾರಣನೆಂದು ತಿಳಿದು, ತುಳಸಿಯು ಶ್ರೀಮನ್ನಾರಾಯಣನನ್ನು ಕಲ್ಲಾಗುವಂತೆ ಶಾಪವನ್ನು ಕೊಟ್ಟಳು. ಇಂದಿಗೂ ಗಂಡಕೀ ನದಿಯಲ್ಲಿ ಸಾಲಿಗ್ರಾಮ ಶಿಲೆಗಳು ದೊರಕುತ್ತವೆ. ಶ್ರೀಮನ್ನಾರಾಯಣ ಸಾಲಿಗ್ರಾಮವನ್ನು ಪೂಜಿಸುವರು. ಇಂದಿಗೂ ಅನೇಕ ಮನೆಗಳಲ್ಲಿ ಸಾಲಿಗ್ರಾಮವನ್ನು ತುಳಸೀ ದಳದಿಂದ ಪೂಜಿಸುವ ಪದ್ಧತಿಯು ಉಳಿದುಬಂದಿದೆ. ಇಷ್ಟೇ ಅಲ್ಲದೆ ಶಂಖಚೂಡನ ಸಂಕೇತವಾದ ಶಂಖವನ್ನು ಪೂಜಿಸುವ ಪದ್ಧತಿಯು ಇಂದಿಗೂ ಬಳಕೆಯಲ್ಲಿದೆ. ಯಾವ ಪೂಜೆಯನ್ನು ಆರಂಭಿಸುವುದಕ್ಕೆ ಮುಂದೆ ಶಂಖವನ್ನು ಆರಾಧಿಸಿ, ನಂತರ ಶಂಖವನ್ನು ಬಳಸಲಾಗುತ್ತದೆ. ಆದುದರಿಂದ ಶಂಖದಿಂದ ಬಂದರೇ ಅದೇ ನಮ್ಮ ತೀರ್ಥ ಎನ್ನುವ ಮಾತು ಇಂದಿಗೂ ಚಾಲ್ತಿಯಲ್ಲಿದೆ.

ಬೋಧಕ ಹುದ್ದೆ ಭರ್ತಿಗೆ ಮೈಸೂರು ವಿವಿ ನಿರ್ಧಾರ



ಮೈಸೂರು, ಮೇ 6(ಆರ್‌ಕೆ)–ಖಾಲಿ ಇರುವ ಬೋಧಕ ಹುದ್ದೆಗಳನ್ನು ಸರ್ಕಾರದ ಅನುಮೋದನೆ ಪಡೆದು ಭರ್ತಿ ಮಾಡಿ ಕೊಳ್ಳಲು ಮೈಸೂರು ವಿಶ್ವವಿದ್ಯಾನಿಲಯವು ನಿರ್ಧರಿಸಿದೆ. ಕ್ರಾಫರ್ಡ್ ಭವನದಲ್ಲಿ ಇಂದು ಕುಲಪತಿ ಪ್ರೊ ಜಿ.ಹೇಮಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಸಿದ ಸದಸ್ಯರು, ಬೋಧಕ ವರ್ಗದ ಹುದ್ದೆಗಳು ಖಾಲಿ ಇರುವುದರಿಂದ ಶಿಕ್ಷಣ ಮತ್ತು ಸಂಶೋಧನೆ ಗುಣಮಟ್ಟ ಕುಸಿಯುತ್ತಿದೆ. ವಿದ್ಯಾರ್ಥಿಗಳು ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿ ಯಿಂದ ಖಾಯಂ ಬೋಧಕ ಹುದ್ದೆಗಳಿಗೆ ಸರ್ಕಾರದ ಅನುಮೋದನೆ ಪಡೆದು ನೇಮಕಾತಿ ಮಾಡುವ ಅಗತ್ಯ ವಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಹಲವು ವರ್ಷಗಳಿಂದ ಬೋಧಕರ ನೇಮಕಾತಿಯಾಗಿಲ್ಲ. ಕೇವಲ ಅತಿಥಿ ಉಪನ್ಯಾಸಕರಿಂದ ಶೈಕ್ಷಣಿಕ ಕಾರ್ಯ ಕ್ರಮಗಳನ್ನು ನಡೆಸುವುದು ಸರಿಯಲ್ಲ. ಪ್ರತೀ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಲೇ ಇರುವುದರಿಂದ ಅದಕ್ಕೆ ತಕ್ಕಂತೆ ಬೋಧಕರನ್ನು ಆದ್ಯತೆ ಮೇಲೆ ನೇಮಿಸಬೇಕು ಎಂದು ಸಭೆಯು ತೀರ್ಮಾನಿಸಿತು.

ಪ್ರಾಯೋಜಿತ ಸಂಸ್ಥೆಗಳ ನೆರವಿನೊಂದಿಗೆ ಉನ್ನತ ಶಿಕ್ಷಣದ ಭಾಗವಾಗಿ ಸಂಶೋ ಧನಾ ಚಟುವಟಿಕೆಗಳನ್ನು ಹೆಚ್ಚಾಗಿ ಕೈಗೊಳ್ಳ ಬೇಕು. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡಿರುವ ವಿಶ್ವವಿದ್ಯಾನಿಲಯದಲ್ಲಿ ಕೆರಿಯರ್ ಹಬ್ ಕೇಂದ್ರ ಸ್ಥಾಪಿಸಿರುವುದು ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಸದಸ್ಯರು ತಿಳಿಸಿದರು. ನಾಮ ನಿರ್ದೇಶಿತ ಸದಸ್ಯರಾದ ಡಾ. ಕೆ.ಮಹದೇವ, ಪ್ರೊ. ಎಂ.ಕೆ. ಸೂರಪ್ಪ, ಡಾ. ಡಿ.ಸುಧನ್ವ, ವಿವಿಧ ನಿಕಾಯದ ಡೀನ್‌ಗಳು ಹಾಗೂ ಹಿರಿಯ ಪ್ರಾಧ್ಯಾಪಕರು ಮೌಲ್ಯಮಾಪನ ಮಂಡಳಿ ಸಭೆಯಲ್ಲಿ ಭಾಗವಹಿಸಿದ್ದರು.

'ಯಶಸ್ವಿನಿ' ಅ.2 ರಿಂದ ಮರು ಜಾರಿ

ಬೆಂಗಳೂರು, ಮೇ 5– ಸಹಕಾರ ಇಲಾಖೆ ಯಿಂದ ಯಶಸ್ವಿನಿ ಯೋಜನೆ ಮರು ಜಾರಿಗೆ ಉದ್ದೇಶಿಸಿದ್ದು, ಅ. 2 ರಂದು ಚಾಲನೆ ನೀಡಲಾಗುತ್ತದೆ. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಹಕಾರ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಸಿಎಂ, ಯಶಸ್ವಿನಿ ಯೋಜನೆ ಮರು ಜಾರಿಗೆ ಸೂಚನೆ ನೀಡಿದ್ದಾರೆ. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರು, ಬಡವರಿಗೆ ಸಹಕಾರ ಇಲಾಖೆ ಮೂಲಕ ಜಾರಿಗೆ ತಂದಿದ್ದ ಯಶಸ್ವಿನಿ ಯೋಜನೆಯಿಂದ ಒಂದು ಪೈಸೆ ಖರ್ಚಿಲ್ಲದೆ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿತ್ತು. ಆಯುಷ್ಮಾನ್ ಆರೋಗ್ಯ ಕರ್ನಾಟಕ ಯೋಜನೆ ಜಾರಿಯಾದ ನಂತರ ಯಶಸ್ವಿನಿ ಯೋಜನೆ ಕೈಬಿಡಲಾಗಿತ್ತು. ಈಗ ಮರು ಜಾರಿಗೆ ಕ್ರಮ ಕೈಗೊಳ್ಳಲಾಗಿದೆ.

ಚರ್ಚೆ ಇಲ್ಲದೆ ಕಾನೂನುಗಳು ಮಾರ್ಪಾಡಾಗುತ್ತಿವೆ...!

ಯಶಸ್ವಿ ಚಿತ್ರ 'ಜೈಭೀಮ್'ಗೆ ಪ್ರೇರಣೆಯಾದ ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು ವಿಷಾದ

ಮೈಸೂರು,ಮೇ 6(ಪಿಎಂ)– ಡಾ.ಬಿ. ಆರ್.ಅಂಬೇಡ್ಕರ್ ಅವರ ಆಶಯ ಮತ್ತು ಸಂದೇಶದಂತೆ ದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಉಳಿಸಬೇಕಿದ್ದು, ಈ ನಿಟ್ಟಿನಲ್ಲಿ ವಕೀಲರು ಮತ್ತು ಭವಿಷ್ಯದ ವಕೀಲರ ಪಾತ್ರ ಪ್ರಮುಖವಾಗುತ್ತದೆ ಎಂದು ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು (ಕೃಷ್ಣಸ್ವಾಮಿ ಚಂದ್ರು) ಅಭಿಪ್ರಾಯಪಟ್ಟರು.



ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು ಉಪನ್ಯಾಸ ನೀಡಿದರು.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ 'ಕಾನೂನು ನಿಯಮ ಮತ್ತು ಮಾನವ ಹಕ್ಕುಗಳು' ಕುರಿತು ಶುಕ್ರವಾರ ಅವರು ವಿಶೇಷ ಉಪನ್ಯಾಸ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯ ತಮ್ಮ ಅಂತಿಮ ಭಾಷಣದಲ್ಲಿ ರಾಜಕೀಯ ಸ್ವಾತಂತ್ರ್ಯ ನಮ್ಮ ಮುಂದಿದೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಗಳಿಸದ ಹೊರತು ಅದು ನಿರರ್ಥಕ, ಪ್ರಜಾಪ್ರಭುತ್ವವೂ ಯಶಸ್ವಿಯಾಗದು ಎಂಬ ಸಂದೇಶ ನೀಡಿದ್ದರು. ಅದರಂತೆ ನಾವು ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಕಲ್ಪಿಸುವ ಮೂಲಕ ಪ್ರಜಾಪ್ರಭುತ್ವ ಯಶಸ್ವಿಗೊಳಿಸಲು ಪ್ರಮುಖ ಪಾತ್ರ ವಹಿಸಬೇಕಿದೆ. ಕಾನೂನು ವಿದ್ಯಾರ್ಥಿಗಳು ಕಾನೂನನ್ನು ಅರ್ಥಮಾಡಿಕೊಂಡು, ಅವುಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಬೇಕಿದೆ ಎಂದು ತಿಳಿಸಿದರು.

ಜನಪ್ರತಿನಿಧಿಗಳು ಯಾವುದೇ ಚರ್ಚೆ ಇಲ್ಲದೇ ಕಾನೂನುಗಳನ್ನು ಮಾರ್ಪಾಡು ಮಾಡಲು ಮುಂದಾಗುವುದೂ ಇದೆ. ಹೆಣ್ಣು ಮಕ್ಕಳ ಮದುವೆ ವಯಸ್ಸನ್ನು 21ಕ್ಕೆ ಏರಿಕೆ ಮಾಡಲಾಗಿದೆ. ಆದರೆ 18 ಇದ್ದಾಗಲೇ 17 ವರ್ಷಕ್ಕೆ ಮದುವೆಗಳಾಗುತ್ತಿದ್ದವು. ವಯೋಮಿತಿ ಏರಿಕೆಯಿಂದ ಪ್ರೌಢತೆ ಬಂದಿರುತ್ತದೆ ಎಂಬ ಕಾರಣ ನೀಡಲಾಗುತ್ತಿದೆ. 31ಕ್ಕೆ ಏರಿಕೆ ಮಾಡಿದರೆ ಮತ್ತಷ್ಟು ಪ್ರೌಢಿಮೆ ಬರಬಹುದಲ್ಲವೇ? ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ ಅವರು, ಕಾನೂನು ಬದಲಿಸುವ ಮುನ್ನ ಅದರ ದೂರಗಾಮಿ ಪರಿಣಾಮಗಳ ಕುರಿತು ಮುಕ್ತವಾಗಿ ಚರ್ಚೆ ಮಾಡಬೇಕು ಎಂದು ಪ್ರತಿಪಾದಿಸಿದರು.

ನಮ್ಮ ಮನಸ್ಥಿತಿಗಳು ಇನ್ನೂ ಬದಲಾಗಿಲ್ಲ. ಒಂದು ನಿರ್ದಿಷ್ಟ ಸಮುದಾಯವನ್ನು ಅಪರಾಧಿಗಳೆಂದೇ ಭಾವಿಸುವ ಪ್ರವೃತ್ತಿ ಇದೆ. ಪೊಲೀಸ್ ಠಾಣೆಗಳೇ ನ್ಯಾಯಾಲಯಗಳಂತೆ, ಇನ್‌ಸ್ಪೆಕ್ಟರ್‌ಗಳೇ ನ್ಯಾಯಾಧೀಶರಂತೆ ವರ್ತಿಸುವುದೂ ನಡೆಯುತ್ತಿದೆ. 'ಜೈ ಭೀಮ್' ಸಿನಿಮಾದ ನಾಯಕಿ ನಟಿಗೆ ಸಿಗುವಷ್ಟು ಗೌರವ, ಆ ಪಾತ್ರಕ್ಕೆ ಮೂಲವಾದ ಹೆಣ್ಣಿಗೆ ಸಿಗುವುದೇ? ಎಂಬ ಪ್ರಶ್ನೆ ನನ್ನನ್ನು ಇಂದಿಗೂ ಕಾಡುತ್ತಿದೆ ಎಂದರು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಕೆ. ಎಸ್.ಸುರೇಶ್, ಪ್ರಾಂಶುಪಾಲ ಡಾ.ಎಸ್. ನಟರಾಜು ಸೇರಿದಂತೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ದ್ವೇಷ ರಾಜಕಾರಣಕ್ಕೆ ಕರ್ನಾಟಕ ಪ್ರಯೋಗಶಾಲೆ

ಮೈಸೂರು,ಮೇ 6(ಪಿಎಂ)– ಕರ್ನಾಟಕ ದ್ವೇಷ ರಾಜಕಾರಣಕ್ಕೆ ಪ್ರಯೋಗಶಾಲೆಯಾಗುತ್ತಿದ್ದು, ಇಲ್ಲಿ ಧಾರ್ಮಿಕ ಹಿನ್ನೆಲೆಯ ವಿಚಾರಗಳನ್ನು ಮುನ್ನೆಲೆಗೆ ತಂದು, ನೈಜ ಸಮಸ್ಯೆಗಳತ್ತ ಜನತೆ ಗಮನ ಕೇಂದ್ರೀಕರಿಸದಂತೆ ಮಾಡಲಾಗುತ್ತಿದೆ ಎಂದು ಮದ್ರಾಸ್ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಚಂದ್ರು (ಕೃಷ್ಣಸ್ವಾಮಿ ಚಂದ್ರು) ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡ, ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು. ದೇಶದ ಬಹುಸಂಸ್ಕೃತಿಯ ರಾಜ್ಯಗಳಲ್ಲಿ ಒಂದಾದ ಕರ್ನಾಟಕದಲ್ಲಿ ಬಿಜೆಪಿ ಧಾರ್ಮಿಕ ವಿಚಾರಗಳ ಮೂಲಕ ಜನಸಮುದಾಯವನ್ನು ಪ್ರತ್ಯೇಕಿಸಲು ಹೊರಟಿದೆ ಆ ಮೂಲಕ ಕರ್ನಾಟಕದಲ್ಲಿ ದ್ವೇಷ ರಾಜಕಾರಣ ಮುಂದುವರೆದಿದೆ ಈ ಪ್ರಯೋಗವನ್ನು ಇನ್ನಿತರ ದಕ್ಷಿಣ ರಾಜ್ಯಗಳಿಗೂ ವಿಸ್ತರಿಸಬಹುದು. ಆದರೆ ದಕ್ಷಿಣ ಭಾರತದ ರಾಜ್ಯಗಳು ಇಂತಹ ಪ್ರಯೋಗಗಳಿಗೆ ಬಲಿಪಶು ಆಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಸ್ಯೆ ಅಲ್ಲದ ವಿಚಾರಗಳನ್ನು ಸಮಸ್ಯೆಯಾಗಿ ಪರಿವರ್ತಿಸಲಾಗುತ್ತಿದೆ. ತಮಿಳುನಾಡಿನ ಕಂಚಿಯ ಶಂಕರಮಠದ ಪಕ್ಕದಲ್ಲೇ ಇರುವ ಮಸೀದಿಯಿಂದ ನಿತ್ಯ ಆಜಾನ್ ಕೇಳಿ ಬರುತ್ತಿದೆ. ಅಲ್ಲಿ ಯಾವುದೇ ಸಮಸ್ಯೆಯೂ ಇಲ್ಲ, ವಿವಾದವೂ ಇಲ್ಲ. ಕರ್ನಾಟಕದಲ್ಲಿ ಮಾತ್ರ ಬೇಕಿರದ ಇಂತಹ ವಿಷಯಗಳನ್ನೇ ಮುನ್ನೆಲೆಗೆ ತರಲಾಗುತ್ತಿದೆ. ಆ ಮೂಲಕ ಕಾಡುತ್ತಿರುವ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಅನಗತ್ಯವಾದ ಇಂತಹ ವಿವಾದಗಳನ್ನು ನಿಯಂತ್ರಿಸುವಲ್ಲಿ ಆಡಳಿತಾ ರೂಢ ಬಿಜೆಪಿ ಹಾಗೂ ವಿರೋಧ ಪಕ್ಷ ಕಾಂಗ್ರೆಸ್ ಎರಡೂ ವಿಫಲಗೊಂಡಿವೆ. ಪಾಕಿಸ್ತಾನ ಇಸ್ಲಾಂ ಧರ್ಮದ ರಾಷ್ಟ್ರವಾಗಿ ಉದಯಿಸಿದೆ. ಆದರೆ ಭಾರತ ಹಿಂದೂ ರಾಷ್ಟ್ರವಾಗಿ ರಚನೆಯಾಗಿಲ್ಲ. ನಮ್ಮ ಸಂವಿಧಾನಕ್ಕೆ ತಿದ್ದುಪಡಿ ತಂದು ಭಾರತವನ್ನು ಜಾತ್ಯಾತೀತ ರಾಷ್ಟ್ರ ಎಂದು ಘೋಷಣೆ ಮಾಡಲಾಗಿದೆ. ಇಲ್ಲಿ ಅತ್ಯಂತ ಕಡಿಮೆ ಸಂಖ್ಯೆ ಹೊಂದಿರುವ ಸಮುದಾಯವಾದ ಪಾರ್ಸಿ ಕೂಡ ಸರ್ವ ಸ್ವತಂತ್ರ. ನಮ್ಮ ದೇಶ ಬಹುಧರ್ಮಗಳನ್ನು ಹೊಂದಿದ್ದು, ಇಲ್ಲಿ ಎಲ್ಲರೂ ಅವರವರ ಧಾರ್ಮಿಕ ಆಚರಣೆಗೆ ಸ್ವಾತಂತ್ರ್ಯ ಹೊಂದಿದ್ದಾರೆ. ಇಲ್ಲಿ ಒಂದು ಧರ್ಮ, ಒಂದು ಆಹಾರ ಪದ್ಧತಿ, ಒಂದು ಸಿದ್ಧಾಂತ ಹೇರುವುದು ಸರಿಯಲ್ಲ ಎಂದರು.

'ಜೈಭೀಮ್' ಸಿನಿಮಾದಲ್ಲಿ ಸಮುದಾಯವೊಂದರ ಬಗ್ಗೆ ತಪ್ಪಾಗಿ ನಿರೂಪಿಸಲಾಗಿದೆ ಎಂಬ ಆರೋಪ ಸಂಬಂಧ ನಟ, ನಿರ್ಮಾಪಕ ಮತ್ತು ನಿರ್ದೇಶಕರ ವಿರುದ್ಧ ಎಫ್ಐಆರ್ ದಾಖಲಿಸುವಂತೆ ನ್ಯಾಯಾಲಯ ಆದೇಶಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈಗಾಗಲೇ ತಪ್ಪಾಗಿ ನಿರೂಪಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ದೃಶ್ಯವನ್ನು ತೆಗೆಯಲಾಗಿದೆ. ಆರೋಪಕ್ಕೆ ಯಾವುದೇ ಪುರಾವೆ ಇಲ್ಲ. ಹಾಗಾಗಿ ಈ ಪ್ರಕರಣ ನಿಲ್ಲುವುದಿಲ್ಲ. ಬಹುಶಃ ಇದು ಸಂಘಟನೆಯೊಂದರ ಹೆಸರಿನಲ್ಲಿ ಹಣ ಕೀಳಲೆಂದೋ, ಪ್ರಸಿದ್ಧಿ ಪಡೆಯಲೆಂದೋ ಮಾಡಿರುವ ಕೆಲಸ ಎಂದು ಕಾಣುತ್ತದೆ. ತನಿಖೆ ಮೂಲಕ ಅದು ಬಯಲಾಗುವ ವಿಶ್ವಾಸವಿದೆ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–
2496522/23

ಸೈಟ್ ಮಾರಾಟಕ್ಕೆ ಇದೆ

(16x43) ಹಲ್ಲಿನಬೀದಿ, ಮೈಸೂರು ಕಮರ್ಷಿಯಲ್ ಸೈಟ್ ಮಾರಾಟಕ್ಕೆ ಇದೆ. (28x78) ಎನ್.ಎಸ್. ಮೈನ್ ರೋಡ್, ಅಂಗಡಿ ಬಾಡಿಗೆಗೆ ಇದೆ (10x18) ಎನ್.ಎಸ್. ಮೈನ್ ರೋಡ್, ಶಾಂತಲಾ ಟಾಕೀಸ್ ಹತ್ತಿರ, ಮೈಸೂರು ಹಾಗೂ ಮಾರುವವರು / ಕೊಳ್ಳುವವರು ಸೈಟು, ಮನೆ, ಜಮೀನು, ಬಾಡಿಗೆ, ಭೋಗ್ಯ

9845969709

ಉಚಿತ ವೃದ್ಧಾಶ್ರಮ ಸೇವೆ

ನಮ್ಮಲ್ಲಿ ವೃದ್ಧರು, ರೋಗಿಗಳು, ಹಾಸಿಗೆ ಹಿಡಿದವರಿಗೆ, ಅಂಗವಿಕಲರಿಗೆ ಉಚಿತವಾಗಿ ಪ್ರವೇಶವಕಾಶವಿದೆ. T& C apply ಹೋಮ್ ನರ್ಸಿಂಗ್ ಸೇವೆ ಸಹ ಲಭ್ಯ

9513253747

ಕಳೆದಿದೆ

ಗೌರಮ್ಮ ಆದ ನಾನು ನಂ. 170, 2ನೇ ಕ್ರಾಸ್, 2ನೇ ಹಂತ, ಗೋಕುಲಂ, ಮೈಸೂರು ನಗರ ಇಲ್ಲಿ ವಾಸವಿದ್ದು, ನನಗೆ ಸೇರಿದ ಸದರಿ ಸ್ವತ್ತಿನ ಎಲ್ಲಾ ಮೂಲ ದಾಖಲಾತಿಗಳು ಕಳೆದಿದ್ದು ಸಿಕ್ಕಿದವರು ಸಂಪರ್ಕಿಸಿ:

9900512601 / 9880528034

ಒಳ್ಳೆ ಉದ್ಯೋಗಾವಕಾಶ... ತ್ವರೆ ಮಾಡಿ

ಮೈಸೂರು ನಗರದಲ್ಲಿ QRS ಹೆಸರಿನಲ್ಲಿ ಆರಂಭವಾಗುತ್ತಿರುವ Online Storeಗೆ (ಆನ್‌ಲೈನ್ ಸ್ಟೋರ್) ಮ್ಯಾನೇಜರ್ (ಯಾವುದೇ ಡಿಗ್ರಿ) ಹಾಗೂ ಎಕ್ಸಿಕ್ಯೂಟಿವ್ (ಪಿಯುಸಿ ಪಾಸ್) ಬೇಕಾಗಿದ್ದಾರೆ. ಆಸಕ್ತರು 08-05-2022 ರ ಭಾನುವಾರ, ಮಧ್ಯಾಹ್ನ 2 ರಿಂದ 4 ಗಂಟೆ ಒಳಗೆ ಸಂಪರ್ಕಿಸಿ. ಕೃಷ್ಣ ಎಂಟರ್‌ಪ್ರೈಸಸ್, ನಂ.1224, ಡಿ-8, ದೇವರಾಜ ಅರಸ್ ರಸ್ತೆ ಹಿಂಭಾಗ, ಭೀಮಾ ಬ್ರದರ್ಸ್ ಶೋರೂಂ ಎದುರು, ಮೈಸೂರು-570001

95385 71717 / 95350 50699

ಸೈಟು ಮಾರಾಟಕ್ಕಿದೆ

30x40- 30 ಲಕ್ಷ, ನ್ಯೂ ಆರ್.ಟಿ.ನಗರದ ಹತ್ತಿರ, ದಟ್ಟಗಳ್ಳಿ, ಸೈಟ್, ಹೊಸ ಮನೆ ಹಳೇ ಮನೆ ಮಾರುವವರು – ಕೊಳ್ಳುವವರು

9945042875

30x40 ಡ್ಯೂಪ್ಲೆಕ್ಸ್ ಮನೆ – 90 ಲಕ್ಷ

20x30 ಮನೆ (ದಟ್ಟಗಳ್ಳಿ) – 42 ಲಕ್ಷ
20x30 ಡ್ಯೂಪ್ಲೆಕ್ಸ್ ಮನೆ – ದಟ್ಟಗಳ್ಳಿ

ಎಲ್ಲಾ ಅಳತೆಯ ಸೈಟು – ಹೊಸಮನೆ – ಹಳೆ ಮನೆ ಮಾರುವವರು – ಕೊಳ್ಳುವವರು ಸಂಪರ್ಕಿಸಿ

8618495118

Sri Shambhulingeshwara Residential School

WANTED

PRIMARY SECTION	
NURSERY	NTT/MTT
ENGLISH	BA B.Ed/D.Ed
SCIENCE AND MATHEMATICS	B.Sc B.ED/D.Ed
HIGH SCHOOL	
ENGLISH	BA B.Ed/D.Ed
HINDI	BA B.Ed
PET	B.P.Ed
COMPUTER	M.Sc/BCA
WARDEN	Any Degree

SANGEETHA, DRAWING AND DANCE TEACHERS
WALK IN INTERVIEW
JAYANTHINAGAR, PANDAVAPUR (TQ), MANDYA
7338138083

COMPUTER COURSE

Basic computer @ 999 only
Tally @ 999 only
LIMITED OFFER
Place : Saraswathipuram

8310287187
9538483399

ವಧು ಬೇಕಾಗಿದ್ದಾರೆ

ಕೂಡಲೇ ವಧು ಬೇಕಾಗಿದ್ದಾರೆ. ವಿಧವೆಯಾದರೂ ಪರವಾಗಿಲ್ಲ. ವಿವರಗಳಿಗೆ ಸಂಪರ್ಕಿಸಿ:

9740635082

ಗಿರವಿ ಚಿನ್ನಾಭರಣ ಖರೀದಿ

1 ಗ್ರಾಂ ಚಿನ್ನಕ್ಕೆ 5200

ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ಕೊಡಲಾಗುತ್ತದೆ. ನೀವು ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿಯಿಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನದ ಆಭರಣಗಳನ್ನು ಬಿಡಿಸಿ ಮಾರುಕಟ್ಟೆಗಿಂತ ಅಧಿಕ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣಕೊಡುತ್ತೇವೆ. ನಿಮಗೆ ಮತ್ತೆ ಚಿನ್ನಾಭರಣ ಬೇಕಾದಲ್ಲಿ ಕೂಲಿ ವೇಸ್ಟೇಜ್ ಇಲ್ಲದೆ ಮಾಡಿಕೊಡಲಾಗುತ್ತದೆ. ಕೂಡಲೇ (T&C) ಸಂಪರ್ಕಿಸಿ–S.M ಗೋಲ್ಡ್ ಫೈನಾನ್ಸ್

8050518881

Gem Selections

(A Part of Khanna Gems Group)
100% Natural Govt. Lab Certified Gemstones

ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.

HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023

8152066999

ಹೊಸ ಚೀಟಿಗಳ ಪ್ರಾರಂಭ

ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. ಮೈಸೂರು / ಹಾಸನ

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/-	3000/-
2 ಲಕ್ಷ	25	8000/-	6000/-
5 ಲಕ್ಷ	25	20,000/-	15,000/-
10 ಲಕ್ಷ	50	20,000/-	15,000/-
10 ಲಕ್ಷ	100	10,000/-	7,500/-
25 ಲಕ್ಷ	100	25,000/-	18,750/-

7892303484 / 8749077453

ಉಚಿತ ಉಚಿತ ಉಚಿತ

JESWA ಸಂಸ್ಥೆಯಿಂದ ತರಬೇತಿ ಮೈಸೂರಿನಲ್ಲಿ ಟೈಲರಿಂಗ್ ಮತ್ತು ಬ್ಯೂಟಿಷಿಯನ್ ಯಾವುದೇ ರೀತಿಯ ಶುಲ್ಕಗಳೂ ಇರುವುದಿಲ್ಲ. ಸೀಮಿತ ಸೀಟ್‌ಗಳು, ಮೊದಲು ಬಂದವರಿಗೆ ಆದ್ಯತೆ

9844736136 / 9844264134

ಡಿ.ಟಿ.ಪಿ ಆಪರೇಟರ್ಸ್ ಬೇಕಾಗಿದ್ದಾರೆ, (ಪಾರ್ಟ್‌ಟೈಮ್/ಫುಲ್ ಟೈಮ್) ಗ್ರಾಫಿಕ್ ಡಿಸೈನರ್ ಬೇಕಾಗಿದ್ದಾರೆ, (Coreldraw/ Photoshop) ತಿಳಿದಿರಬೇಕು) ಕನ್ನಡ ಇಂಗ್ಲಿಷ್ ಟೈಪಿಸ್ಟ್ ಬೇಕಾಗಿದ್ದಾರೆ, (ಜೂನಿಯರ್ ಸೀನಿಯರ್ ಟೈಪಿಸ್ಟ್ ಆಗಿರಬೇಕು) ಟೆಲಿಕಾಲರ್ಸ್ ಬೇಕಾಗಿದ್ದಾರೆ, ಮಾರ್ಕೆಟಿಂಗ್ ಎಕ್ಸಿಕ್ಯೂಟೀವ್ ಬೇಕಾಗಿದ್ದಾರೆ ಬೋಟಿಕ್‌ಗಾಗಿ ಲೇಡಿಸ್ ಟೈಲರ್ ಬೇಕಾಗಿದ್ದಾರೆ (ಅನುಭವ ಇರುವವರಿಗೆ ಆದ್ಯತೆ) ಸಂಪರ್ಕಿಸಿ

7349057709

WANTED TEA SHOP

ಪುಣೇರಿ ಶ್ರೀಮಾನ್ ಅಮೃತತುಲ್ಯ ಚಹಾ ಮಾಡಲು ಹುಡುಗರು ಬೇಕಾಗಿದ್ದಾರೆ ಹಾಗೂ ಪಾವುಬಾಜಿ ಮಾಡಲು ಹುಡುಗರು ಬೇಕಾಗಿದ್ದಾರೆ. ತರಬೇತಿ ಕೊಡಲಾಗುತ್ತದೆ.

6361261621

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ತಕ್ಷಣ ಬೇಕಾಗಿದ್ದಾರೆ

ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು, ಸಂಬಳ: 14,500/– 8 Hours, 26 days, ವಯೋಮಿತಿ 45 ವರ್ಷದೊಳಗೆ, ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:

9620777819 / 9538567819

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Mysuru

MYSURU 9611028523 MANGALORE 9343142258

ಬಟ್ಟಲು ಸಾಂಬ್ರಾಣಿ ಉದ್ಯೋಗ

ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:

7406375196
9880548596

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–

7259865221 / 8867373902

ಇಂದೇ ಸಂಪರ್ಕಿಸಿ

ಮೈಸೂರು ಮತ್ತು ಸುತ್ತಮುತ್ತಲಿನ ಕೈಗಾರಿಕ ಪ್ರದೇಶಗಳಲ್ಲಿರುವ ಕಂಪನಿ ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma Any Degree Pass/Fail ಆದವರಿಗೆ Cashier, Billing, data entry, Packing, Helper, Labeling, Maintenance ಮುಂತಾದ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ –14500–38000 (ESI+PF+OT) ಸೇರಿ ಸಂಪರ್ಕಿಸಿ

7892878915 / 9663704915

HOUSE FOR SALE / RENT

50x30, 2 Portion Sheet House Revenue old House at Raghavendranagar Layout, Mysore

9980423977 / 9611069918

ಬೇಕಾಗಿದ್ದಾರೆ

ತಮಿಳು ಮತ್ತು ಕನ್ನಡ ಮಾತನಾಡಲು ಬರುವ Telecaller ಮತ್ತು Executive ಬೇಕಾಗಿದ್ದಾರೆ. ಸಂಬಳ - 20000/-

8884304444

ಬೇಕಾಗಿದ್ದಾರೆ

ಕರ್ನಾಟಕದಾದ್ಯಂತ ಕಂಪನಿ /ಆಫೀಸ್ ಕೆಲಸಗಳಿಗೆ ಯುವಕ / ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+ಓಟಿ 18000- 48,000/-

953811200/9538811211

ನಿರ್ಮಲ ಸರ್ವೀಸ್

ಸಂಪು

ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ಬೈಕ್ ರೈಡರ್ ಬೇಕಾಗಿದ್ದಾರೆ

ರಾಪಿಡೋ ಬೈಕ್ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ

04045209698

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

ಮಳಿಗೆ ಬಾಡಿಗೆ OR ಭೋಗ್ಯಕ್ಕೆ ಇದೆ

ಇಲವಾಲದ NH ಮುಖ್ಯ ರಸ್ತೆಯಲ್ಲಿ ಉತ್ತರ ದಿಕ್ಕಿಗೆ ಇರುವ ಎರಡನೇ ಮಹಡಿಯ 20x60 ಅಳತೆಯ ಮಳಿಗೆ, ಕಛೇರಿಗೆ ಹಾಗೂ ಕೋಚಿಂಗ್ ಸೆಂಟರ್‌ಗೆ ಅನುಕೂಲವಿದೆ. ಸಂಪರ್ಕಿಸಿ: ಗೋವಿಂದಸ್ವಾಮಿ

9845919111 / 8123448509

ಗಾಯಿತ್ರಿ ಬೋನ್ ಸೆಂಟರ್

ಕೈಕಾಲು, ಮೂಳೆ, ಮಂಡಿ ನೋವುಗಳಿಗೆ ಮಸಾಜ್ ಮತ್ತು ಹಳೆ ನೋವುಗಳಿಗೆ, ಕೈಕಾಲು ಮೂಳೆ ಉಳುಕಿದ್ದಲ್ಲಿ ನವಮೂಲಿಕೆ ತೈಲದಿಂದ ಮಸಾಜ್ ಮಾಡಲಾಗುತ್ತದೆ. Head ಮಸಾಜ್, Body ಮಸಾಜ್ ಮಾಡಲಾಗುತ್ತದೆ. ಕೂದಲು ಬೆಳವಣಿಗೆಗೆ, ಉದುರುವಿಕೆ ನಿಲ್ಲಲು ಆಯಿಲ್ ದೊರೆಯುತ್ತದೆ. ಎಂ.ಆರ್.ದಿನೇಶ್ ಆಚಾರ್

9972650168

SDJ JEWELERS

ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ. Qualification: SSLC/ PUC/ Degree/ Post Graduation ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ Salary : 20,000

8884304444

ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಹಾಗೂ ರಾಮಕೃಷ್ಣನಗರದಲ್ಲಿ ಕೆಲಸ ನಿರ್ವಹಿಸಲು ಪುರುಷರು ವಿದ್ಯಾವಂತ ಹಾಗೂ ಅನುಭವವಿರುವ 40 ವರ್ಷದೊಳಗಿನವರು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ ಇ.ಎಸ್.ಐ, ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:

9731976148

Solarizer



HYGIENIC HOT WATER EVERY DAY!

Solar Water Heater SALES & SERVICE

Bajaj Finserv Available

SUNZONE SOLAR SYSTEM
VM Double Road, Kuvempunagar, Mysuru

9845175443

MOBILE ರಿಪೇರಿ ಟ್ರೈನಿಂಗ್

18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. ಕೂಡಲೇ ಸಂಪರ್ಕಿಸಿ: SMM Institute, ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.

Mob.: 9986926101

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

MUDA SITE FOR SALE

36/42
NEAR SRIRAMPURA
MYSORE (Rs.57 Lak)

30/40 SITE FOR SALE

NIVEDITA NAGARA
(RS. 45 Lak)

PH: +91 99004 64111

ಬಳೆ ಮತ್ತು ಉಂಗುರ

ಸಾಡೇಸಾತಿ ಅಷ್ಟಮ ಪಂಚಮ, ಶನಿದೋಶ, ರಸ್ತೆ ಅಪಘಾತ, ಶನಿದೋಶ ಪೀಡಾ ಪರಿಹಾರಕ್ಕೆ ಕಪ್ಪು ಮತ್ತು ಬಿಳಿ ಕುದುರೆ ಲಾಳದ ಬಳೆ, ಉಂಗುರ ಮಾಡಿಕೊಡಲಾಗುತ್ತದೆ. ಎಂ.ಆರ್.ದಿನೇಶ್ ಆಚಾರ್

9972650168

FOR RENT

Newly constructed house 30'x40' with Granite, Only for Vegetarians at Shanthaveri Gopal Gowda Nagar, Mysore. Contact:

Mob: 7760243484

1 ಲಕ್ಷಕ್ಕೆ ತಿಂಗಳಿಗೆ 2000 ರೂ. ಬಡ್ಡಿ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು

ಚಿನ್ನಾಭರಣದ ವ್ಯವಹಾರಕ್ಕಾಗಿ ಒಂದು ಲಕ್ಷಕ್ಕೆ ತಿಂಗಳಿಗೆ 2000 ರೂ. ಬಡ್ಡಿ ಕೊಡಲಾಗುವುದು. ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು ಆಸಕ್ತಿಯುಳ್ಳವರು ಕರೆಮಾಡಿ MNM ಗೋಲ್ಡ್, ಅಶೋಕ ರಸ್ತೆ, ಮೈಸೂರು

9036991977

ಗಿರವಿ ಚಿನ್ನಾಭರಣ ಖರೀದಿ ಹಾಗೂ EMI ನಲ್ಲಿ ಚಿನ್ನದ ಮೇಲೆ ಸಾಲ

ಯಾವುದೇ ಬ್ಯಾಂಕ್, ಫೈನಾನ್ಸ್ ಮತ್ತು ಗಿರವಿ ಅಂಗಡಿಯಲ್ಲಿ ಇಟ್ಟಿರುವ ಚಿನ್ನಾಭರಣವನ್ನು ಬಿಡಿಸಿ. EMI ನಲ್ಲಿ ಚಿನ್ನದ ಮೇಲೆ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡಲಾಗುವುದು ಹಾಗೂ ಇಂದಿನ ಬೆಲೆಗೆ ಖರೀದಿಸಿ ಉಳಿದ ಹಣ ಕೊಡಲಾಗುವುದು. ಸಂಪರ್ಕಿಸಿ: MNM ಗೋಲ್ಡ್, ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು

9036991977

2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ ಸಂಬಳ

ಪ್ರತಿದಿನ 2 ಲಕ್ಷ ಇನ್‌ವೆಸ್ಟ್‌ಮೆಂಟ್ ಮಾಡುವವರಿಗೆ ಕೆಲಸ ಮತ್ತು ಪ್ರತಿದಿನ 200 ರೂ., ಸಂಬಳ, 300 ರೂ. ಕೊಡಲಾಗುವುದು ಹಾಗೂ ಸಂಜೆ ನಿಮ್ಮ ಹಣ ವಾಪಸ್ ಪಡೆಯಬಹುದು. ಆಸಕ್ತಿಯುಳ್ಳವರು ಕರೆ ಮಾಡಿ. MNM ಗೋಲ್ಡ್, ಅಶೋಕ ರಸ್ತೆ, ಗುಪ್ತ ಹೋಟೆಲ್ ಹತ್ತಿರ, ಮೈಸೂರು

9036991977

ಮನೆಯಿಂದಲೇ ಸಂಪಾದಿಸಿ

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ

7795560970

HOUSE FOR RENT

02 BHK at Vidyaranya Puram, 26th Cross, Mysore
For Vegetarians only

Call - 9900451979

HOUSE FOR RENT

KRS MAIN ROAD, GOKULAM, MYSURU

9900237315

HOUSE FOR RENT

2BHK Flat For Rent, V.V.Mohalla Near Police Station
Broker Excuse

9844381035

WANTED

Front Office
Male / Female
House Keeping
Night Shift only
H.M. Resort

8431169183
08236-295533/44

ಮನೆ ಮಾರಾಟಕ್ಕಿದೆ

20x30

ಮನೆ ಮಾರಾಟಕ್ಕಿದೆ. ಮೂಡ ಅನುಮೋದಿತ ಲೇಔಟ್, ಪ್ರಕೃತಿ ಬಡಾವಣೆ, ಟಿ.ನರಸೀಪುರ ರಸ್ತೆ, ಮೈಸೂರು. ಸಂಪರ್ಕಿಸಿ.

9110847684

HOUSE FOR SALE

30x50 MUDA

NEW 4 BHK Duplex with Home Theatre, N/F Door with Pillar Construction at Somnathnagar, Dattagalli -Rs 1.95 cr (Brokers excuse)

Contact Owner: 9035412545

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ. ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ 1.ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು. 2. ಶಿಷ್ಠರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

VOKKALIGA MATRIMONY

Degree/BE/MBA/MCA/ MBB S/Govt. Employee ವಧು ವರರಿಗಾಗಿ ಸಂಪರ್ಕಿಸಿ: (Contact For all caste)

9343175000

ತಕ್ಷಣ ಬೇಕಾಗಿದ್ದಾರೆ

ಆಫೀಸ್ ಕೆಲಸಕ್ಕಾಗಿ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ ಭೂಮಿಪುತ್ರ ರೈತಮಿತ್ರ #669, ಎಸ್‌ಜೆಸಿಇ ರಸ್ತೆ, ದಿಗಂತ ವೃತ್ತ ಹತ್ತಿರ, ಟಿ.ಕೆ.ಬಡಾವಣೆ, ಮೈಸೂರು

9845395000 / 9845166055

ಟೈಲರಿಂಗ್ ತರಬೇತಿ

ನಮ್ಮಲ್ಲಿ ನುರಿತ ತರಬೇತುದಾರರಿಂದ ಟೈಲರಿಂಗ್ ತರಬೇತಿ ನೀಡಲಾಗುತ್ತದೆ. ಇಂದೇ ಸಂಪರ್ಕಿಸಿ. ಗಾನವಿ ಇಂಟರ್‌ನ್ಯಾಷನಲ್ 22/2, ಚಂದ್ರಗುಪ್ತ ರಸ್ತೆ, ಸಂಗಮ್ ಥಿಯೇಟರ್ ಹತ್ತಿರ, ಮೈಸೂರು

8073502957 / 8123819136
9590666328

ಬೇಕಾಗಿದ್ದಾರೆ

ಹೋಟೆಲ್‌ನಲ್ಲಿ ಕೆಲಸ ಮಾಡಲು ಚೈನಿಸ್ ಕುಕ್ ಹಾಗೂ ಕೌಂಟರ್‌ಗೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ

7406666506

ಬೇಕಾಗಿದ್ದಾರೆ

ಸೋನಾಲಿಕಾ ಟ್ರಾಕ್ಟರ್ ಶೋರೂಂಗೆ ಸೇಲ್ಸ್ ಎಕ್ಸಿಕ್ಯೂಟಿವ್‌ಗಳು (ಮೈಸೂರು, ನಂಜನಗೂಡು & ಟಿ.ನರಸೀಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸಲು) ಆಕರ್ಷಕ ವೇತನ, ಟಿಎ/ಡಿಎ & ಇನ್ಸೆಂಟೀವ್ ಇರುತ್ತದೆ. ನುರಿತ ಮೆಕಾನಿಕ್ ಹಾಗೂ ನಂಜನಗೂಡು ಶಾಖೆಗೆ ಮಹಿಳೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ಶ್ರೀ ಮಂಜುನಾಥ್ ಟ್ರ್ಯಾಕರ್ಸ್, ನಂ.21/5, ಬೋಗಾದಿ ರಿಂಗ್ ರಸ್ತೆ ಸರ್ಕಲ್, ಮೈಸೂರು–26

9845111556 / 9964511175

HOME LOAN

11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ HOUSING LOAN FOR PENSIONERS ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು

8884176836

ತಕ್ಷಣ ಬೇಕಾಗಿದ್ದಾರೆ

ಮೇಟಗಳ್ಳಿ, KRS Road, ಯಾದವಗಿರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮೇಲ್ಪಟ್ಟು ಸಂಬಳ: 15500/-. ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಿ:

9620667819/9880727819

ಬೇಕಾಗಿದ್ದಾರೆ

ನಮ್ಮ ಸಂಸ್ಥೆಯಲ್ಲೇ ಉಳಿದುಕೊಂಡು ಕೆಲಸ ಮಾಡಲು ಆಸಕ್ತಿಯುಳ್ಳ ಯುವಕ/ ಯುವತಿಯರು ಹೋಮ್ ನರ್ಸ್‌ಗಳಾಗಿ ಕಾರ್ಯನಿರ್ವಹಿಸಲು ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಸಂಬಳ 12000ದಿಂದ 16000ವರೆಗೆ (ಉಚಿತ ಊಟ, ವಸತಿ,ತರಬೇತಿ ಇರುತ್ತದೆ) (ಅನುಭವದ ಅಗತ್ಯ ಇಲ್ಲ)ಸಂಪರ್ಕಿಸಿ:

9845665531 /7892480649

ಬೇಕಾಗಿದ್ದಾರೆ

ಮೈಸೂರಿನಲ್ಲಿರುವ ಪ್ರತಿಷ್ಠಿತ ಆಸ್ಪತ್ರೆಯ ಕ್ಯಾಂಟೀನ್ ಮತ್ತು ಡಯಟರಿಯಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ ಹುಡುಗರು ಮತ್ತು ಹುಡುಗಿಯರು Part time and full time ಕೆಲಸಕ್ಕೆ ಬೇಕಾಗಿದ್ದಾರೆ. ಮತ್ತು ಗ್ರೈಂಡರ್ ಕೆಲಸದವರು ಮತ್ತು ದೋಸೆ ಭಟ್ಟರು ಬೇಕಾಗಿದ್ದಾರೆ. Assistant Manager, Supervisors, Desk Co-Ordinators, Stewards Washing, Cooking and House Keeping ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಇ.ಪಿ.ಎಫ್ ಮತ್ತು ಇ.ಎಸ್.ಐ ಹಾಗೂ ಊಟ ತಿಂಡಿ ಸೌಲಭ್ಯವಿರುತ್ತದೆ. ವಯಸ್ಸು 18 ತುಂಬಿರಬೇಕು. ಸಂಪರ್ಕಿಸಬೇಕಾದ ವಿಳಾಸ, ಅಗ್ರಹಾರ, ಮೈಸೂರು

7022392897

ಕೆಲಸಕ್ಕೆ ಬೇಕಾಗಿದ್ದಾರೆ

ನಮ್ಮಲ್ಲಿ ಕೆಲಸ ಮಾಡಲು ಸುಮಾರು 18 ರಿಂದ 25 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ:2nd PUC, Any Degree, ಸಂಬಳ: 10,000/- ಗಾನವಿ ಇಂಟರ್‌ನ್ಯಾಷನಲ್ 01, ಓಲ್ಡ್ ಮಹದೇವಪುರ ಮೇನ್ ರೋಡ್, ಫೋರಮ್ ಮಾಲ್ ಹತ್ತಿರ, ಉದಯಗಿರಿ, ಮೈಸೂರು

8553307927 / 8123819136
6360734164

ಸುವರ್ಣ ಯಾತ್ರ

9/7/22 ಶ್ರೀ ಅಮರನಾಥ ಹಾಗೂ ವೈಷ್ಣೋದೇವಿ ಪ್ರವಾಸ 9 ದಿನಗಳು, ಶ್ರೀನಗರ, ದಾಲ್ ಲೇಕ್, ಗುಲ್ಮಾರ್ಗ್, ಬಾಲ್ಟಲ್ ಹಾಗೂ ಇತರೆ
01/6/22 ಕಾಶಿ ಪ್ರವಾಸ 7 ದಿನಗಳು ಅಯೋಧ್ಯೆ ಪ್ರಯಾಗ್‌ರಾಜ್, ಶ್ರೀ ಬಾಬಾ ಬೈದ್ಯನಾಥ ಹಾಗೂ ಇತರೆ
13/06/22 ಚಾರ್ ಧಾಮ್ ಪ್ರವಾಸ 13 ದಿನಗಳು ಕೇದಾರ್‌ನಾಥ್, ಬದ್ರಿನಾಥ, ಯಮುನೋತ್ರಿ, ಗಂಗೋತ್ರಿ ಹಾಗೂ ಇತರೆ

8970949434 / 9019462508

ಬೇಕಾಗಿದ್ದಾರೆ

ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಬಳ: 12,000-15,000/-

9380142144
ಶಿವರಾಂಪೇಟೆ, ಮೈಸೂರು

HOUSE FOR SALE

MUDA 30x40

New 4 BHK Duplex with 22 Squares House, E/F Door at SBM Layout, Bogadi - Rs.1.40 Cr Pillar construction,100 mtrs from Gaddige Road

Direct Owner: 6361295132

WANTED RADIOLOGIST

At Wayanad, Kerala
Modalities-CT,USG, X ray, Mammogram

Mail to: hrhdl2021@gmail.com
Call- 9820819070

ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ

SUPERVISOR

ಕೆಲಸ ಮಾಡಲು ಬೇಕಾಗಿದ್ದಾರೆ. ಸರ್ಕಾರಿ ಮಾನ್ಯತೆ ಹೊಂದಿರುವ Diploma in Agriculture/Horticulture ESI, PF ಸೌಲಭ್ಯವಿದೆ.

9945537353/7204642920

ಬಾಡಿಗೆಗೆ

ಕುವೆಂಪುನಗರದ ವಿಜಯಬ್ಯಾಂಕ್ ಸರ್ಕಲ್ ಬಳಿ (ಈಸ್ಟ್ ಆಫ್ ವಿಶ್ವಮಾನವ ಜೋಡಿ ರಸ್ತೆ) ಹಾಲಿ ನಡೆಯುತ್ತಿರುವ ಫ್ಲೋರ್‌ಮಿಲ್ ಹಾಗೂ ದಿನಸಿ ಅಂಗಡಿ ಬಾಡಿಗೆಗೆ ದೊರೆಯುತ್ತದೆ.

8105751169
9620607138

ಮನೆ ಬಾಡಿಗೆಗೆ ಇದೆ

20x30 ಅಳತೆಯ 2 ಬೆಡ್ ರೂಮ್ ಇರುವ ಮೊದಲ ಮಹಡಿಯ ಮನೆ ಶ್ರೀರಾಂಪುರ, 2ನೇ ಹಂತದಲ್ಲಿ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)

9845692320

ಶಿಕ್ಷಕರು ಬೇಕಾಗಿದ್ದಾರೆ

BA-B.Ed, B.Sc- B.Ed
M.Sc - B.Ed, PUC- D.Ed

ಸಂದರ್ಶನ: ಸಮಯ: ಬೆಳಿಗ್ಗೆ 10 ರಿಂದ 4ರ ವರೆಗೆ ಸೋಮವಾರ, ಸ್ಥಳ: ಶ್ರೀ ನಂಜುಂಡೇಶ್ವರ ವಿದ್ಯಾಕೇಂದ್ರ, ಗಣಗರ ಹುಂಡಿ (ಆಂಗ್ಲ ಮಾಧ್ಯಮ) ಗದ್ದಿಗೆ ಮೇನ್ ರೋಡ್.

9686036533 / 7892282712

30x40 ಸೈಟು @ Rs.20 ಲಕ್ಷ

ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು. ಮೈದನಹಳ್ಳಿ ಇಲವಾಲ, ಹುಣಸೂರು ರೋಡ್, ಮೈಸೂರು

9538583377

SITES FOR SALE

20x30 - 13.20 Lakhs
30x40 - 26.40 Lakhs

Bank Loan upto 75%, Ready for Registration, Near Gurur Bus Stop, Ramabainagar, Mysuru, DTCP approved, (Corporation Limit) 1.5 kms from J P Nagar Ring Road.

8660105902

WANTED

SECURITY FIELD OFFICER (MALE) CANDIDATE

Experience should have 2-3 Years Fresher's, B S F & Ex-Serviceman can also apply. With good communication Skill. Interest candidates send your CV to E-mail: nimishpvtltd@gmail.com

Contact No. 9513999755

WANTED

N.R. Mohalla ಕಲ್ಯಾಣ ಮಂಟಪಕ್ಕೆ

SUPERVISOR

ಬೇಕಾಗಿದ್ದಾರೆ N.R. Mohalla ಸುತ್ತಮುತ್ತ ಇದ್ದವರಿಗೆ ಮೊದಲ ಆದ್ಯತೆ. Contact:

9113619961

FOR SALE

5 KG Coffee Roaster Bharath Make TOP Condition & 2HP Coffee grinder, Inspection at Manjunatha Coffee Supplier at Chamundipuram Circle, Mysore. Contact:

9448762501/9886340147

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ

1) ಅಡುಗೆ ಭಟ್ಟರು
2) ಕಾಫಿ / ಟೀ ಮಾಡುವವರು
3) ದೋಸೆ ಭಟ್ಟರು
4) ಇಡ್ಲಿ, ವಡೆ ಹಾಕುವವರು
5) ಕ್ಯಾಶಿಯರ್
6) ಕೌಂಟರ್ ಕೆಲಸ

9916256503 / 9986205777

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು

ಪಂ|| ಎಸ್.ಮಣಿಕಂಠನ್
ಮೊ: 9480743991

ಮಹಾಮಾಂತ್ರಿಕ ಅಘೋರಿ ದೈವ ದೇವರ ಬಲಿಷ್ಠ ಪೂಜಾ ಶಕ್ತಿಗಳಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ವಿದ್ಯೆ, ಉದ್ಯೋಗ, ಸಂತಾನ, ಪ್ರೀತಿ, ಪ್ರೇಮ, ಮದುವೆ, ಕೋರ್ಟ್, ಕೇಸು, ದಾಂಪತ್ಯ, ಗಂಡ ಹೆಂಡತಿ ಕಿರಿಕಿರಿ ಇಲ್ಲಿ ಹೇಳುವಂತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ವಿಳಾಸ ಅಶೋಕ ರೋಡ್, ಈಸ್ಟ್ ಕ್ರಾಸ್ 36, ಶುಭಂ ಜ್ಯುವೆಲರಿ ಎದುರು ಕನ್ನಿಕ ಪರಮೇಶ್ವರಿ ದೇವಸ್ಥಾನದ ಹತ್ತಿರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ವರ್ ದೈವ ಚೌಡೇಶ್ವರಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನಸ್ಸಿನಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ವಿಳಾಸ ವಿಳಾಸ ಸಬರ್ಬ್ ಬಸ್‌ಸ್ಟಾಂಡ್ ಹತ್ತಿರ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆರೆಯುತ್ತಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ

ಬೋಗಾದಿ, ಚಟ್ಟಿಹುಂಡಿ, ಮೈಸೂರು ಸುತ್ತಮುತ್ತ ಹಾಗೂ ಬಿಸಿಲವಾಡಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು ಸ್ಟಿವಾರ್ಡ್ ಬೇಕಾಗಿದ್ದಾರೆ. ಉತ್ತಮ ಸಂಬಳ ಮತ್ತು ವಸತಿ ಸೌಲಭ್ಯ ಇರುತ್ತದೆ. ವಯಸ್ಸು: 18ರಿಂದ 45 ವರ್ಷ,SSLS ಪಾಸ್/ಫೇಲ್

9880116412/6366119767

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿನಿ ಹೃತಿಕಾ

ಪವರ್ ಸೇವಿಂಗ್ ಚೇರ್ ಮಾದರಿಗೆ ವಿಜ್ಞಾನಿಗಳ ಮೆಚ್ಚುಗೆ

ಭಾರತೀನಗರ, ಮೇ 6(ಅಣ್ಣೂರು ಸತೀಶ್)– ಇಲ್ಲಿಗೆ ಸಮೀಪದ ಹುಲಿಗೆರೆ ಪುರ ಗೇಟ್‌ನಲ್ಲಿರುವ ಅನಿಕೇತನ ಎಜುಕೇಷನ್ ಟ್ರಸ್ಟ್‌ನಲ್ಲಿ ವ್ಯಾಸಂಗ ಮಾಡುತ್ತಿರುವ 7ನೇ ತರಗತಿ ವಿದ್ಯಾರ್ಥಿನಿ ಎಚ್.ಎಂ. ಹೃತಿಕ ನ್ಯಾಷನಲ್ ಇನ್ನೋವೇಷನ್ ಫೌಂಡೇಷನ್ (ಕೇಂದ್ರ ಯುವ ವಿಜ್ಞಾನ ಸಂಶೋಧನಾ ಸಂಸ್ಥೆ)ಗೆ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಹೃತಿಕಾ ಪವರ್ ಸೇವಿಂಗ್ ಚೇರ್ ಮಾದರಿ ಸಿದ್ಧಪಡಿಸಿ ಆನ್‌ಲೈನ್‌ನಲ್ಲಿ ನಡೆದ ಇನ್ಸ್‌ಫೈರ್ ಅವಾರ್ಡ್ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದಳು. ಈ ಮಾದರಿಯು ಜಿಲ್ಲೆಯ ಯುವ ವಿಜ್ಞಾನಿಗಳ ಗಮನ ಸೆಳೆದು ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಳು. ಈಗ ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ಮದ್ದೂರು ತಾಲೂಕಿಗೆ ಕೀರ್ತಿ ತಂದಿದ್ದಾಳೆ.



ವಿದ್ಯಾರ್ಥಿನಿ ಹೃತಿಕಾ ಸಿದ್ಧಪಡಿಸಿದ ಪವರ್ ಸೇವಿಂಗ್ ಚೇರ್ ಮಾದರಿ ತಯಾರಿಗೆ ಶಿಕ್ಷಕ ಶಿವಮಲ್ಲು ಮಾರ್ಗದರ್ಶನ ನೀಡಿದ್ದರು. ಈ ಮಾದರಿಯು ಇನ್ಸ್‌ಫೈರ್ ಅವಾರ್ಡ್ ವಸ್ತುಪ್ರದರ್ಶನದ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಮಾದರಿಯು ವೈಶಿಷ್ಟ್ಯತೆಯಿಂದ ಕೂಡಿದ ಹಿನ್ನೆಲೆಯಲ್ಲಿ ವಿಜ್ಞಾನಿಗಳು ಹೃತಿಕಾ ಅವರನ್ನು ಆಯ್ಕೆ ಮಾಡಿದ್ದಾರೆ. ಆಯ್ಕೆಯಾದ ಹೃತಿಕಾಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವು, ಹಾಗೂ ಶಾಸಕರು ಮತ್ತು ಸಂಸದರು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ರಮೇಶ್, ಹುಚ್ಚೇಗೌಡ, ಜ್ಯೋತಿಕುಮಾರ್, ಸಿದ್ದೇಗೌಡ, ಶಿವಕುಮಾರ್, ಮಹೇಶ್, ಶಿಕ್ಷಕರು ಸೇರಿದಂತೆ ಆಡಳಿತ ವರ್ಗ ಅಭಿನಂದಿಸಿದ್ದಾರೆ.

ಜಾತಿ ವ್ಯವಸ್ಥೆ ಹುಟ್ಟು ಹಾಕಿರುವವರು ಸ್ವಾರ್ಥಿಗಳು



ಮಳವಳ್ಳಿ, ಮೇ 6(ಮೋಹನ್‌ರಾಜ್)– ಮನುಷ್ಯನ ವೃತ್ತಿಯ ಆಧಾರದ ಮೇಲೆ ಜಾತಿ ನಿರ್ಮಾಣವಾಗಿದ್ದು, ಜಾತಿ ವ್ಯವಸ್ಥೆಯನ್ನು ಹುಟ್ಟು ಹಾಕಿರುವವರು ಸ್ವಾರ್ಥಿಗಳು. ಸಮಾಜದಲ್ಲಿ ಶೋಷಣೆ ಮಾಡುವ ಕಾರಣಕ್ಕಾಗಿ ಕೆಲವು ಜಾತಿ ವ್ಯವಸ್ಥೆ ಮಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ತಾಲೂಕಿನ ಕಲ್ಲಾರೇಪುರ ಗ್ರಾಮದಲ್ಲಿ ಮಹದೇಶ್ವರ ಸೇವಾ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಮಹದೇಶ್ವರ ದೇವಸ್ಥಾನದ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮಾಜದಲ್ಲಿ ಜಾತಿ ವ್ಯವಸ್ಥೆ ಇದ್ದರೆ ಗೌರವ ಸಿಗುತ್ತದೆ. ಹೀಗಾಗಿ ಶೋಷಣೆ ಮಾಡುವ ಅವಕಾಶ ಸಿಗುವ ಕಾರಣಕ್ಕಾಗಿ ಕೆಲವರು ಜಾತಿ ವ್ಯವಸ್ಥೆ ಮಾಡಿದ್ದಾರೆ. ಯಾವುದೇ ಕೆಲಸದಲ್ಲೂ ಸ್ವಾರ್ಥ ಮನೋಭಾವನೆ ಇಲ್ಲದೆ ಭಕ್ತಿಯಿಂದ ದೇವರನ್ನು ನೆನೆದರೆ ಒಳ್ಳೆಯದಾಗುತ್ತದೆ. ದೇವರು ಇದ್ದಾನೆ, ಇಲ್ಲ ಎಂದು ನಾನು ಹೇಳಲ್ಲ ದೇವರು ಎಲ್ಲ ಕಡೆ ಎಲ್ಲೆಲ್ಲೂ ಇದ್ದಾನೆ. ಇದನ್ನೇ ಭಕ್ತ ಪ್ರಹ್ಲಾದ ಸಿನಿಮಾದಲ್ಲೂ ಸಹ ಇದನ್ನೇ ಹೇಳಿರುವುದು ಎಂದರು.

ಎಲ್ಲೆಲ್ಲೂ ದೇವರಿದ್ದಾನೆ. ಬಸ ವಣ್ಣ ದಯವೇ ಧರ್ಮದ ಮೂಲ ಎಂದು ಸಾರಿದರು. ದೇವರು ನಮ್ಮೊಳಗೆ ಇದ್ದಾನೆ. ಮನಸ್ಸು ಶುದ್ಧವಾಗಿ ಇರಬೇಕು ಅಂದರೆ ಇನ್ನೊಬ್ಬರಿಗೆ ಕೆಟ್ಟದನ್ನು ಬಯಸದೇ ಒಳ್ಳೆಯದನ್ನು ಮಾಡುವ ಮನಸ್ಸು ಹೊಂದಿರಬೇಕು. ದೇವರ ಕಣ್ಣು ತಪ್ಪಿಸಿ ಏನು ಮಾಡುವುದಕ್ಕೂ ಆಗದು, ಹೀಗಾಗಿ ನಾವು ಏನೇ ಒಳ್ಳೆಯ, ಕೆಟ್ಟ ಕೆಲಸಗಳನ್ನು ಮಾಡಿದರೂ ದೇವರಿಗೆ ಗೊತ್ತಾಗುತ್ತದೆ ಎಂದು ಹೇಳಿದರು.

ಗ್ರಾಮದಲ್ಲಿ ನಿರ್ಮಿಸಿರುವ ದೇವಸ್ಥಾನ ಚೆನ್ನಾಗಿದ್ದು, ಗ್ರಾಮಸ್ಥರು ಸೇವಾ ಮನೋಭಾವದಿಂದ ದೇವರನ್ನು ಪೂಜಿಸುವುದರ ಜೊತೆಗೆ ನಾಡಿನ ಅಭಿವೃದ್ಧಿಗೆ ಕೈಜೋಡಿಸಬೇಕು. ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಲೆ ಮಹದೇಶ್ವರ ಬೆಟ್ಟದಲ್ಲಿ ಸೇವಾ ಪ್ರಾಧಿಕಾರ ರಚನೆ ಮಾಡಿ ದೇವರ ದರ್ಶನಕ್ಕೆ ಬರುವ ಭಕ್ತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದ ಎಂದರು.

ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ರಾಜ್ಯದ ಆಡಳಿತವನ್ನು ಮತ್ತೊಮ್ಮೆ ಸುಭಿಕ್ಷೆಯಿಂದ ನಡೆಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಬರಲು ನಿಮ್ಮೆಲ್ಲರ ಆಶೀರ್ವಾದ ಮತ್ತು ಜವಾಬ್ದಾರಿ ಅಗತ್ಯವಿದ್ದು, ಬಸವಣ್ಣನವರ ವಚನದಂತೆ ಕಾಯಕವೇ ಕೈಲಾಸ ಕಾಯಕತ್ವದ ಮೂಲಕ ಜವಬ್ದಾರಿಯ ಹೆಜ್ಜೆಯನ್ನು ಇಟ್ಟಿರುವ ಸಿದ್ದರಾಮಯ್ಯ ಅವರಿಗೆ ಹೆಚ್ಚಿನ ರೀತಿಯಲ್ಲಿ ಆಶೀರ್ವಾದ ಮಾಡಬೇಕು ಎಂದರು.

ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಸಿದ್ದರಾಮಯ್ಯ ಪಕ್ಷ ರಾಜಕರಣ ಹೊರತು ಪಡಿಸಿ ನಮ್ಮ ನಾಯಕ, ವಿರೋಧ ಪಕ್ಷದ ನಾಯಕರಾಗಿ ಸಮರ್ಥವಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಸಾಕಷ್ಟು ಒತ್ತಡ ಇರುತ್ತದೆ. ಎಲ್ಲರಂತೆ ನಾನು ಕೂಡ ಸಿದ್ದರಾಮಯ್ಯ ಅವರ ಅಭಿಮಾನಿ, ಪಕ್ಷಕ್ಕೂ ಅಭಿಮಾನಕ್ಕೂ ಸಂಬಂಧವಿಲ್ಲ, ಮುಂದಿನ ದಿನಗಳಲ್ಲಿ ಅವರು ಈ ರಾಜ್ಯದಲ್ಲಿ ಉನ್ನತ ಹುದ್ದೆಯನ್ನು ಏರುವಂತಾಗಲಿ ಎಂದರು.

ದೇವಸ್ಥಾನ ಉದ್ಘಾಟನೆ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ವಿವಿಧ ಹೋಮ ಹವನಗಳನ್ನು ನಡೆಸಲಾಯಿತು. ಶಿಲಾ ಮೂರ್ತಿ ಪ್ರತಿಷ್ಠಾಪನೆ, ವಿಮಾನ ಗೋಪುರದ ಕಳಶ ಸ್ಥಾಪನೆ, ಮಹಾಗಣಪತಿ, ಸುಬ್ರಹ್ಮಣ್ಯ ಸ್ವಾಮಿ, ಮಹದೇಶ್ವರಸ್ವಾಮಿ, ನವಗ್ರಹ ದೇವತೆಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಹಾಗೂ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು.

ಮಹದೇಶ್ವರ ಬೆಟ್ಟದ ಸಾಲೂರು ಮಠದ ಕಿರಿಯ ಸ್ವಾಮೀಜಿ ಶ್ರೀ ಶಾಂತ ಮಲ್ಲಿಕಾರ್ಜುನಸ್ವಾಮಿ ಹಾಗೂ ಮಡಿವಾಳ ಮಾಚಿದೇವ ಮಹಾಸಂಸ್ಥಾನ ಪೀಠದ ಶ್ರೀ ಬಸವ ಮಡಿವಾಳ ಮಾಚಿದೇವಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕೆಪಿಸಿಸಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಶಿವಣ್ಣ, ಕರ್ನಾಟಕ ರಾಜ್ಯ ಕುರುಬರ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಪುಟ್ಟಬಸವಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಎಂ.ಎನ್.ಸುರೇಶ್, ಗ್ರಾಪಂಅಧ್ಯಕ್ಷೆ ರಮ್ಯಾ ವೆಂಕಟೇಶ್, ಜಿಪಂ ಮಾಜಿ ಸದಸ್ಯರಾದ ಸುಷ್ಮಾ ರಾಜು, ಚಂದ್ರಶೇಖರ್, ತಾಪಂ ಸದಸ್ಯರಾದ ಚಿಕ್ಕಲಿಂಗಯ್ಯ, ಚನ್ನಪಿಳ್ಳೆಕೊಪ್ಪಲು ಸಿದ್ದೇಗೌಡ ಸೇರಿದಂತೆ ಹಲವರು ಇದ್ದರು.

ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಶಾಸಕ ಪುಟ್ಟರಾಜು ಭೂಮಿ ಪೂಜೆ



ಚಿನಕುರಳಿ, ಮೇ 6(ಸಿ.ಎ.ಲೋಕೇಶ್)– ನಳ್ಳೇನಹಳ್ಳಿ ಗ್ರಾಮದಲ್ಲಿ ಹೆಬ್ಬಾಗಿಲು ನಿರ್ಮಾಣ ಹಾಗೂ 16.50 ಲಕ್ಷ ವೆಚ್ಚದಲ್ಲಿ ಮಾದರಿ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆಸಲ್ಲಿಸಿದರು.

ಬಳಿಕ ಮಾತನಾಡಿದ ಶಾಸಕ ಸಿ.ಎಸ್.ಪುಟ್ಟರಾಜು, ನಳ್ಳೇನಹಳ್ಳಿ ಗ್ರಾಮದಲ್ಲಿ ಹೆಬ್ಬಾಗಿಲು ಹಾಗೂ ಗರುಡಕಂಬ ಪ್ರತಿಷ್ಠಾಪನೆ ಮಾಡಲಾಗುತ್ತಿದೆ. ಹೆಬ್ಬಾಗಿಲು ನಿರ್ಮಾಣಕ್ಕಾಗಿ ಶಾಸಕರ ಅನುದಾನದಿಂದ 5 ಲಕ್ಷ ಮಂಜೂರು ಮಾಡಿಕೊಡುವುದಾಗಿ ತಿಳಿಸಿದರು.

ಗ್ರಾಮಕ್ಕೆ ಮಾದರಿ ಅಂಗನವಾಡಿ ಕೇಂದ್ರವನ್ನು ಮಂಜೂರು ಆಗಿದ್ದು, ಅಂಗನವಾಡಿ ನಿರ್ಮಾಣಕ್ಕೆ 16.50 ಲಕ್ಷ ಹಣ ಮಂಜೂರು ಮಾಡಿಕೊಡಲಾಗಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸುವಂತೆ ಸಲಹೆ ನೀಡಿದರು.

ನಳ್ಳೇನಹಳ್ಳಿ ಗ್ರಾಮದ ಅಭಿವೃದ್ಧಿಗೆ ಕ್ರಮ ವಹಿಸಲಾಗಿದ್ದು ಮುಂದಿನ ದಿನಗಳಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ನೆರವು ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷೆ ನವೀನವೆಂಕಟೇಶ್, ಗ್ರಾಪಂ ಸದಸ್ಯರಾದ ಎನ್.ಎಸ್.ಆನಂದ್, ಸುಶೀಲಮ್ಮ, ಮಾಜಿ ಅಧ್ಯಕ್ಷ ಕಾಮನಾಯಕನಹಳ್ಳಿ ರಾಮಚಂದ್ರು, ಶಿಂಡಭೋಗನಹಳ್ಳಿ ನಾಗಣ್ಣ, ಸಿಡಿಪಿಓ ನಟರಾಜು, ಎಂಜಿನಿಯರ್ ವನಜಾ, ಯಜಮಾನರಾದ ಗೋವಿಂದೇಗೌಡ, ನಾಗೇಗೌಡ, ರಾಮೇಗೌಡ, ಪುಟ್ಟಮಾದೇಗೌಡ, ಸೋಮಶೇಖರ್, ಗು.ಗೋವಿಂದೇಗೌಡ, ನಿವೃತ್ತ ಶಿಕ್ಷಕರಾದ ಬೋರೇಗೌಡ, ರವೀಂದ್ರೇಗೌಡ, ನಿವೃತ್ತ ಎಎಸ್ಐ ಜವರೇಗೌಡ ಸೇರಿದಂತೆ ಗ್ರಾಮಸ್ಥರು ಇದ್ದರು.

ದೇವಾಲಯಗಳು ಸಂಸ್ಕೃತಿ,ಪರಂಪರೆಯ ಪ್ರತಿಬಿಂಬ



ಕೆ.ಆರ್.ಪೇಟೆ, ಮೇ 6– ದೇವಾಲಯಗಳು ನಮ್ಮ ಸಂಸ್ಕೃತಿ–ಪರಂಪರೆಯ ಪ್ರತಿಬಿಂಬಗಳಾಗಿವೆ. ನಮ್ಮ ದೇಶದ ಸಂಸ್ಕೃತಿ ಹಾಗೂ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಜೀವಂತ ಕುರುಹುಗಳಾಗಿವೆ ಎಂದು ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ಧರಾಮಯ್ಯ ಹೇಳಿದರು.

ಅವರು ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಆದಿಹಳ್ಳಿ ಗ್ರಾಮದಲ್ಲಿ 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶ್ರೀ ಕೋಡಾಳರಾಯಸ್ವಾಮಿ ದೇವಾಲಯವನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು. ಇಂದಿನ ಒತ್ತಡದ ಜೀವನದಲ್ಲಿ ದೇವರು ಮತ್ತು ಧರ್ಮದ ಮಾರ್ಗದಲ್ಲಿ ಸಾಗುವುದು ಮಾನವರಾದ ನಮಗೆ ಅನಿವಾರ್ಯವಾಗಿದೆ. ಮನಸ್ಸಿಗೆ ಶಾಂತಿ ನೆಮ್ಮದಿಯು ದೊರೆಯುತ್ತದೆ. ಆದಿಹಳ್ಳಿ ಗ್ರಾಮಸ್ಥರು ಶಿಥಿಲವಾಗಿದ್ದ ಶ್ರೀ ಕೋಡಾಳರಾಯಸ್ವಾಮಿ ದೇವಾಲಯವನ್ನು ಪುನರ್ ನಿರ್ಮಾಣ ಮಾಡಿಸಿ ಜೀರ್ಣೋದ್ಧಾರ ಮಾಡಿರುವುದು ಶ್ಲಾಘನೀಯ. ಈ ಹಿಂದೆ ಗ್ರಾಮದಲ್ಲಿ ನಡೆದ ಬೀರೇದೇವರ ದೇವಾಲಯದ ಉದ್ಘಾಟನಾ ಸಮಾರಂಭದಲ್ಲೂ ಭಾಗವಹಿಸಿದ್ದೆ, ಗ್ರಾಮದಲ್ಲಿ ಮತ್ತೊಂದು ದೇವಾಲಯವನ್ನು ನಿರ್ಮಿಸುತ್ತಿರುವ ಬಗ್ಗೆ ವಿಚಾರ ತಿಳಿದು ಸಂತೋಷವಾಗಿದೆ. ನಮಗೆ ದೈನಂದಿನ ಬದುಕಿನ ಜೊತೆಗೆ ದೇವರು ಮತ್ತು ಧರ್ಮದ ವಿಚಾರವೂ ಕೂಡ ಅಷ್ಟೇ ಮುಖ್ಯವಾಗಿದೆ. ಈ ದಿಕ್ಕಿನಲ್ಲಿ ಆದಿಹಳ್ಳಿ ಗ್ರಾಮಸ್ಥರ ಶ್ರದ್ಧಾಭಕ್ತಿ ಮತ್ತು ಆಚಾರಗಳು ನಮಗೆಲ್ಲರಿಗೂ ಸ್ಫೂರ್ತಿದಾಯಕವಾಗಿವೆ ಎಂದು ಡಾ.ಯತೀಂದ್ರ ಹೇಳಿದರು.

ಮಾಜಿ ಶಾಸಕ ಬಿ.ಪ್ರಕಾಶ್ ಅಧ್ಯಕ್ಷತೆ ವಹಿಸಿ ಆದಿಹಳ್ಳಿ ಗ್ರಾಮಸ್ಥರ ದೈವಕಾರ್ಯ ಹಾಗೂ ದೇವಾಲಯಗಳ ಪುನರುಜ್ಜೀವನ ಕೆಲಸವನ್ನು ಶ್ಲಾಘಿಸಿದರು. ಕಾಗಿನೆಲೆ ಕನಕ ಗುರುಪೀಠದ ಕೆ.ಆರ್.ನಗರ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಪಂ ಮಾಜಿ ಸದಸ್ಯ ಬಿ. ನಾಗೇಂದ್ರಕುಮಾರ್, ಕೋಡಿಮಾರನಹಳ್ಳಿ ದೇವರಾಜು, ಸಮಾಜ ಸೇವಕ ವಿಜಯ್ ರಾಮೇಗೌಡ, ಕೆಯುಐಡಿಎಫ್‌ಸಿ ಮಾಜಿ ಅಧ್ಯಕ್ಷ ಮತ್ತಿಘಟ್ಟ ಕೃಷ್ಣಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಮೀನಾಕ್ಷಿ ರಮೇಶ್, ಮನ್‌ಮುಲ್ ನಿರ್ದೇಶಕರಾದ ಹೆಚ್.ಟಿ.ಮಂಜು, ಡಾಲು ರವಿ, ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಜೆ.ಶಶಿಧರ್, ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕಿರಾಂ, ಮುಖಂಡ ಮುಂಬೈ ರಮೇಶ್, ರಾಧಶ್ರೀ, ನಾಗೇಶ್, ಲಕ್ಷ್ಮಮ್ಮ, ಮಹದೇವಣ್ಣ, ಮಡುವಿನಕೋಡಿ ಗಂಗಾಧರ್, ಗ್ರಾ.ಪಂ ಮಾಜಿ ಅಧ್ಯಕ್ಷ ಪೂವನಹಳ್ಳಿ ಸುರೇಶ್, ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್, ಕೆ.ಆರ್.ರವೀಂದ್ರಬಾಬು, ಕೆ.ಪುರುಷೋತ್ತಮ್ ಮತ್ತಿತರರು ಭಾಗವಹಿಸಿದ್ದರು.

ಮೇಲ್ಛಾವಣಿ ಕುಸಿದು ಗಾಯಗೊಂಡಿದ್ದ ಮಹಿಳೆಗೆ ಆರ್ಥಿಕ ನೆರವು

ಶ್ರೀರಂಗಪಟ್ಟಣ, ಮೇ 6(ವಿನಯ್ ಕಾರೇಕುರ)–ಧಾರಾಕಾರ ಮಳೆಗೆ ಮನೆ ಮೇಲ್ಛಾವಣಿ ಕುಸಿದು ಗಾಯಗೊಂಡಿದ್ದ ಮಹಿಳೆಯ ಮನೆಗೆ ಇಂಡುವಾಳು ಸಚ್ಚಿದಾನಂದ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಗುರುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಭಾರೀ ಮಳೆಗೆ ಮಾದಪ್ಪ ಎಂಬುವರ ಮನೆ ಮೇಲ್ಛಾವಣಿ ಕುಸಿದು ಮಾದಪ್ಪನವರ ಪತ್ನಿ ಭಾರತಿ ಕಾಲು ಮುರಿತಕ್ಕೊಳಗಾಗಿದ್ದರು. ಶುಕ್ರವಾರ ಮಾದಪ್ಪ ನಿವಾಸಕ್ಕೆ ಭೇಟಿ ನೀಡಿದ ಸಚ್ಚಿದಾನಂದ ಮಹಿಳೆಯ ಆರೋಗ್ಯ ವಿಚಾರಿಸಿ ವೈಯಕ್ತಿಕವಾಗಿ 20 ಸಾವಿರ ರೂ. ಧನಸಹಾಯ ವಿತರಿಸಿದರು. ಬಳಿಕ ಅದೇ ಗ್ರಾಮದ ರೈತ ನಾಗರಾಜು ಎಂಬವರ 9 ಮೇಕೆಗಳು ಸಿಡಿಲು ಬಡಿದು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಆರ್ಥಿಕ ನೆರವು ನೀಡಿದರು.

ಈ ವೇಳೆ ಗ್ರಾ.ಪಂ ಸದಸ್ಯರಾದ ಸುನೀಲ್, ಲೋಕೇಶ್, ಪೈಲ್ವಾನ್ ಗಿರೀಶ್, ಪೈಲ್ವಾನ್ ಉಮೇಶ್, ಭಾಸ್ಕರ್, ಕಾರ್ತಿಕ್, ಮುಖಂಡರಾದ ಶಂಕರ್, ಶಿವಣ್ಣ, ತಿಮ್ಮಣ್ಣ, ಅಭಿ, ಬೇಕ್ರಿ ಮೋಹನ್, ಚೇತನ್ ಸೇರಿದಂತೆ ಹಲವರು ಇದ್ದರು.



ನಯನಜ ಕ್ಷತ್ರಿಯ ಸಂಘದಿಂದ ಬಸವ ಜಯಂತಿ



ತಿ.ನರಸೀಪುರ, ಮೇ 6(ಎಸ್‌ಕೆ)– 12ನೇ ಶತಮಾನದ ಸಮಾಜ ಸುಧಾರಕ ಬಸವಣ್ಣನವರ ಕಾಯಕವೇ ಕೈಲಾಸ ತತ್ವ ಇಂದಿಗೂ ಪ್ರಚಲಿತದಲ್ಲಿದ್ದು, ಬಸವಣ್ಣ ನವರ ಅನುಭವ ಮಂಟಪ ಅದ್ಭುತ ಪರಿಕಲ್ಪನೆಯಾಗಿದೆ ಎಂದು ನಯನಜ ಕ್ಷತ್ರಿಯ ಸಂಘದ ಟೌನ್ ಕಾರ್ಯದರ್ಶಿ ಈ.ರಾಜು ತಿಳಿಸಿದರು.

ಪಟ್ಟಣದ ಭಗವಾನ್ ಚಿತ್ರಮಂದಿರ ಸಮೀಪ ಆಯೋಜಿಸಿದ್ದ ಬಸವ ಜಯಂತಿಯಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಸವಣ್ಣರವರ ಆಪ್ತ ಕಾರ್ಯದರ್ಶಿ ಹಡಪದ ಅಪ್ಪಣ್ಣ ಅವರನ್ನು ಸ್ಮರಿಸಿ ಅವರು ಮಾತನಾಡಿದರು. ಎಲ್ಲಾ ವರ್ಗದವರನ್ನು ಒಂದೆಡೆ ತರುವ ಪ್ರಯತ್ನದ ಭಾಗವಾಗಿ ಈ ಅನುಭವ ಮಂಟಪ ಪ್ರಾರಂಭಿಸಿದ್ದ ಬಸವಣ್ಣನವರು ಆ ಮೂಲಕ ಸಮಾಜದಲ್ಲಿ ಬೇರೂರಿದ್ದ ಅಂಧಶ್ರದ್ಧೆ ಮತ್ತು ತಾರತಮ್ಯ ದೂರ ಮಾಡಿದ್ದರು. ಬಸವಣ್ಣರವರ ಆದರ್ಶಗಳು ಇಂದಿಗೂ ಜೀವಂತವಾಗಿದ್ದು, ಇದನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ನಯನಜ ಕ್ಷತ್ರಿಯ ಜನಾಂಗದ ಗೌರವಾಧ್ಯಕ್ಷ ಮೂರ್ತಿ, ರೈತ ಸಂಘದ ತಾಲೂಕು ಅಧ್ಯಕ್ಷ ಕುಮಾರಸ್ವಾಮಿ, ಬಿಎಸ್‌ಪಿ ಜಿಲ್ಲಾಧ್ಯಕ್ಷ ಪುಟ್ಟಸ್ವಾಮಿ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಶಿವಣ್ಣ, ತಾಲೂಕು ಸಂಚಾಲಕ ಶಾಂತಕುಮಾರ್, ಸಮಾಜದ ಮುಖಂಡರಾದ ಕುಮಾರ್, ಅಪ್ಪಣ್ಣ, ರವಿ, ಮಹಿಳಾ ಸಂಘದ ನಾಗಮ್ಮ, ಗೀತಾ, ಜ್ಯೋತಿ, ಪದ್ಮ, ನಾಗಮ್ಮ, ಮಡಿವಾಳ ಸಂಘದ ಬಸವರಾಜು, ಮಹೇಶ್ ಮತ್ತಿತರರಿದ್ದರು.

ಸಿಇಟಿ, ನೀಟ್ ತರಬೇತಿ

ಮೈಸೂರು, ಮೇ 6 – ಮೈಸೂರಿನವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್ ವತಿಯಿಂದ ಸಿಇಟಿ, ನೀಟ್ ತರಬೇತಿಯನ್ನು ಮೇ 15 ಆರಂಭಿಸಲಾಗುತ್ತಿದೆ. ಆಸಕ್ತ ಅಭ್ಯರ್ಥಿಗಳು ಮೇ 14 ರೊಳಗೆ ಸಂಚಾಲಕ ಡಾ. ಜಿ. ಗೋವಿಂದರಾಜು ಅವರನ್ನು ದೂ. 0821–2301564, ಮೊ. 9945752592 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮೇ 6 – ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶ್ರೀ ರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಪ್ರಕೃತಿ ಆಯುರ್ವೇದ ಪ್ರತಿಷ್ಠಾನದ ವತಿಯಿಂದ ಮೇ 8 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8277888524 ಸಂಪರ್ಕಿಸಬಹುದು.

ಕನ್ನಡ ಉಳಿಸಿ, ಬೆಳೆಸಲು ಎಲ್ಲರೂ ಒಗ್ಗೂಡಿ ಶ್ರಮಿಸಿ

ಸರಗೂರು ಕಸಾಪ ನೂತನ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಸಲಹೆ



ಸರಗೂರು, ಮೇ 6(ನಾಗೇಶ್)– ಶತಮಾನಗಳ ಇತಿಹಾಸವಿರುವ ಕನ್ನಡ ಭಾಷೆ ಉಳಿಸಿ, ಬೆಳೆಸಲು ಕನ್ನಡಿಗರೆಲ್ಲರೂ ಒಗ್ಗೂಡಿ ಶ್ರಮಿಸಬೇಕು ಎಂದು ಸರಗೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನೂತನ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ ಸಲಹೆ ನೀಡಿದರು.

ಪಟ್ಟಣದ ಪ್ರಗತಿ ವಿದ್ಯಾಸಂಸ್ಥೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್‌ನ 108ನೇ ಸಂಸ್ಥಾಪನಾ ದಿನಾಚರಣೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ಉಳಿವಿಗೆ ಎಲ್ಲೆಡೆ ಕೂಗು ಕೇಳಿ ಬರುತ್ತಿದೆ. ಇಂಥ ಸಂದರ್ಭದಲ್ಲಿ ಭಾಷೆ ಉಳಿವು, ಬೆಳವಣಿಗೆಗಾಗಿ ಶ್ರಮಿಸಬೇಕಿದೆ. ಇದಕ್ಕೆ ಕನ್ನಡಪರ ಸಂಘಟನೆಗಳು, ಕನ್ನಡಿಗರು ಬೆಂಬಲ ನೀಡಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯ ಪ್ರವೃತರಾಗಬೇಕು. ಜೊತೆಗೆ ಗಡಿನಾಡು ಕನ್ನಡಿಗರು ಭಾಷೆಯ ಬಗ್ಗೆ ಗೌರವ, ಅಭಿಮಾನ ಬೆಳೆಸಿಕೊಳ್ಳಬೇಕು ಎಂದರು.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಕನ್ನಡ ಭಾಷೆ ತನ್ನದೇ ಆದ ಇತಿಹಾಸ ಹೊಂದಿದ್ದು, ಕವಿಗಳೂ ಕನ್ನಡ ಸಾಹಿತ್ಯ ಬೆಳವಣಿಗೆಗೆ ಮುಂದಾಗಿದ್ದರು. ಅದೇ ಹಾದಿಯಲ್ಲಿ ಎಲ್ಲರೂ ಸಾಗುತ್ತಿದ್ದಾರೆ. ಮೈಸೂರು ಮಹಾರಾಜರು ಭಾಷೆ ಉಳಿವಿಗಾಗಿ ದುಡಿದಿದ್ದಾರೆ. ಪರಿಷತ್‌ಗೆ 108 ವರ್ಷ ಸಂದಿರುವುದು ಎಲ್ಲರಿಗೂ ಸಂತಸ ತಂದಿದೆ ಎಂದರು.

ವಕೀಲ ಡಾ.ಎಂ.ಎನ್.ರವಿಶಂಕರ್ ಮಾತನಾಡಿ, ಕನ್ನಡ ಉಳಿಸಿ ಬೆಳಸಲು ಕನ್ನಡಿ ಗಾರದ ನಾವು ಮುಂದಾಗಬೇಕು. ಸರಗೂರು, ಹೆಚ್.ಡಿ.ಕೋಟೆ ತಾಲೂಕುಗಳಲ್ಲಿ ಹೆಚ್ಚು ಗಡಿನಾಡುಗಳಿದ್ದು ಕನ್ನಡ ಭಾಷೆ ಉಳಿಸಿ ಬೆಳಸಲು ಈ ಭಾಗದ ಕಸಾಪ ನಿರಂತರ ವಾಗಿ ಶ್ರಮಿಸುತ್ತಿದೆ. ಯುವ ಸಮೂಹ ಕನ್ನಡ ಪುಸ್ತಕ ಓದುವ ಹವ್ಯಾಸ ಬೆಳಸಿಕೊಳ್ಳ ಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಪಪಂ ಅಧ್ಯಕ್ಷೆ ರಾಧಿಕಾ, ಜಿಪಂ ಮಾಜಿ ಸದಸ್ಯೆ ಭಾಗ್ಯಲಕ್ಷ್ಮಿ, ಸಂಸ್ಥೆಯ ಪಳನಿಸ್ವಾಮಿ, ಜೆ.ಪಿ.ಶಿವರಾಜು, ಚಿತ್ತಾಮದ ಮಹದೇವಸ್ವಾಮಿ, ಸಂಸ್ಥೆ ಆಡಳಿತಾಧಿಕಾರಿ ಶಾಂತರಾಜು, ಎಚ್.ಎಂ.ಸವಿತಾ, ಹೆಚ್.ಎಸ್. ಸತೀಶ್ ಸೇರಿದಂತೆ ಇನ್ನಿತರರಿದ್ದರು.

ಸಿದ್ದಾಪುರ ಪಿಎಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ



ಭೇರ್ಯ, ಮೇ 6– ಇಲ್ಲಿನ ಸಿದ್ದಾಪುರ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಎಸ್.ಹರಿಚಿದಂಬರ, ಉಪಾಧ್ಯಕ್ಷೆಯಾಗಿ ಎಸ್.ಡಿ.ದೇವಮ್ಮ ಅವಿರೋಧವಾಗಿ ಆಯ್ಕೆಯಾದರು. ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಂ.ಎಸ್.ಹರಿಚಿದಂಬರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಎಸ್.ಡಿ.ದೇವಮ್ಮ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯನ್ನು ಸಹಕಾರ ಇಲಾಖೆಯ ಜೆಹಿತೇಂದ್ರ ಪ್ರಕಟಿಸಿದರು.

ನೂತನ ಅಧ್ಯಕ್ಷ ಎಂ.ಎಸ್.ಹರಿಚಿದಂಬರ ಮಾತನಾಡಿದರು. ನಿರ್ದೇಶಕರಾದ ಅನಿಲ್ ರಾಜ್, ಕೆ.ಎಸ್.ರಂಗೇಶ್ ಕುಮಾರ್, ಕೆ.ವಿ.ಕೃಷ್ಣೇಗೌಡ, ಗೋಪಾಲಚಂದ್ರ, ಚಿಕ್ಕಈರೇಗೌಡ, ಎಂ.ಆರ್.ಮಹದೇವ, ಮಂಜಮ್ಮ, ಕೆ.ವಿ.ಕೃಷ್ಣೇಗೌಡ, ಕೃಷ್ಣೇಗೌಡ, ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಸುಧೀರ್, ಕಾರ್ಯದರ್ಶಿ ಪ್ರೇಮಕುಮಾರ್, ಸಿಬ್ಬಂದಿಗಳಾದ ತ್ಯಾಗರಾಜು, ಅಶ್ವಿನಿ, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಎಸ್.ಟಿ.ಕೀರ್ತಿ, ಹೆಬ್ಬಾಳು ಗ್ರಾಪಂ ಸದಸ್ಯ ಮನು, ಪಿಎಲ್‌ಡಿ ಬ್ಯಾಂಕ್ ಮಾಜಿ ನಿರ್ದೇಶಕರ ದಾಮೋದರ್, ಮುಖಂಡರಾದ ಗುರು, ಸತೀಶ್, ಡೈರಿ ಪ್ರಕಾಶ್, ಗೌಡಯ್ಯ, ಜಗದೀಶ್ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಹೆಮ್ಮಚ್ಚಿಮನೆ ಕ್ರಿಕೆಟ್ ಕಪ್ ಪಂದ್ಯಾವಳಿಗೆ ಚಾಲನೆ



ಗೋಣಿಕೊಪ್ಪ, ಮೇ 6– ಅಖಿಲ ಅಮ್ಮ ಕೊಡವ ಸಮಾಜ ಮತ್ತು ಹೆಮ್ಮಚ್ಚಿಮನೆ ಕುಟುಂಬ ಸಹಯೋಗದಲ್ಲಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದಲ್ಲಿ ಹೆಮ್ಮಚ್ಚಿಮನೆ ಕ್ರಿಕೆಟ್ ಕಪ್ ಪಂದ್ಯಾವಳಿಗೆ ಶುಕ್ರವಾರ ಚಾಲನೆ ನೀಡಲಾಯಿತು.

ಅಯ್ಯಪ್ಪ ದೇವಸ್ಥಾನ ಆವರಣದಿಂದ ಮೈದಾನದವರೆಗೆ ಕೊಡವ ಸಾಂಪ್ರದಾಯಿಕ ಉಡುಪು ತೊಟ್ಟು ಮೆರವಣಿಗೆ ನಡೆಸಲಾಯಿತು. ವಾಲಗ, ಡೊಳ್ಳು ಕುಣಿತ ಗಮನ ಸೆಳೆಯಿತು. ಭರತ ನಾಟ್ಯ ಪ್ರದರ್ಶನ ನಡೆಯಿತು. ಮಹಿಳೆಯರು ಉಮ್ಮತ್ತಾಟ್ ಮೂಲಕ ಸಂಸ್ಕೃತಿ ಅನಾವರಣಗೊಳಿಸಿದರು. ಕಾವೇರಿಯನ್ನು ಸ್ತುತಿಸಿದರು. ಕೊಡವ ವಾಲಗ ಆಟ್ ಕಾರ್ಯಕ್ರಮದಲ್ಲಿ ಕುಣಿದು ಸಂಭ್ರಮಿಸಿದರು.

ಅಂತಾರಾಷ್ಟ್ರೀಯ ಮಾಜಿ ಹಾಕಿ ಆಟಗಾರ ಹೆಮ್ಮಚ್ಚಿಮನೆ ಸಂದೀಪ್ ಸೋಮೇಶ್ ಅವರನ್ನು ಈ ಸಂದರ್ಭ ಸನ್ಮಾನಿಸಲಾಯಿತು. ಕಸ್ತೂರಿ ಗೋವಿಂದಮ್ಮಯ್ಯ ಹಾಗೂ ಬಾಚಮಂಡ ಗೌರಮ್ಮ ಮಾದಮ್ಮಯ್ಯ ಬರೆದಿರುವ ಕಾವೇರಿ ಪಳಮೆ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

ಉದ್ಘಾಟನೆ; ಅಂತಾರಾಷ್ಟ್ರೀಯ ಮಾಜಿ ಹಾಕಿ ಆಟಗಾರ ಹೆಮ್ಮಚ್ಚಿಮನೆ ಸಂದೀಪ್ ಸೋಮೇಶ್ ಬ್ಯಾಟ್ ಮಾಡುವ ಮೂಲಕ ಪಂದ್ಯಾವಳಿಯನ್ನು ಉದ್ಘಾಟಿಸಿದರು.

ಸಭಾ ಕಾರ್ಯಕ್ರಮವನ್ನು ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಮುಖ್ಯಸ್ಥ ಡಾ.ಚೆಪ್ಪುಡೀರ ಜಿ ಕುಶಾಲಪ್ಪ ಉದ್ಘಾಟಿಸಿ ಮಾತನಾಡಿ, ಕೊಡವ ಮೂಲ ನಿವಾಸಿಗಳು ಹಿರಿಯರಿಂದ ಬಂದಿರುವ ಮಣ್ಣನ್ನು ರಕ್ಷಿಸಲು ಮುಂದಾಗಬೇಕಿದೆ. ಕೃಷಿ ನಷ್ಟದ ನೆಪದಲ್ಲಿ ಮಾರಾಟ ಸಲ್ಲದು. ಕೃಷಿಯಲ್ಲಿ ನಷ್ಟ ಎದುರಾದರೆ ನಾವು ಉಪಾಯ ಕಂಡುಕೊಳ್ಳುವುದು ಉತ್ತಮ. ಭೂಮಿಯಲ್ಲಿ ವ್ಯವಹಾರ ನಡೆಸುವ ಬಗ್ಗೆ ಚಿಂತನೆ ನಡೆಸಬೇಕಿದೆ. ಆಗ ಮಾತ್ರ ಮಣ್ಣಿನ ಸಂಸ್ಕೃತಿ ಪೋಷಣೆ ಸಾಧ್ಯ. ಜನಾಂಗದ ಉಳಿವು ಸಾಧ್ಯ ಎಂದರು.

ಹಿರಿಯರಾದ ಪಾಡಿಯಮ್ಮಂಡ ಮುರಳಿ ಕರುಂಬಮಯ್ಯ ಮಾತನಾಡಿ, ಕೊಡವ ಹಾಕಿ ಜನಕ ಪಾಂಡಂಡ ಕುಟ್ಟಪ್ಪ ಅವರ ಮಾರ್ಗದರ್ಶನದಿಂದ ಕೊಡವ ಕೌಟುಂಬಿಕ ಹಾಕಿ ವಿಶ್ವ ಮಟ್ಟದಲ್ಲಿ ಹೆಸರು ಪಡೆದುಕೊಂಡಿದೆ. ಇದರಿಂದ ಬೇರೆ ಬೇರೆ ಜನಾಂಗದವರು ಕ್ರೀಡೆ ಮೂಲಕ ಒಂದಾಗುತ್ತಿದ್ದಾರೆ. ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ಅಮ್ಮಕೊಡವರು ಮಣ್ಣು, ಭಾಷೆ, ಸಂಸ್ಕೃತಿ ಆಚಾರ–ವಿಚಾರ ರಕ್ಷಣೆಗೆ ಮುಂದಾಗಬೇಕು ಎಂದು ಹಿರಿಯರಾದ ಹೆಮ್ಮಚ್ಚಿಮನೆ ಜಿ. ವಿಠಲ, ಡಾ. ಹೆಮ್ಮಚ್ಚಿಮನೆ ಸರಸ್ವತಿ ಸೋಮೇಶ್ ಕರೆ ಕೊಟ್ಟರು.

ಅಖಿಲ ಅಮ್ಮಕೊಡವ ಸಮಾಜ ಅಧ್ಯಕ್ಷ ಬಾನಂಡ ಪ್ರತ್ಯು ಮಾತನಾಡಿ, ಸರ್ಕಾರ ಅಮ್ಮಕೊಡವ ಅಭಿವೃದ್ಧಿ ನಿಗಮ ಸ್ಥಾಪನೆಗೆ ಮುಂದಾಗಬೇಕು ಎಂದರು.

ಈ ಸಂದರ್ಭ ಕಾನೂರು ಗ್ರಾಪಂ ಸದಸ್ಯೆ ಹೆಮ್ಮಚ್ಚಿಮನೆ ಧರಣಿ, ಶ್ರೀಕೃಷ್ಣ ಅಮ್ಮಕೊಡವ ಪುರುಷ ಸಂಘದ ಅಧ್ಯಕ್ಷ ಹೆಮ್ಮಚ್ಚಿಮನೆ ಧನು, ನಿವೃತ್ತ ಅಧ್ಯಾಪಕಿ ಹೆಮ್ಮಚ್ಚಿಮನೆ ಮೀನಾಕ್ಷಿ ಗೋಪಾಲ್, ನಿ. ಉಪ ಆಯುಕ್ತ ಹೆಮ್ಮಚ್ಚಿಮನೆ ವಿಶು, ನಿವೃತ್ತ ರಾಜಸ್ವ ನಿರೀಕ್ಷಕ ಹೆಮ್ಮಚ್ಚಿಮನೆ ಎ. ನಾಣಮಯ್ಯ, ನಿ. ಶಿಕ್ಷಕ ಎ ನಾಣಮಯ್ಯ ಇದ್ದರು.

ಫಲಿತಾಂಶ; ಹೆಮ್ಮಚ್ಚಿಮನೆ ಕ್ರಿಕೆಟ್ ಕಪ್‌ನಲ್ಲಿ ಆಂಡಮಾಡ, ಬಲ್ಯಂಡ ಹಾಗೂ ಕೊಂಡಿಜಮ್ಮಂಡ ತಂಡಗಳು ಗೆಲುವು ದಾಖಲಿಸಿ ಮುಂದಿನ ಸುತ್ತಿಗೆ ಪ್ರವೇಶ ಪಡೆದವು.

ನಾಳೆಯಿಂದ ಶ್ರೀ ಮಾರಿಯಮ್ಮ ಕರಗೋತ್ಸವ

ಮಡಿಕೇರಿ, ಮೇ 6– ನಗರದ ನಾಲ್ಕು ಶಕ್ತಿ ದೇವಾಲಯಗಳಲ್ಲೊಂದಾದ ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದಲ್ಲಿ ಮೇ 8 ರಿಂದ ಮೇ 11ರವರೆಗೆ ಶ್ರೀ ಮಾರಿಯಮ್ಮ ದೇವಿಯ ಕರಗೋತ್ಸವ ನಡೆಯಲಿದೆ.



ಮೇ 8 ರಂದು ಸಂಜೆ ಪಂಪಿನ ಕೆರೆಯಿಂದ ಶ್ರೀ ಕಂಚಿ ಕಾಮಾಕ್ಷಿಯಮ್ಮ, ಶ್ರೀ ಮಾರಿಯಮ್ಮ ಶಕ್ತಿ ಕರಗಗಳ ಬೇವಿನ ಮೆರವಣಿಗೆ ಆರಂಭವಾಗಲಿದೆ. ಮೇ 9, 10 ರಂದು ದೇವಾಲಯದಲ್ಲಿ ವಿಶೇಷ ಪೂಜೆಗಳು ಜರುಗಲಿದೆ. ಮೇ 11 ರಂದು ಸಂಜೆ ದೇವಾಲಯದಲ್ಲಿ ದೇವಿಗೆ ವಿಶೇಷವಾದ ದೀಪಗಳ ಆರಾಧನೆಯ ನಂತರ ಕರಗಗಳ ವಿಸರ್ಜನೋತ್ಸವ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗುವಂತೆ ದೇವಾಲಯದ ಆಡಳಿತ ಮಂಡಳಿ ಕೋರಿದೆ.

ಇತಿಹಾಸ: ಹಿಂದಿನ ಕಾಲದಲ್ಲಿ ಭೀಕರ ಸಾಂಕ್ರಾಮಿಕ ರೋಗಗಳಿಂದ ಊರಿನಲ್ಲಿ ಸಾವು–ನೋವುಗಳ ಸಂಖ್ಯೆ ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ರೋಗವನ್ನು ಹೋಗಲಾಡಿಸಲು ಊರಿನ ಹಿರಿಯರು ಸೇರಿ ನಾಡಿನ ಸುಭಿಕ್ಷೆಗಾಗಿ ಶಕ್ತಿ ದೇವತೆಗಳ ಪ್ರಾರ್ಥನೆಯೊಂದಿಗೆ ಕರಗ ಆರಾಧನೆ ಆರಂಭವಾಯಿತು. ಅದರಲ್ಲೂ ವಿಶೇಷವಾಗಿ ಶ್ರೀ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಆಗಿನ ಕಾಲದಿಂದಲೇ ಸಾಂಕ್ರಾಮಿಕ ರೋಗಗಳನ್ನು ಊರಿನಿಂದ ಹೊರಗಟ್ಟಲು ಬೇವಿನ ಸೊಪ್ಪಿನ ಶಕ್ತಿ ಕರಗೋತ್ಸವ ಆರಂಭಿಸಲಾಯಿತು ಎಂಬ ಪ್ರತೀತಿ ಇದೆ.

ಆಡಳಿತದಲ್ಲಿ ಕೊಡವ ಭಾಷೆ ಅನುಷ್ಠಾನಕ್ಕೆ ಆಗ್ರಹಿಸಿ ಮೇ 9ರಂದು ಸಿಎನ್‌ಸಿ ಧರಣಿ



ಮಡಿಕೇರಿ, ಮೇ 6–ಆಡಳಿತದಲ್ಲಿ ಕೊಡವ ಭಾಷೆಯನ್ನು ಅನುಷ್ಠಾನಕ್ಕೆ ತರಬೇಕೆಂದು ಒತ್ತಾಯಿಸಿ, ಕೊಡವ ನ್ಯಾಷನಲ್ ಕೌನ್ಸಿಲ್ ಮೇ 9ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಲಿದೆ. ಪತ್ರಿಕಾ ಪ್ರಕಟಣೆ ನೀಡಿರುವ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಸಂವಿಧಾನದ 347, 350, 350ಎ ಮತ್ತು 350ಬಿ ವಿಧಿಗಳಡಿ ಕೊಡವರ ಮಾತೃಭಾಷೆಯಾಗಿರುವ ಕೊಡವ ಭಾಷೆಯನ್ನು ಆಡಳಿತದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ದೆಹಲಿಯಲ್ಲಿ ನಡೆದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳ ಸಭೆಯಲ್ಲಿ ನ್ಯಾಯಾಲಯಗಳಲ್ಲಿ ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡಬೇಕೆಂದು ಪ್ರಧಾನಿ ಮೋದಿ ಹಾಗೂ ಸಿಜೆ ಎನ್.ವಿ.ರಮಣ ಅವರು ಕರೆ ನೀಡಿದ್ದು, ಕೊಡವ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು ಎಂಬ ತಮ್ಮ ಬೇಡಿಕೆ ಅದಕ್ಕೆ ಪೂರಕವಾಗಿದೆ ಎಂದಿದ್ದಾರೆ.


ಈವರೆಗೆ ಎಡವಿದ್ದ ಹಿಂದೂ ಸಮಾಜ ಜಾಗೃತಗೊಳ್ಳುತ್ತಿದೆ

ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್

ಕುಶಾಲನಗರ, ಮೇ 6–ಹಿಜಾಬ್ ಪ್ರಕರಣದಿಂದ ರಾಜ್ಯದಲ್ಲಿ ದೊಡ್ಡಮಟ್ಟದ ಚಿಂತನ–ಮಂಥನ ಉಂಟಾಗಿದ್ದು ಹಿಂದೂ ಸಮಾಜ ಜಾಗೃತವಾಗುತ್ತಿದೆ ಎಂದು ಶ್ರೀರಾಮಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹೇಳಿದರು.

ಕುಶಾಲನಗರದ ಖಾಸಗಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿವರೆಗೆ ಎಡವಿರುವ ಹಿಂದೂ ಸಮಾಜ ಇದೀಗ ಸುಧಾರಿಸಿಕೊಳ್ಳುತ್ತಿದೆ. ಮುಂದೆ ವಕ್ಫ್ ಬೋರ್ಡ್ ಗೋಲ್ಮಾಲ್, ಅಜಾನ್ ಕಿರಿಕಿರಿ, ಗೋಹತ್ಯೆ, ಬೈಬಲ್ ಬೋಧನೆ ವಿರೋಧಿ ಹೋರಾಟ ಮತ್ತು ಮತಾಂತರ ನಿಷೇಧ ಕಾಯ್ದೆ ಜಾರಿಗೆ ಒತ್ತಾಯಿಸಿ ಹೋರಾಟ ಮುಂದುವರೆಯಲಿದೆ.

ಮೈಸೂರು ಜಿಲ್ಲೆಯ ಕೌಲಂದೆಯಲ್ಲಿ ರಂಜಾನ್ ಮೆರವಣಿಗೆ ಸಂದರ್ಭ 'ಚೋಟಾ ಪಾಕಿಸ್ತಾನ್' ಎಂಬ ಹೇಳಿಕೆಗಳು ರಾಜ್ಯದಲ್ಲಿ ದೇಶದ್ರೋಹಿ ಶಕ್ತಿ ಇನ್ನೂ ಜೀವಂತ ಇದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಆದ್ದರಿಂದ ಹಿಂದೂ ಸಮಾಜವನ್ನು ಇನ್ನೂ 100 ಪಟ್ಟು ಹೆಚ್ಚು ಜಾಗೃತಿಗೊಳಿಸುವ ಅಗತ್ಯವಿದೆ.



ಅಜಾನ್ ನಿಂದ ಉಂಟಾಗುವ ಶಬ್ಧ ಮಾಲಿನ್ಯ, ಸುಪ್ರೀಂ ತೀರ್ಪು ಉಲ್ಲಂಘನೆ ವಿರೋಧಿಸಿ 9 ರಂದು ರಾಜ್ಯದ ಒಂದು ಸಾವಿರ ದೇವಾಲಯಗಳಲ್ಲಿ ಬೆಳಗ್ಗೆ 5 ಗಂಟೆಗೆ ಹಿಂದೂ ಸಂಘಟನೆಗಳಿಂದ ಸುಪ್ರಭಾತ, ಓಂಕಾರ, ಶಿವನಾಮ ಜಪ, ಹನುಮಾನ್ ಚಾಲಿಸ ಪಠಣ ನಡೆಯಲಿದೆ ಎಂದರು.

ರಾಜಕೀಯ ಸ್ವಾರ್ಥದಿಂದ ಹಿಂದೂ ಕಾರ್ಯಕರ್ತರ ಕಗ್ಗೊಲೆಯಾಗುತ್ತಿದೆ. ಬಿಜೆಪಿ ಸರ್ಕಾರ ಇದ್ದರೂ ಕೂಡ ಎಸ್‌ಡಿಪಿಐ, ಪಿಎಫ್ಐ ಸಂಘಟನೆಗಳ ನಿಷೇಧ ಸಾಧ್ಯವಾಗದಿರುವುದರ ಹಿಂದೆ ಹೀನ ರಾಜಕಾರಣವಿದೆ ಎಂದರು.

ಕಾಂಗ್ರೆಸ್ ಕಳೆದ 60 ವರ್ಷಗಳಲ್ಲಿ ಭಯೋತ್ಪಾದಕರನ್ನು ಬೆಳೆಸಿದೆ. ಇತ್ತೀಚೆಗೆ ಅಧಿಕಾರಕ್ಕೆ ಬಂದ ಬಿಜೆಪಿ ಆಡಳಿತ ಹಿಂದೂ ಸಮಾಜಕ್ಕೆ ಪೂರಕವಾದ ಕೆಲವೊಂದು ಕಾಯ್ದೆ, ಕಾನೂನು, ಯೋಜನೆಗಳನ್ನು ಜಾರಿಗೊಳಿಸಿದೆ. ಆದರೂ ಇದು ತೃಪ್ತಿದಾಯಕವಲ್ಲ ಎಂದರು.

ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಸರಕಾರ ಮತ್ತು ಪೊಲೀಸ್ ಇಲಾಖೆಯ ವೈಫಲ್ಯದಿಂದ ಗೋ ಕಳ್ಳತನ, ಹತ್ಯೆ, ಮಾರಾಟ ಅಕ್ರಮ ದಂಧೆ ಎಗ್ಗಿಲ್ಲದೆ ಮುಂದುವರೆದಿದೆ. ಈ ಸಂಬಂಧ ಟಾಸ್ಕ್ ಫೋರ್ಸ್ ರಚನೆ, ವಿಶೇಷ ಚೆಕ್ ಪೋಸ್ಟ್, ಪೊಲೀಸ್ ಠಾಣಾಧಿಕಾರಿಗಳಿಗೆ ವಿಶೇಷ ನಿರ್ದೇಶನ ಸೇರಿದಂತೆ 10 ಪ್ರಶ್ನೆಗಳನ್ನು ಪಶುಸಂಗೋಪನಾ ಸಚಿವ ಮುಂದಿಡಲಾಗುವುದು ಎಂದರು.

ಕರ್ನಾಟಕ ಮಹಿಳಾ ಸೀನಿಯರ್ ಹಾಕಿ ತಂಡಕ್ಕೆ ಕೊಡಗಿನ ಮರದಾಳು ಯಶಿಕ ಆಯ್ಕೆ

ಮಡಿಕೇರಿ, ಮೇ 6–ಕರ್ನಾಟಕ ಮಹಿಳಾ ಸೀನಿಯರ್ ಹಾಕಿ ತಂಡಕ್ಕೆ ಕೊಡಗಿನ ಮರದಾಳು ಯಶಿಕ ಆಯ್ಕೆಯಾಗಿದ್ದಾರೆ. ಭೂಪಾಲ್‌ನಲ್ಲಿ ಮೇ 6ರಿಂದ ಆರಂಭಗೊಂಡಿರುವ ಹಾಕಿ ಪಂದ್ಯಾವಳಿಯಲ್ಲಿ ಮಹಿಳಾ ಸೀನಿಯರ್ ಹಾಕಿ ತಂಡವನ್ನು ಈಕೆ ಪ್ರತಿನಿಧಿಸುತ್ತಿದ್ದಾರೆ.



8 ನೇ ತರಗತಿ ವಿದ್ಯಾರ್ಥಿನಿಯಾಗಿದ್ದಾಗಲೇ ಯಶಿಕ ಮೊದಲ ಪಂದ್ಯವನ್ನು ಜಾರ್ಖಂಡ್‌ನ ಕರಾಚಿಯಲ್ಲಿ ಆಡಿದರು. ನಂತರದ ದಿನಗಳಲ್ಲಿ ದೆಹಲಿ, ಪಂಜಾಬ್, ಒರಿಸ್ಸಾ, ತಮಿಳುನಾಡು, ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ 20ಕ್ಕೂ ಹೆಚ್ಚು ಬಾರಿ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿದ್ದಾರೆ. ಇಲ್ಲಿಯವರೆಗೆ ಸುಮಾರು 63 ಕ್ಕಿಂತ ಅಧಿಕ ಪದಕಗಳನ್ನು ಗೆದ್ದಿದ್ದಾರೆ. ನಾಯಕಿಯಾಗಿಯೂ ಒಂದು ವರ್ಷ ಕಾಲ ಕರ್ನಾಟಕ ತಂಡವನ್ನು ಮುನ್ನಡೆಸಿದ್ದಾರೆ.

2020ರಲ್ಲಿ ಚೆನ್ನೈನಲ್ಲಿ ನಡೆದ ಸೌತ್‌ಜೋನ್ ಕ್ರೀಡಾಕೂಟ, ಪೊನ್ನಂಪೇಟೆಯಲ್ಲಿ ನಡೆದ ವಿಶ್ವವಿದ್ಯಾನಿಲಯ ಮಟ್ಟದ ಸೌತ್ ಜೋನ್ ಪಂದ್ಯಾವಳಿಯಲ್ಲಿ ಇವರು ಪ್ರತಿನಿಧಿಸಿದ್ದ ತಂಡ ಜಯ ಸಾಧಿಸಿದೆ. ರಾಜಸ್ಥಾನದಲ್ಲಿ ನಡೆದ ಆಲ್ ಇಂಡಿಯಾ ಕ್ರೀಡಾಕೂಟದಲ್ಲಿ ಭಾಗವಹಿಸಿರುವ ಯಶಿಕ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ್ದು, ತಂಡ ಬೆಳ್ಳಿ ಪದಕ ಪಡೆದುಕೊಂಡಿದೆ. ಈ ಪಂದ್ಯಾವಳಿಯಲ್ಲಿ ಇವರು ದಾಖಲೆಯ 8 ಗೋಲುಗಳನ್ನು ಬಾರಿಸಿ ಯಶಸ್ವೀ ಹಾಕಿಪಟು ಎನಿಸಿಕೊಂಡಿದ್ದಾರೆ.

ಫಾರ್ವರ್ಡ್ ಆಟಗಾರ್ತಿ ಮತ್ತು ಮುಖ್ಯ ಸ್ಟ್ರೈಕರ್ ಆಗಿ ಪ್ರತಿನಿಧಿಸಿಯೂ ಯಶಸ್ವಿಯಾಗಿದ್ದಾರೆ. ಇಲ್ಲಿಯವರೆಗೆ ಯಶಿಕ ಒಟ್ಟು 45 ಕ್ಕೂ ಹೆಚ್ಚು ಗೋಲುಗಳನ್ನು ದಾಖಲಿಸಿದ್ದಾರೆ. ಚೇರಳ ಗ್ರಾಮ (ನೆಲ್ಲಿಹಡ್ಲು) ಚೆಟ್ಟಳ್ಳಿ ನಿವಾಸಿ ಮರದಾಳು ಗೋಪಾಲ (ವಿಠಲ) ಹಾಗೂ ನಾಗರತ್ನ ಅವರ ಪುತ್ರಿ ಮರದಾಳು ಯಶಿಕ ಚೆಟ್ಟಳ್ಳಿಯ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 7ನೇ ತರಗತಿಯವರೆಗೆ ವ್ಯಾಸಂಗ ಮಾಡಿದರು. ನಂತರ ಪೊನ್ನಂಪೇಟೆ ಸಾಯಿ ಹಾಕಿ ಕೇಂದ್ರಕ್ಕೆ ಸೇರ್ಪಡೆಯಾಗಿ 8 ರಿಂದ 10 ನೇ ತರಗತಿವರೆಗೆ ಪೂರೈಸಿದರು. ಮೈಸೂರಿನ ಟೆರೇಸ್ಸನ್ ಕಾಲೇಜಿನಲ್ಲಿ ಪಿಯುಸಿ ಮುಗಿಸಿ ಬಿಎ ವಿದ್ಯಾಭ್ಯಾಸದ ಜೊತೆಗೆ ಹಾಕಿ ಪಂದ್ಯಾವಳಿಗೆ ಯಶಿಕ ತಮ್ಮ ಸಮಯವನ್ನು ಮೀಸಲಿಟ್ಟಿದ್ದಾರೆ.

ರಾಷ್ಟ್ರೀಯ ಸಬ್ ಜೂನಿಯರ್ ಹಾಕಿ ತಂಡಕ್ಕೆ ನಾಪೋಕ್ಲುವಿನ ಮೂವರ ಆಯ್ಕೆ

ನಾಪೋಕ್ಲು, ಮೇ 6(ದುಗ್ಗಳ)– ಗೋವಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸಬ್ ಜೂನಿಯರ್ ಹಾಕಿ ತಂಡಕ್ಕೆ ನಾಪೋಕ್ಲುವಿನ ಮೂವರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ನಾಪೋಕ್ಲುವಿನ ಬಿದ್ದಾಟಂಡ ಜಿನ್ನು ನಾಣಯ್ಯ ಹಾಗೂ ನಂದಿನಿ ದಂಪತಿ ಪುತ್ರ ಅಖಿಲ್ ಅಯ್ಯಪ್ಪ, ಕುಲ್ಲೇಟಿರ ಅರುಣ್ ಬೇಬ ಹಾಗೂ ಹೇಮಾವತಿ ದಂಪತಿ ಪುತ್ರ ವಚನ್ ಕಾಳಪ್ಪ ಹಾಗೂ ಬಿದ್ದಾಟಂಡ ಹರ್ಷ ನಾಣಯ್ಯ ಹಾಗೂ ಸ್ವರ್ಣ ದಂಪತಿ ಪುತ್ರ ಬೋಪಣ್ಣ ಆಯ್ಕೆಯಾದ ವಿದ್ಯಾರ್ಥಿಗಳು.

ಅಖಿಲ್ ಅಯ್ಯಪ್ಪ, ವಚನ್ ಕಾಳಪ್ಪ ಸೆಂಟ್ಸ್ ಪೊನ್ನಂಪೇಟೆ ಶಾಲೆಯ ವಿದ್ಯಾರ್ಥಿಗಳಾಗಿದ್ದು, ಬೋಪಣ್ಣ ಡಿವೈಎಸ್‌ಎಸ್ ಕೂಡಿಗೆ ಶಾಲೆಯ ವಿದ್ಯಾರ್ಥಿಯಾಗಿದ್ದಾರೆ. ಕುಲ್ಲೇಟಿರ ವಚನ್ ಕಾಳಪ್ಪ ತಂಡದ ಉಪನಾಯಕನಾಗಿರುವುದು ವಿಶೇಷ.


ಅಖಿಲ್ ಅಯ್ಯಪ್ಪ


ಬೋಪಣ್ಣ


ವಚನ್ ಕಾಳಪ್ಪ

ಪಂದ್ಯಾವಳಿಯು ಮೇ 4ರಿಂದ ಪ್ರಾರಂಭವಾಗಿ 15ರವರೆಗೆ ನಡೆಯಲಿದೆ.

ಅತಿವೃಷ್ಟಿ, ಪ್ರಕೃತಿ ವಿಕೋಪ ಎದುರಿಸಲು ಸನ್ನದ್ಧರಾಗಿ

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚನೆ



ಚಾಮರಾಜನಗರ, ಮೇ 6–ಮಾನ್ಸೂನ್ ಸಂದರ್ಭದಲ್ಲಿ ಅತಿವೃಷ್ಟಿ, ಪ್ರವಾಹ, ನೆರೆಹಾವಳಿ ಸೇರಿದಂತೆ ಪ್ರಕೃತಿ ವಿಕೋಪಗಳಿಂದ ಯಾವುದೇ ಅನಾಹುತಗಳು ಸಂಭವಿಸದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ಸನ್ನದ್ಧರಾಗಿರಬೇಕು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಂದಾಯ, ಪಂಚಾಯತ್ ರಾಜ್ ಇಲಾಖೆ, ಅಗ್ನಿಶಾಮಕ ದಳ, ಪೊಲೀಸ್, ಸ್ಥಳೀಯ ನಗರ ಸಂಸ್ಥೆಗಳು ಒಟ್ಟುಗೂಡಿ ಯಾವುದೇ ಪರಿಸ್ಥಿತಿ ಉಂಟಾದರೂ ನಿಭಾಯಿಸಲು ಅಗತ್ಯ ಕ್ರಮಗಳಿಗೆ ಮುಂದಾಗಬೇಕಾಗುತ್ತದೆ. ವಿಪತ್ತು ಕಾರ್ಯ ನಿರ್ವಹಣೆಗೆ ಪ್ರತ್ಯೇಕವಾಗಿ ವಿಶೇಷ ತಂಡ ರಚಿಸಬೇಕು ಎಂದರು.

ಕೊಳ್ಳೇಗಾಲ ತಾಲೂಕಿನ ದಾಸನಪುರ, ಅಗ್ರಹಾರ, ಹರಳೆ, ಹಳೆ ಹಂಪಾಪುರ, ಹೊಸ ಹಂಪಾಪುರ, ಹಳೆ ಅಣಗಳ್ಳಿ, ಮುಳ್ಳೂರು, ಯಡಕುರಿಯ, ಧನಗೆರೆ, ಸರಗೂರು ಗ್ರಾಮಗಳಲ್ಲಿ ಈ ಹಿಂದೆ ಪ್ರವಾಹ ತಲೆದೋರಿದ್ದು, ಇಂತಹ ಸಂಭವನೀಯ ಪ್ರವಾಹ ಪೀಡಿತ ಗ್ರಾಮಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪ್ರಕೃತಿ ವಿಕೋಪ ಸಂಭವಿಸಿದರೆ ಕಾಳಜಿ ಕೇಂದ್ರಗಳನ್ನು ತೆರೆಯುವ ಅಗತ್ಯ ಬೀಳಬಹುದು. ಇದಕ್ಕಾಗಿ ಸ್ಥಳ ಗುರುತಿಸಬೇಕಿದೆ ಎಂದು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ನೀರಾವರಿ ಕಾಲುವೆಗಳು, ಚೆಕ್ ಡ್ಯಾಂಗಳಲ್ಲಿ ಹೂಳು ತೆಗೆಯಬೇಕು. ಗಿಡ–ಗಂಟಿ, ಕಸ ತ್ಯಾಜ್ಯಗಳನ್ನು ತೆರವುಗೊಳಿಸಬೇಕು. ಗ್ರಾಮ ಮಟ್ಟದ ವಿಪತ್ತು ನಿರ್ವಹಣಾ ಸಮಿತಿ ಸಭೆ ಕರೆದು ಅಗತ್ಯ ಮಾರ್ಗದರ್ಶನ ಸಿದ್ಧತಾ ಕ್ರಮಗಳ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕು. ತಾಲೂಕು ಮಟ್ಟದಲ್ಲಿಯೂ ತಹಸೀಲ್ದಾರ್, ತಾಪಂ ಇಓಗಳು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಭೆ ನಡೆಸಬೇಕು ಎಂದು ತಿಳಿಸಿದರು.

ಬಿರುಗಾಳಿ, ಪ್ರವಾಹ, ಅತಿವೃಷ್ಟಿ ಸಮಯದಲ್ಲಿ ವಹಿಸಬೇಕಿರುವ ಸುರಕ್ಷತಾ ಕ್ರಮಗಳಿಗೆ ಚಾಮುಂಡೇಶ್ವರಿ ವಿದ್ಯುತ್ ಪ್ರಸರಣ ನಿಗಮದ ಅಧಿಕಾರಿ ಸಿಬ್ಬಂದಿ ಎಲ್ಲಾ ಸಿದ್ಧತೆ ಕೈಗೊಳ್ಳಬೇಕು. ಕೋವಿಡ್ ಜೊತೆಗೆ ಪ್ರವಾಹ, ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಡೆಂಗ್ಯೂ, ಮಲೇರಿಯಾ, ಚಿಕನ್ ಗುನ್ಯಾ, ನೀರು ಹಾಗೂ ಸೊಳ್ಳೆಗಳಿಂದ ಹರಡುವ ರೋಗಗಳ ತಡೆಗೆ ಆರೋಗ್ಯ ಇಲಾಖೆ ಗಮನ ಹರಿಸಬೇಕು. ಅಲ್ಲದೆ ನೀರಿನ ಮಾದರಿಗಳನ್ನು ಪರೀಕ್ಷಿಸಿ ಸುರಕ್ಷತೆ ಬಗ್ಗೆ ಖಾತರಿ ಪಡಿಸಿಕೊಳ್ಳಬೇಕು. ಜಾನುವಾರುಗಳಿಗೆ ತಗಲಬಹುದಾದ ರೋಗಗಳ ನಿಯಂತ್ರಣಕ್ಕಾಗಿ ಲಸಿಕೆ ನೀಡುವ ಕಾರ್ಯವನ್ನು ಪೂರ್ಣಗೊಳಿಸಬೇಕು. ಜಾನುವಾರುಗಳಿಗೆ ಆಶ್ರಯ, ಮೇವು, ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಮಾಡಬೇಕು. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮುಂಗಾರು ಹಂಗಾಮಿನ ಬೇಡಿಕೆಗೆ ಅನುಗುಣವಾಗಿ ಬೀಜ ಹಾಗೂ ರಸಗೊಬ್ಬರಗಳನ್ನು ಪೂರೈಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ಜಿಪಂ ಸಿಇಓ ಕೆ.ಎಂ. ಗಾಯತ್ರಿ ಮಾತನಾಡಿದರು. ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್ಪಿ ಕೆ.ಎಸ್. ಸುಂದರ್‌ರಾಜ್, ಡಿಹೆಚ್‌ಓ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಜಿಲ್ಲಾ ಆಸ್ಪತ್ರೆಯ ನೋಡಲ್ ಅಧಿಕಾರಿ ಡಾ.ಮಹೇಶ್, ಆರ್‌ಎಂಓ ಡಾ.ಕೃಷ್ಣಪ್ರಸಾದ್, ತಹಸೀಲ್ದಾರರಾದ ಬಸವರಾಜು, ರವಿಶಂಕರ್, ಮಂಜುಳಾ, ತಾಪಂ ಇಓಗಳಾದ ಪ್ರೇಮ್‌ಕುಮಾರ್, ಮಹೇಶ್, ಧರಣೇಶ್, ಉಮೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೆ.ಸುರೇಶ್, ಅಗ್ನಿಶಾಮಕ ಅಧಿಕಾರಿ ಹರೀಶ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ನಂಜುಂಡಸ್ವಾಮಿ, ಪಶು ಸಂಗೋಪನಾ ಇಲಾಖೆಯ ಉಪನಿರ್ದೇಶಕ ಸುರೇಶ್, ಕೃಷಿ ಇಲಾಖೆಯ ಉಪನಿರ್ದೇಶಕ ಸೋಮಶೇಖರ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಇ ಗಂಗಾಧರಯ್ಯ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಸರಗೂರುಮೋಳೆಯಲ್ಲಿ ಜಲಜೀವನ್ ಮಿಷನ್ ಯೋಜನೆ ಕಾಮಗಾರಿ ವೀಕ್ಷಣೆ



ಚಾಮರಾಜನಗರ, ಮೇ 5–ತಾಲೂಕಿನ ಸರಗೂರುಮೋಳೆ ಗ್ರಾಮದಲ್ಲಿ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸುವ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆ ಜಲಜೀವನ್ ಮಿಷನ್ ಯೋಜನೆ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಗ್ರಾಮಕ್ಕೆ ತೆರಳಿ ವೀಕ್ಷಿಸಿದರು.

ಇದೇವೇಳೆ ಪೈಪ್‌ಲೈನ್ ಕಾಮಗಾರಿ ವೀಕ್ಷಿಸಿದ ಶಾಸಕರು, ಪೈಪ್ ಹೂಳಲು ಮೂರು ಅಡಿ ಆಳ ತೆಗೆಯಬೇಕು, ಆದರೆ ತೆಗೆದಿರುವುದು ಎರಡು ಅಡಿ ಮಾತ್ರ. ಇಲ್ಲಿ ವಾಹನಗಳ ಸಂಚಾರವಿರುವುದರಿಂದ ಪೈಪ್‌ಲೈನ್ ಒಡೆದುಹೋಗುವ ಸಂಭವ ಹೆಚ್ಚು. ಕೂಡಲೇ ಸಂಬಂಧಪಟ್ಟ ಯೋಜನೆಯ ಕಾಮಗಾರಿಯ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು. ಕಾಮಗಾರಿಯಲ್ಲಿ ಲೋಪದೋಷ ಉಂಟಾದರೆ ಇಂಜಿನಿಯರ್‌ಗಳೇ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ವೇಳೆ ಗ್ರಾಮಸ್ಥರು, ಜಲಜೀವನ್ ಮಿಷನ್ ಯೋಜನೆ ಇಂಜಿನಿಯರ್ ಹಾಜರಿದ್ದರು.

ಇಂದು ಕೇಂದ್ರ ಸಚಿವರ ಜಿಲ್ಲಾ ಭೇಟಿ

ಚಾಮರಾಜನಗರ, ಮೇ 6–ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಅವರು ಮೇ 7 ರಂದು ಜಿಲ್ಲೆಗೆ ಭೇಟಿ ನೀಡುವರು.

ಅಂದು ಬೆಳಗ್ಗೆ 11 ಗಂಟೆಗೆ ಸಚಿವರು ಚಾಮರಾಜನಗರಕ್ಕೆ ಆಗಮಿಸುವ ಸಚಿವರು ನಗರದಲ್ಲಿ ಆಯೋಜಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಕುರಿತು ಸ್ಥಳೀಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿಗೆ ತೆರಳುವರೆ ಎಂದು ಪ್ರಕಟಣೆ ತಿಳಿಸಿದೆ.

ವಸತಿ ನಿಯಲಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 6(ಎಸ್‌ಎಸ್)–ನಗರದ ಭ್ರಮರಾಂಬ ಬಡಾವಣೆಯ 2ನೇ ಕಾಂಗ್ರೆಸ್‌ನಲ್ಲಿರುವ ಸ್ಪಂದನಾ ಮೆಟ್ರಿಕ್ ನಂತರದ ಉಚಿತ ಬಾಲೆಯರ ವಸತಿ ನಿಲಯದ 2022–23ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರಥಮ ಪಿಯುಸಿಯಿಂದ ಸ್ನಾತಕೋತ್ತರ ತರಗತಿವರೆಗೆ ಹಾಗೂ ವೃತ್ತಿ ತರಬೇತಿಗಳಾದ ಡಿ.ಎಡ್, ಸಿಪಿ.ಎಡ್, ಬಿಪಿ.ಎಡ್, ಎಂಪಿ.ಎಡ್, ಎಲ್‌ಎಲ್‌ಬಿ, ಬಿ.ಎಡ್, ಡಿಪ್ಲೋಮಾ, ಪಾಲಿಟೆಕ್ನಿಕ್, ಇಂಜಿಯರಿಂಗ್, ಮೆಡಿಕಲ್, ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು, ನಿಗದಿತ ನಮೂನೆಯಲ್ಲಿ ಅರ್ಜಿ ಭರ್ತಿ ಮಾಡಿ ಅಗತ್ಯ ದಾಖಲಾತಿ ಸಹಿತಿ ವಸತಿನಿಲಯಕ್ಕೆ ಸಲ್ಲಿಸಬಹುದಾಗಿದೆ.

ಶಿಕ್ಷಕರ ಕರಡು ಜೇಷ್ಠತಾ ಪಟ್ಟಿ ಪ್ರಕಟ

ಚಾಮರಾಜನಗರ, ಮೇ 6– ಸರ್ಕಾರಿ ಪ್ರೌಢಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೌಢಶಾಲಾ ಗ್ರೇಡ್–1 ಸಂಗೀತ, ನೃತ್ಯ ಮತ್ತು ನಾಟಕ ಶಿಕ್ಷಕರ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಮೇ 16 ರೊಳಗೆ ಸಲ್ಲಿಸಬಹುದಾಗಿದೆ.

ಶಿಕ್ಷಕರು ಸಮರ್ಥನೀಯ ಪೂರಕ ದಾಖಲೆಗಳೊಂದಿಗೆ ದ್ವಿಪ್ರತಿಯಲ್ಲಿ ಮೇ 16 ರೊಳಗೆ ನೇರವಾಗಿ ಚಾಮರಾಜನಗರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಕ್ಷರ ದಾಸೋಹ ನೌಕರರಿಂದ ಪ್ರತಿಭಟನೆ


ಚಾಮರಾಜನಗರದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಕ್ಷರ ದಾಸೋಹ ನೌಕರರು ಪ್ರತಿಭಟಿಸಿದರು.

ಚಾಮರಾಜನಗರ, ಮೇ 6(ಎಸ್‌ಎಸ್)–ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಕ್ಷರ ದಾಸೋಹ ನೌಕರರು ಪ್ರತಿಭಟನೆ ನಡೆಸಿದರು. ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಪ್ರತಿಭಟನೆ ಆರಂಭಿಸಿದ ನೌಕರರು, ಭುವನೇಶ್ವರಿ ವೃತ್ತ, ಡಿವಿಯೇಷನ್ ರಸ್ತೆ, ಸತ್ತಿ ಸರ್ಕಲ್ ಮೂಲಕ ಕಾಂಗ್ರೆಸ್ ಜಿಲ್ಲಾ ಕಚೇರಿಗೆ ತೆರಳಿ ಅಲ್ಲಿದ್ದ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಮನವಿ ಸಲ್ಲಿಸಿದರು.

ಮೆರವಣಿಗೆ ಉದ್ದಕ್ಕೂ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಬಿಸಿಯೂಟ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 60 ವರ್ಷ ತುಂಬಿದ ನೌಕರರನ್ನು ಕೆಲಸದಿಂದ ಬಿಡುಗಡೆ ಗೊಳಿಸುವಾಗ ಅವರಿಗೆ ನಿವೃತ್ತಿ ವೇತನ ಅಥವಾ ಇಡುಗಂಟು ಬಿಡುಗಡೆ ಮಾಡಬೇಕು. ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಹೆಚ್ಚಳ ಮಾಡಿರುವ ಒಂದು ಸಾವಿರ ರೂ. ಹೆಚ್ಚು ವೇತನ ಬಿಡುಗಡೆ ಮಾಡಬೇಕು. ಬಿಸಿಯೂಟ ಯೋಜನೆ ನೌಕರರನ್ನು ಖಾಯಂಗೊಳಿಸಿ, ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಸಂಘದ ಜಿಲ್ಲಾ ಅಧ್ಯಕ್ಷೆ ಶಿವಮ್ಮ, ಪ್ರಧಾನ ಕಾರ್ಯದರ್ಶಿ ಪದ್ಮ, ಖಜಾಂಚಿ ತಾರಾ ಕುಮಾರಿ, ಮುಖಂಡರಾದ ಮಹದೇವಮ್ಮ, ಗೀತಾ, ರತ್ನಮ್ಮ, ರಾಜಮ್ಮ, ಮಂಜುಳಾ, ಶಾಂತಮ್ಮ ಅನಿತಾ ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಭಿವೃದ್ಧಿ ವಿಚಾರದಲ್ಲಿ ಬೇಜವಾಬ್ದಾರಿತನ ಬೇಡ

ಅಧಿಕಾರಿಗಳಿಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ತಾಕೀತು

ಗುಂಡ್ಲುಪೇಟೆ, ಮೇ.6(ಸೋಮ್.ಜಿ)– ಅಭಿವೃದ್ಧಿ ವಿಚಾರದಲ್ಲಿ ಬೇಜವಾಬ್ದಾರಿತನ ಬಿಟ್ಟು ಕಾರ್ಯ ನಿರ್ವಹಿಸಿ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಅಧಿಕಾರಿಗಳಿಗೆ ತಾಕೀತು ಮಾಡಿದರು.

ತಾಲೂಕಿನ ಬೊಮ್ಮನಹಳ್ಳಿ ಗ್ರಾಪಂನಲ್ಲಿ ಶುಕ್ರವಾರ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ ಮೂಲ ಸೌಕರ್ಯ ಕೊರತೆ ಬಗ್ಗೆ ಕೇಳಿ ಬಂದ ದೂರುಗಳ ಹಿನ್ನೆಲೆಯಲ್ಲಿ ಅವರು ಅಸಮಾಧಾನ ವ್ಯಕ್ತಪಡಿಸಿದರು.


ಬೊಮ್ಮನಹಳ್ಳಿಯಲ್ಲಿ ನಡೆದ ಗ್ರಾಪಂ ಜನಸಂಪರ್ಕ ಸಭೆಯಲ್ಲಿ ಸಿ.ಎಸ್.ನಿರಂಜನಕುಮಾರ್ ಮಾತನಾಡಿದರು

ಕುಂದಕೆರೆ ಗ್ರಾಮದಲ್ಲಿ ಕಳೆದ ಒಂದು ತಿಂಗಳಿನಿಂದಲೂ ಕುಡಿಯುವ ನೀರಿನ ಕೊರತೆಯಾಗಿ ಜನತೆ ಪರದಾಡುತ್ತಿದ್ದಾರೆ. ಜನರ ದೂರುಗಳು ಹಾಗೂ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸದ ಪರಿಣಾಮ ಸಾರ್ವಜನಿಕರು ಬೇಸತ್ತಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ಪಿಡಿಓ ರವಿಚಂದ್ರಗೆ ಸೂಚನೆ ನೀಡಿದರು.

ಬೊಮ್ಮನಹಳ್ಳಿ ಗ್ರಾಮಕ್ಕೆ ಕುಡಿಯುವ ನೀರಿನ ಕೊರತೆಯಾಗಿದೆ. ಪಶು ಆಸ್ಪತ್ರೆಗೆ ವೈದ್ಯರಿಲ್ಲದೆ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲಾಗುತ್ತಿಲ್ಲ, ಬೆಳಕು ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂದು ಸಾರ್ವಜನಿಕರು ದೂರುಗಳ ಸುರಿಮಳೆಗರೆದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷ ಮಲ್ಲಿಕಾರ್ಜುನ, ಸದಸ್ಯರಾದ ಕಮಲಮ್ಮ, ಸವಿತಾ, ಚನ್ನಬಸಪ್ಪ, ಸಿದ್ದೇಶ್, ಮಹದೇವಸ್ವಾಮಿ, ಲೋಕೋಪಯೋಗಿ ಇಲಾಖೆಯ ಎಇಇ ರವಿಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ. ಶಿವಮೂರ್ತಿ, ಸಹಾಯಕ ಕೃಷಿ ನಿರ್ದೇಶಕ ಪ್ರವೀಣ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸುತ್ತಮುತ್ತಲ ಗ್ರಾಮಸ್ಥರಿದ್ದರು.

ಪಿಎಸ್‌ಐ ನೇಮಕಾತಿ ಹಗರಣ

ಸಿಐಡಿ ತನಿಖೆಗೊಪ್ಪಿಸಿರುವುದೇ ಸತ್ಯ ಮುಚ್ಚಿ ಹಾಕುವ ಹುನ್ನಾರ

ಆಮ್ ಆದ್ಮಿ ಮುಖಂಡರೂ ಆದ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರರಾವ್ ಆರೋಪ



ಬೆಂಗಳೂರು, ಮೇ 6(ಕೆಎಂಶಿ)– ಪಿಎಸ್‌ಐ ನೇಮಕಾತಿ ಹಗರಣದ ತನಿಖೆಯನ್ನು ಸಿಐಡಿಗೆ ನೀಡಿರುವುದರ ಹಿಂದೆ ಸತ್ಯ ಹೊರಬರುವುದನ್ನು ತಡೆಯುವ ಹುನ್ನಾರವಿದೆ ಎಂದು ಆಮ್ ಆದ್ಮಿ ಪಾರ್ಟಿ ಮುಖಂಡ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್‌ರಾವ್ ಆರೋಪಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರೇ ಆರೋಪಿಗಳಾಗಿರುವ ಹಗರಣವನ್ನು ಬಿಜೆಪಿ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಿಐಡಿಯಿಂದಲೇ ತನಿಖೆ ಮಾಡಿಸುವುದು ಹಾಸ್ಯಾಸ್ಪದ ಎಂದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಯವರ ಮೇಲ್ವಿಚಾರಣೆಯಲ್ಲಿ ಪಿಎಸ್‌ಐ ಹಗರಣದ ಸಮಗ್ರ ತನಿಖೆ ನಡೆಯಬೇಕು. ಆಗ ಮಾತ್ರ ನಿಷ್ಪಕ್ಷಪಾತ ತನಿಖೆ ನಡೆದು, ಸತ್ಯಾಂಶ ಹೊರಬರುತ್ತದೆ. ಆಗ ಅಕ್ರಮದಲ್ಲಿ ಭಾಗಿಯಾದ ಎಲ್ಲ ರಾಜಕಾರಣಿಗಳ ಮುಖವಾಡ ಕಳಚಿ ಬೀಳುತ್ತದೆ. ಇಲ್ಲದಿದ್ದರೆ, ಸಿಐಡಿ ತನಿಖೆಯ ಗಾಳಕ್ಕೆ ಕೇವಲ ಸಣ್ಣಪುಟ್ಟ ಮೀನುಗಳು ಬಲಿಯಾಗಿ, ದೊಡ್ಡ ತಿಮಿಂಗಿಲಗಳು ತಪ್ಪಿಸಿಕೊಂಡು ಬಿಡುತ್ತವೆ ಎಂದು ಭಾಸ್ಕರ್‌ರಾವ್ ಹೇಳಿದರು.

ಮಾಜಿ ಸಿಎಂ ಮಗ ಭಾಗಿ ಆರೋಪ: ಮಾಜಿ ಮುಖ್ಯಮಂತ್ರಿಯೊಬ್ಬರ ಪುತ್ರನು ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಭಾರೀ ಅಕ್ರಮ ಮಾಡಿದ್ದಾರೆಂದು ವಕೀಲ ನಿಯೋಗವು ಸಿಐಡಿಗೆ ದೂರು ನೀಡಿದೆ. ಆ ಮುಖ್ಯಮಂತ್ರಿ ಹಾಗೂ ಅವರ ಮಗ ಯಾರೆಂದು ಬಹಿರಂಗವಾಗಬೇಕು ಎಂದರು.

ಹಗರಣದ ಮೇಲೆ ಹಗರಣ: ಪಿಎಸ್‌ಐ ನೇಮಕಾತಿ ಪರೀಕ್ಷೆ ಮಾತ್ರವಲ್ಲದೇ ಇತರೆ ಹುದ್ದೆಗಳ ನೇಮಕಾತಿಯಲ್ಲೂ ಭಾರೀ ಅಕ್ರಮ ನಡೆದಿದೆ. ಕೆಪಿಎಸ್‌ಸಿ ಪರೀಕ್ಷೆ ಪಾಸ್ ಮಾಡಿಸುವುದಾಗಿ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಲಂಚ ಪಡೆದು ವಂಚಿಸಿ, ನಂತರ ಹಣ ವಾಪಸ್ ಕೇಳಿದಾಗ ಅಭ್ಯರ್ಥಿ ಮೇಲೆ ಗೂಂಡಾಗಿರಿ ಮಾಡಿದ್ದಾರೆಂದು ಅಭ್ಯರ್ಥಿಯೇ ಆರೋಪ ಮಾಡಿದ್ದಾರೆ. ಜೀರೋ ಪರ್ಸೆಂಟ್ ಕಮಿಷನ್ ಆಡಳಿತ ನೀಡುವ ಆಮ್ ಆದ್ಮಿ ಪಾರ್ಟಿಯಿಂದ ಮಾತ್ರ ಕಡಿಮೆ ದರದಲ್ಲಿ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತದೆ. 40 ಪರ್ಸೆಂಟ್ ಬಿಜೆಪಿ ಸರ್ಕಾರವು ಅದಾನಿ ಜೇಬು ತುಂಬಿಸಿ ಕಮಿಷನ್ ಪಡೆಯುವ ಬಿಜೆಪಿ ಸರ್ಕಾರದಿಂದ ಇದು ಸಾಧ್ಯವೇ ಇಲ್ಲ ಎಂದು ಭಾಸ್ಕರ್‌ರಾವ್ ವಾಗ್ದಾಳಿ ನಡೆಸಿದರು. ರಾಜ್ಯ ಸರ್ಕಾರವು ಕಲ್ಲಿದ್ದಲು ಗುತ್ತಿಗೆಯನ್ನು ಅದಾನಿ ಕಂಪನಿಗೆ ನೀಡಿ, ಅಧಿಕ ಬೆಲೆಗೆ ಅದರಿಂದ ವಿದ್ಯುತ್ ಖರೀದಿಸುತ್ತಿದೆ. ಇದರಿಂದ ಸರ್ಕಾರಕ್ಕಾಗುವ ನಷ್ಟವನ್ನು ಭರಿಸಲು ಸಾಮಾನ್ಯ ಜನರ ಜೇಬಿಗೆ ಕತ್ತರಿ ಹಾಕಲಾಗುತ್ತಿದೆ ಎಂದು ಭಾಸ್ಕರ್‌ರಾವ್ ದೂರಿದರು.

ಒಂದನೇ ಪುಟದಿಂದ

ಸರ್ಕಾರ ಉಳಿಯಲ್ಲ

ಪ್ರತಿಯೊಬ್ಬರಿಂದಲೂ 70 ರಿಂದ 80 ಲಕ್ಷ ರೂ. ಪಡೆಯಲಾಗಿದೆ. ಸಹಾಯಕ ಪ್ರಾಧ್ಯಾಪಕರಿಗೆ ಪ್ರಾರಂಭದಲ್ಲೇ 1.25 ಲಕ್ಷ ವೇತನ ಬರುತ್ತದೆ. ಹೀಗಿರುವಾಗ ಆ ಹುದ್ದೆಗೆ ಬರಬೇಕೆಂದು ಪ್ರಯತ್ನಿಸುವವರಿಂದ ಎಷ್ಟು ಲಕ್ಷ ಪಡೆದಿರಬಹುದು ಎಂಬುದನ್ನು ನೀವೇ ಊಹಿಸಿಕೊಳ್ಳಿ ಎಂದರು.

ಎಲ್ಲಾ ಇಲಾಖೆಗಳ ನೇಮಕಾತಿಗೆ ಸಂಬಂಧಪಟ್ಟಂತೆ ಅಕ್ರಮಗಳು ನಡೆಯುತ್ತಿವೆ. ಒಬ್ಬೊಬ್ಬರು ಒಂದೊಂದು ಇಲಾಖೆಯನ್ನು ಹಂಚಿಕೊಂಡು ಬಿಟ್ಟಿದ್ದಾರೆ. ಬಿಜೆಪಿಯಲ್ಲಿ ಇರುವ ವಿಶ್ವಾಸದ ಕೊರತೆಯಿಂದ ಅವರವರೇ ಸತ್ಯವನ್ನು ಹೊರಗೆಡವುತ್ತಾರೆ ಎಂದು ಕುಮಾರಸ್ವಾಮಿ ಭವಿಷ್ಯ ನುಡಿದರು. ಮಹಾರಾಷ್ಟ್ರದಿಂದ ಡೆಪ್ಯುಟೇಷನ್ ಮೇಲೆ ಕಮಿಷ್ನರ್‌ವೊಬ್ಬರು ಬಂದಿದ್ದಾರೆ. ಅವರ ಕಾರ್ಯ ಚಟುವಟಿಕೆ ಏನು ಎಂಬುದು ಹೊರ ಬರುತ್ತಿಲ್ಲ. ಅವರು ಎಲ್ಲೆಲ್ಲಿ ಕುಳಿತು ಏನೇನು ಮಾಡುತ್ತಿದ್ದಾರೆ ಎಂಬುದೂ ಗೊತ್ತಾಗುತ್ತಿಲ್ಲ ಎಂದು ಅವರು ಮಾರ್ಮಿಕವಾಗಿ ನುಡಿದರು.

ನಿಮ್ಮನ್ನು ಸಿಎಂ ಮಾಡ್ತೀವಿ ಅಂದ್ರು!

ಸಿಎಂ ಬೊಮ್ಮಾಯಿಗೆ ಎಚ್ಚರಿಕೆ: ಬಹಳಷ್ಟು ಸಾರಿ ನಿಮ್ಮನ್ನು ಮಂತ್ರಿ ಮಾಡುತ್ತೇನೆ ಎಂದು ಬೊಮ್ಮಾಯಿಯವರು ಹೇಳಿದ್ದಾರೆ. ಆದರೆ ನಾನು ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕೊಡಿ, ನನ್ನನ್ನು ಮಂತ್ರಿ ಮಾಡುವುದು ಬೇಡ ಎಂದು ಹೇಳಿದ್ದೇನೆ ಎಂದರು.

ಅರವಿಂದ್ ಬೆಲ್ಲದ್ ಅವರನ್ನು ಮಂತ್ರಿ ಮಾಡಬಾರದು ಎಂದು ಜಗದೀಶ್ ಶೆಟ್ಟರ್, ಶಂಕರ್ ಪಾಟೀಲ್ ಮುನೇನಕೊಪ್ಪ ಅವರನ್ನು ಮಾಡಿದರು. ನನ್ನ ಬದಲಿಗೆ ಸಿ ಸಿ ಪಾಟೀಲರನ್ನು ಯಡಿಯೂರಪ್ಪ ಮಂತ್ರಿ ಮಾಡಿದರು, ನಂತರ ಇನ್ನೊಬ್ಬರು ಕ್ಯಾಶ್ ಕ್ಯಾಂಡಿಟೇಟ್ ಮಂತ್ರಿ ಆದರು ಎಂದು ಸರ್ಕಾರದಲ್ಲಿ ನಡೆಯುವ ಅಕ್ರಮ, ಭ್ರಷ್ಟಾಚಾರವನ್ನು ಜನತೆ ಮುಂದೆ ಖುಲ್ಲಾಂಖುಲ್ಲ ಯತ್ನಾಳ್ ಬಯಲಿಗೆಳೆದರು.

ಹಾಲಕ್ಕಿ ಸಮುದಾಯದವರಿಗೆ, ವಾಲ್ಮೀಕಿ ಸಮುದಾಯದವರಿಗೆ ಮೀಸಲಾತಿ ಸೌಲಭ್ಯ ನೀಡುತ್ತೇನೆ ಎಂದು ಮುಖ್ಯಮಂತ್ರಿ ಬೊಮ್ಮಾಯಿಯವರು ಹೇಳಿದ ಗಡುವುಗಳೆಲ್ಲವೂ ಮುಗಿದಿದೆ. ರಾಜ್ಯದಲ್ಲಿ ಹಲವು ಸಣ್ಣ ಸಮುದಾಯದವರಿಗೆ ಧ್ವನಿಯೇ ಇಲ್ಲದಂತಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ನಿಮಗೂ ಯಡಿಯೂರಪ್ಪ ಗತಿ: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಘೋಷಿಸದಿದ್ದರೆ ಯಡಿಯೂರಪ್ಪನ ಪರಿಸ್ಥಿತಿ ನಿಮಗೂ ಬರುವುದು ನಿಶ್ಚಿತ ಎಂದು ಬಸನಗೌಡ ಪಾಟೀಲ ಯತ್ನಾಳ್ ಪರೋಕ್ಷವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಎಚ್ಚರಿಕೆ ನೀಡಿದ್ದಾರೆ.

ಕೊಟ್ಟ ಮಾತಿನಂತೆ ಮೀಸಲಾತಿ ನೀಡದಿದ್ದರೆ ಮುಂದಿನ ದಿನಗಳಲ್ಲಿ ಸಮುದಾಯದ 25 ಲಕ್ಷ ಜನರೊಂದಿಗೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಜತೆಗೆ ಶಿಗ್ಗಾಂವಿಯಲ್ಲಿ ಮುಖ್ಯಮಂತ್ರಿಗಳ ಮನೆಯ ಮುಂದೆ ಉಪವಾಸ ಮತ್ತು ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು. ಅಂದು ಮೀಸಲಾತಿ ನೀಡುವ ಭರವಸೆ ನೀಡಿ, ಮಾತು ತಪ್ಪಿದ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡರು. ನೀವೂ ಮಾತು ಕೊಟ್ಟಿದ್ದೀರಿ ಎಂದು ನೆನಪಿಸಿದ ಯತ್ನಾಳ್, ನಾವು ಪಂಚಮಸಾಲಿ ಸಮಾಜಕ್ಕೆ ಸೀಮಿತವಾಗಿ ಮೀಸಲಾತಿ ಕೇಳುತ್ತಿಲ್ಲ. ಇತರೆ ಸಣ್ಣ ಸಮಾಜಗಳಿಗೂ ಮೀಸಲಾತಿ ಪರಿಷ್ಕರಣೆ ಮಾಡುವುದು ಸೇರಿದೆ ಎಂದು ಸ್ಪಷ್ಟಪಡಿಸಿದರು.




ಹಣ ಇದ್ದವರು ಸಿಎಂ ಆಗ್ತಾರೆ ಅನ್ನೋದು ಇತಿಹಾಸದಲ್ಲೇ ಇಲ್ಲ

ವಿಜಯನಗರ/ಬಳ್ಳಾರಿ, ಮೇ 6– ಹಣ ಇದ್ದವರು ಮಾತ್ರ ಸಿಎಂ ಆಗುತ್ತಾರೆ ಎನ್ನುವುದು ಇತಿಹಾಸದಲ್ಲೇ ಇಲ್ಲ ಎಂದು ಹೇಳುವ ಮೂಲಕ ಬಸವನಗೌಡ ಪಾಟೀಲ್ ಯತ್ನಾಳ್‌ಗೆ ಸಚಿವ ಶ್ರೀರಾಮುಲು ತಿರುಗೇಟು ನೀಡಿದ್ದಾರೆ. ಬಳ್ಳಾರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಶ್ರೀರಾಮುಲು ಅವರು, ಹಣ ಇದ್ದವರು ಮಾತ್ರ ಸಿಎಂ ಆಗುತ್ತಾರೆ ಎನ್ನುವುದು ಇತಿಹಾಸದಲ್ಲೇ ಇಲ್ಲ. ಈಗ ಬುದ್ಧಿವಂತಿಕೆ, ಜ್ಞಾನ ಮತ್ತು ಜನರ ಆಶೀರ್ವಾದ ಇದ್ದರೆ ಮಾತ್ರ ಸಿಎಂ ಆಗುತ್ತಾರೆ. ಯತ್ನಾಳ್ ಅವರ ವೈಯಕ್ತಿಕ ಹೇಳಿಕೆಗೆ ಹೆಚ್ಚು ಉತ್ತರಿಸಲ್ಲ ಎಂದಿದ್ದಾರೆ.

ಇದೇ ವೇಳೆ ಎಸ್‌ಟಿಗೆ ಮೀಸಲಾತಿ ಕೊಟ್ಟೇ ಕೊಡುತ್ತೇವೆ. ನಮ್ಮ ಸರ್ಕಾರ ಅವಧಿ ಮುಗಿಯುವುದರೊಳಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತೇವೆ. ಸ್ವಾಮೀಜಿಗಳ ಮನವೊಲಿಕೆ ಮಾಡುತ್ತಿದ್ದೇವೆ ಎಂದು ತಿಳಿಸಿದ್ದಾರೆ.

ಯತ್ನಾಳ್ ಹೇಳಿಕೆ ತನಿಖೆ ಆಗಲಿ



ಬೆಂಗಳೂರು, ಮೇ 6– ಮುಖ್ಯಮಂತ್ರಿಯಾಗಲು ಎರಡೂವರೆ ಸಾವಿರ ಕೋಟಿ ಬೇಕು ಎಂಬ ಬಿಜೆಪಿ ಶಾಸಕ ಬಸವನ ಗೌಡ ಪಾಟೀಲ್ ಯತ್ನಾಳ್ ಹೇಳಿಕೆ ವಿಚಾರ ತನಿಖೆಯಾಗಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಯತ್ನಾಳ್ ಅವರು, ಮುಖ್ಯಮಂತ್ರಿಯಾಗಲೂ ಎರಡೂವರೆ ಸಾವಿರ ಕೋಟಿ ಬೇಕು. ಮಂತ್ರಿ ಆಗಲು ನೂರು ಕೋಟಿ ಬೇಕು ಅಂತ ಬಹಿರಂಗವಾಗಿ ಹೇಳಿದ್ದಾರೆ. ಹೀಗಾಗಿ ಇವರ ಈ ಹೇಳಿಕೆ ಬಗ್ಗೆ ರಾಷ್ಟ್ರಮಟ್ಟದಲ್ಲಿ ತನಿಖೆ ಆಗಬೇಕು ಅಂತ ಒತ್ತಾಯಿಸಿದ್ದಾರೆ.

ಬಿಜೆಪಿ ಸರ್ಕಾರದಲ್ಲಿ ಎಲ್ಲಾ ಇಲಾಖೆಯಲ್ಲೂ ರೇಟ್ ಫಿಕ್ಸ್ ಆಗಿದೆ. ಕೆಪಿಎಸ್‌ಸಿ, ಪಿಎಸ್‌ಐ, ಸೇರಿದಂತೆ ಸರ್ಕಾರದ ಎಲ್ಲಾ ಇಲಾಖೆಯಲ್ಲಿ ರೇಟ್ ಫಿಕ್ಸ್ ಆಗಿದೆ. ಈ ಸಮಯದಲ್ಲಿ ಅವರದ್ದೇ ಪಕ್ಷದ ಶಾಸಕರು ಇಂತಹ ದೊಡ್ಡ ಆರೋಪ ಮಾಡಿದ್ದಾರೆ. ಕೂಡಲೇ ಈ ಬಗ್ಗೆ ಕೇಸ್ ದಾಖಲಿಸಿಕೊಂಡು ತನಿಖೆ ಮಾಡಬೇಕು ಎಂದಿದ್ದಾರೆ.

ಯತ್ನಾಳ್ ಸಾಮಾನ್ಯ ವ್ಯಕ್ತಿ ಅಲ್ಲ. ಅವರು ಕೇಂದ್ರದ ಮಾಜಿ ಸಚಿವರು, ಹಾಲಿ ಶಾಸಕರು. ಅವರ ಮಾತನ್ನು ಯಾರು ನಿರಾಕರಣೆ ಮಾಡಬಾರದು. ಯತ್ನಾಳ್ ಹೇಳಿಕೆ ರಾಷ್ಟ್ರೀಯ ಮಟ್ಟದಲ್ಲಿ ತನಿಖೆ ಆಗಬೇಕು. ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ ಆಗಬೇಕು. ಇದೊಂದು ರಾಷ್ಟ್ರಮಟ್ಟದ ವಿಚಾರ. ಈ ಬಗ್ಗೆ ಮೋದಿ, ಅಮಿತ್ ಶಾ, ಜೆಪಿ ನಡ್ಡಾ ಮಾತನಾಡಬೇಕು ಎಂದು ವಾಗ್ದಾಳಿ ನಡೆಸಿದ್ದಾರೆ. ಅಲ್ಲದೆ ಕೂಡಲೇ ಯತ್ನಾಳ್ ಹೇಳಿಕೆ ಬಗ್ಗೆ ತನಿಖೆ ನಡೆಸಬೇಕು ಎಂದು ಆಗ್ರಹ ಮಾಡಿದ್ದಾರೆ.

ಅಭಿಯಾನದ ಮೊದಲ ದಿನ 1,535 ಟ್ರಾನ್ಸ್‌ಫಾರ್ಮರ್ ತಪಾಸಣೆ

ಮೈಸೂರು, ಕೊಡಗು, ಚಾ.ನಗರ, ಮಂಡ್ಯ, ಹಾಸನ ಜಿಲ್ಲೆಯಲ್ಲಿ 836 ತಂಡ ಕಾರ್ಯ ನಿರ್ವಹಣೆ







ಮೈಸೂರು, ಮೇ 6(ಎಂಟಿವೈ)– ಗ್ರಾಹಕರಿಗೆ ಸಮರ್ಪಕವಾಗಿ ವಿದ್ಯುತ್ ಸೇವೆ ಒದಗಿಸುವ ನಿಟ್ಟಿನಲ್ಲಿ ಇಂಧನ ಇಲಾಖೆ ರಾಜ್ಯದಾದ್ಯಂತ ಆರಂಭಿಸಿರುವ ವಿದ್ಯುತ್ ಪರಿವರ್ತಕಗಳ (ಟ್ರಾನ್ಸ್‌ಫಾರ್ಮರ್) ನಿರ್ವಹಣಾ ಅಭಿಯಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅಭಿಯಾನದ ಮೊದಲ ದಿನ 5 ಜಿಲ್ಲೆಗಳಲ್ಲಿ 836 ತಂಡಗಳ ಚೆಸ್ಕಾಂ ಸಿಬ್ಬಂದಿ 1535 ಟ್ರಾನ್ಸ್‌ಫಾರ್ಮರ್‌ಗಳನ್ನು ತಪಾಸಣೆ ಮಾಡಿ ಸರ್ವಿಸ್ ಮಾಡಿದ್ದಾರೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ(ಚೆಸ್ಕಾಂ) ವ್ಯಾಪ್ತಿಗೆ 5 ಜಿಲ್ಲೆಗಳು ಒಳಪಡಲಿದ್ದು, ಅಭಿಯಾನದ ಮೊದಲ ದಿನ ಮೈಸೂರು ಜಿಲ್ಲೆಯಲ್ಲಿ 446, ಮಂಡ್ಯ ಜಿಲ್ಲೆಯಲ್ಲಿ 390, ಚಾಮರಾಜನಗರ ಜಿಲ್ಲೆಯಲ್ಲಿ 169, ಕೊಡಗು ಜಿಲ್ಲೆಯಲ್ಲಿ 103 ಹಾಗೂ ಹಾಸನ ಜಿಲ್ಲೆಯಲ್ಲಿ 427 ಟ್ರಾನ್ಸ್‌ಫಾರ್ಮರ್ ಸೇರಿದಂತೆ ಚೆಸ್ಕಾಂ ವ್ಯಾಪ್ತಿಯ 5 ಜಿಲ್ಲೆಗಳಲ್ಲಿ 1,535 ಟ್ರಾನ್ಸ್‌ಫಾರ್ಮರ್ ತಪಾಸಣೆ ಮಾಡಿ ಸಣ್ಣಪುಟ್ಟ ರಿಪೇರಿ ಒಳಗೊಂಡಂತೆ ಸರ್ವಿಸ್ ಮಾಡಲಾಗಿದೆ.

ಈ ಕುರಿತು ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಇಂಧನ ಸಚಿವರ ಆದೇಶದಂತೆ ಚೆಸ್ಕಾಂ ವ್ಯಾಪ್ತಿಯಲ್ಲಿನ ಐದೂ ಜಿಲ್ಲೆಗಳಲ್ಲಿ ವಿದ್ಯುತ್ ಪರಿವರ್ತಕಗಳ ನಿರ್ವಹಣಾ ಅಭಿಯಾನ ಮೇ 5ರಿಂದ ಆರಂಭಿಸಲಾಗಿದ್ದು, ಮೇ 20ರವರೆಗೆ ನಡೆಸಲಾಗುತ್ತದೆ. ವಿವಿಧ ಉಪವಿಭಾಗಗಳ ಅಧಿಕಾರಿಗಳನ್ನೊಳಗೊಂಡಂತೆ ಐದು ಜಿಲ್ಲೆಗಳ ವ್ಯಾಪ್ತಿಯಲ್ಲಿ ಒಟ್ಟು 836 ತಂಡ ರಚಿಸಲಾಗಿದೆ. ತಾಂತ್ರಿಕ ಸಿಬ್ಬಂದಿಗಳು ಒಳಗೊಂಡಿರುವ ಈ ತಂಡದಲ್ಲಿ ಅಭಿಯಾನದ ಮೊದಲ ದಿನವೇ ಮೈಸೂರು ಜಿಲ್ಲೆಯಲ್ಲಿ 446 ಟ್ರಾನ್ಸ್‌ಫಾರ್ಮರ್ ಸೇರಿದಂತೆ 5 ಜಿಲ್ಲೆಗಳಲ್ಲಿ 1,535 ಟ್ರಾನ್ಸ್‌ಫಾರ್ಮರ್ ತಪಾಸಣೆ ಮಾಡಿ ಸರ್ವಿಸ್ ಮಾಡಲಾಗಿದೆ. ಎಲ್ಲಾ ಹಿರಿಯ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಆಯಾ ಸ್ಥಳಕ್ಕೆ ಭೇಟಿ ನೀಡಿ ಉತ್ತಮ ಗುಣಮಟ್ಟದ ನಿರ್ವಹಣೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ಅಗತ್ಯ ಸಲಹೆ–ಸೂಚನೆ ನೀಡುತ್ತಿದ್ದಾರೆ. ತಪಾಸಣೆ ವೇಳೆ ದೋಷ ಕಂಡು ಬಂದ ಟ್ರಾನ್ಸ್ ಫಾರ್ಮರ್‌ಗಳಿಗೆ ಅವಶ್ಯವಿರುವ ಸಾಧನ ಸಲಕರಣೆಯನ್ನು ಸಕಾಲದಲ್ಲಿ ಪೂರೈಸಲಾಗುತ್ತಿದೆ ಎಂದು ತಿಳಿಸಿದರು.

ಈ ವಿಶೇಷ ಅಭಿಯಾನದಲ್ಲಿ ಪವರ್ ಮ್ಯಾನ್‌ಗಳು ಆಸಕ್ತಿಯಿಂದ ನಿರ್ವಹಣಾ ಕೆಲಸ ನಿಭಾಯಿಸುತ್ತಿದ್ದಾರೆ. ಗ್ರಾಹಕರಿಗೆ ತಡೆ ರಹಿತ ವಿದ್ಯುತ್ ಸರಬರಾಜು ಮಾಡಲು ಚೆಸ್ಕಾಂ ಸಿಬ್ಬಂದಿ ಶ್ರಮಿಸುತ್ತಿದ್ದಾರೆ. ತಾಂತ್ರಿಕ ಸಿಬ್ಬಂದಿ ಮತ್ತು ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡಿರುವುದರಿಂದ ಅಭಿಯಾನ ಯಶಸ್ವಿಯಾಗಿ ಸಾಗುತ್ತಿದೆ. 25 ವರ್ಷ ಮೇಲ್ಪಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಈಗಾಗಲೇ ಗುರುತಿಸಲಾಗಿದೆ. ಅದಕ್ಕಾಗಿ ವಿಶೇಷ ತಂಡವನ್ನು ರಚನೆ ಮಾಡಲಾಗಿದೆ. ಹತ್ತು ದಿನಗಳ ಒಳಗೆ ಈ ಅಭಿಯಾನವನ್ನು ಮುಗಿಸುವ ಗುರಿ ಹೊಂದಿದ್ದೇವೆ. ಒಂದು ಟ್ರಾನ್ಸ್‌ಫಾರ್ಮರ್ ಅನ್ನು ಮೂರು ಮಂದಿ ನಿರ್ವಹಣೆ ಮಾಡಲಿದ್ದಾರೆ. ಟ್ರಾನ್ಸ್‌ಫಾರ್ಮರ್‌ಗಳ ಗುಣಮಟ್ಟ ಮತ್ತು ಅವುಗಳ ಬುಷ್, ಆಯಿಲ್, ನಟ್, ಬೋಲ್ಟ್ ಹಾಗೂ ವಿವಿಧ ಭಾಗಗಳನ್ನು ಪರಿಶೀಲನೆ ನಡೆಸಿ ನಂತರ ಬದಲಾಯಿಸುತ್ತಾರೆ. ಈಗಾಗಲೇ ಮಳೆ ಆರಂಭವಾಗಿದ್ದು, ಇದರಿಂದ ವಿದ್ಯುತ್ ಅಪಘಾತ ತಪ್ಪಿಸುವುದು ಹಾಗೂ ಟ್ರಾನ್ಸ್ ಫಾರ್ಮರ್‌ಗಳ ವಿಫಲತೆ ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ. ಪ್ರತಿ ಟ್ರಾನ್ಸ್ ಫಾರ್ಮರ್ ನಿರ್ವಹಣೆಗೆ 3 ಗಂಟೆ ತಗುಲಲಿದ್ದು, ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ವಿದ್ಯುತ್ ಅಡಚಣೆ ಉಂಟಾಗಾಗುವ ಸಾಧ್ಯತೆ ಇದ್ದು, ಗ್ರಾಹಕರು ಸಹಕರಿಸಬೇಕಿದೆ.

ಹಿಂದೂ ಧರ್ಮದ ರಕ್ಷಣೆಗೆ ಪಣ ತೊಟ್ಟವರು ಶಂಕರಾಚಾರ್ಯರು

ಶಾಸಕ ರಾಮದಾಸ್ ಅಭಿಮತ



ಮೈಸೂರು, ಮೇ 6(ಎಂಟಿವೈ)– ಹಿಂದೂ ಧರ್ಮ ವಿನಾಶದಂಚಿಗೆ ತೆರಳಿದ್ದಾಗ ಶಂಕರಾಚಾರ್ಯರು ದೇಶ ಪರ್ಯಟನೆ ಮಾಡಿ ಜನರನ್ನು ಜಾಗೃತಗೊಳಿಸಿ, ಹಿಂದೂ ಧರ್ಮದ ರಕ್ಷಣೆಗೆ ಪಣ ತೊಟ್ಟರು ಎಂದು ಶಾಸಕ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀಶಂಕರಾಚಾರ್ಯ ಜಯಂತ್ಯೋತ್ಸವ ಸಮಿತಿ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಶ್ರೀಶಂಕರಾಚಾರ್ಯ ಜಯಂತಿ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಲೌಕಿಕ ಬದುಕಿನಲ್ಲಿರುವ ನಾವು ದ್ವೈತ, ಅದ್ವೈತದ ಬಗ್ಗೆ ಕೇಳಿದರೂ ನಂತರ ಅದನ್ನು ಮರೆಯುತ್ತೇವೆ. ಶಂಕರಾಚಾರ್ಯರ ವಿಚಾರಧಾರೆಗಳನ್ನು ಅಳವಡಿಸಿಕೊಂಡು ಜೀವನದಲ್ಲಿ ಸಾಗಬೇಕು ಎಂದರು.

ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್ ಮಾತನಾಡಿ, ಜಗತ್ತಿನ ಕಲ್ಯಾಣಕ್ಕೆ ಜನಿಸಿದ ಶಂಕರಾಚಾರ್ಯರು ಧರ್ಮಕ್ಕೆ ಕುತ್ತು ಬಂದಿದ್ದನ್ನು ನೋಡಿ ಕಾಲ್ನಡಿಗೆಯಲ್ಲಿ ದೇಶವನ್ನು ಸಂಚಾರ ಮಾಡಿ ಜನರನ್ನು ಜಾಗೃತಗೊಳಿಸಿದರು. ದೇಶದ ಜನಮಾನಸಕ್ಕೆ ಶಕ್ತಿ ತುಂಬಿದರು. ಭಾರತೀಯ ಸಂಸ್ಕೃತಿ ಉಳಿಯಲು ಶಂಕರಾಚಾರ್ಯರು ನೇರ ಕಾರಣ. ರಾಷ್ಟ್ರೀಯತೆ, ಐಕ್ಯತೆ ಬಿಂಬಿಸುವ ಕೆಲಸ ಮಾಡಿದರು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ತತ್ವಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಎಲ್. ಚಂದ್ರಶೇಖರ ಮುಖ್ಯಭಾಷಣ ಮಾಡಿ, ಶಂಕರಾಚಾರ್ಯರು ಭಾರತ ಕಂಡ ಶ್ರೇಷ್ಠ ತತ್ವಜ್ಞಾನಿಗಳು, ಮೇಧಾವಿಗಳು. ಬದುಕಿದ್ದು ಅಲ್ಪ ವರ್ಷಗಳಾದರೂ ಇಡೀ ಜಗತ್ತು ಭಾರತದ ಕಡೆಗೆ ಮುಖ ಮಾಡುವಂತೆ ಮಾಡಿದರು ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಎಲ್.ನಾಗೇಂದ್ರ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಎ.ಹೇಮಂತಕುಮಾರ್‌ಗೌಡ, ಕಾಡಾ ಅಧ್ಯಕ್ಷ ಎನ್.ಶಿವಲಿಂಗಯ್ಯ, ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಎಂ.ಸಿ.ರಮೇಶ್, ಮ.ವಿ.ರಾಮಪ್ರಸಾದ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಚನ್ನಪ್ಪ, ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮುಖಂಡ ಗೋಪಾಲರಾವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರ ಶಾಸಕ ಎಲ್. ನಾಗೇಂದ್ರ 23ನೇ ವಾರ್ಡಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಪೂಜೆ ಸಲ್ಲಿಸಿ, ಮನೆಮನೆಗೆ ತೆರಳಿ ಮತ ಯಾಚನೆ ಮಾಡಿದರು. ಈ ಸಂದರ್ಭದಲ್ಲಿ ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಗಿರಿಧರ್, ವಾಣೀಶ್, ಸ್ಥಳೀಯ ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಪ್ರಮೀಳಾ ಭರತ್, ಬಿಜೆಪಿ ಹಿರಿಯ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಅಂಬೇಡ್ಕರ್ ಭಕ್ತರಾಗಬೇಡಿ, ಅನುಯಾಯಿಗಳಾಗಿ

ವಿದ್ಯಾರ್ಥಿಗಳಿಗೆ ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಧ್ಯಕ್ಷ ಆನಂದ್ ಕಿವಿಮಾತು



ಮೈಸೂರು, ಮೇ 6– ವಿದ್ಯಾರ್ಥಿಗಳು, ಅಂಬೇಡ್ಕರ್‌ರವರ ಭಕ್ತರಾಗಬೇಡಿ, ಅನುಯಾಯಿಗಳಾಗಿ, ಅವರ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಬಹದ್ದೂರ್ ಇನ್‌ಸ್ಟಿಟೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಅಧ್ಯಕ್ಷ ಪ್ರೊ. ಆನಂದ್ ಕರೆ ನೀಡಿದರು.

ಮೈಸೂರಿನ ಕೆಸರೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ವೃತ್ತಿಪರ ಬಾಲಕರ ವಿದ್ಯಾರ್ಥಿನಿಲಯದಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್‌ರವರ 131ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭೂಮಿಯ ಮೇಲೆ ಗೌತಮ ಬುದ್ಧ ಹುಟ್ಟಿದ 2,500 ವರ್ಷಗಳ ನಂತರ ಬುದ್ಧನಷ್ಟೆ ಮಾನವೀಯ ಮೌಲ್ಯಗಳನ್ನುಳ್ಳ, ಮನುಷ್ಯರ ಬಗ್ಗೆ ಅಪಾರ ಪ್ರೀತಿಯನ್ನು ಹೊಂದಿರುವಂತಹ ವ್ಯಕ್ತಿ ಹುಟ್ಟಿದ್ದರೆ ಅದು ಅಂಬೇಡ್ಕರ್ ಮಾತ್ರ. ವಿಶ್ವಸಂಸ್ಥೆ ಅಂಬೇಡ್ಕರ್ ಹುಟ್ಟಿದ ದಿನವನ್ನು 'ನಾಲೆಡ್ಜ್ ಡೇ' ಎಂದು ಆಚರಿಸುತ್ತಿದೆ. ಏಕೆಂದರೆ, ಅರ್ಥಶಾಸ್ತ್ರಜ್ಞ, ಪತ್ರಿಕೋದ್ಯಮಿ, ನ್ಯಾಯಶಾಸ್ತ್ರಜ್ಞ... ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಅಪಾರ ಪಾಂಡಿತ್ಯವುಳ್ಳಂತಹ ವ್ಯಕ್ತಿ ಅಂಬೇಡ್ಕರ್. ಶೋಷಿತ ಸಮಾಜದಿಂದ ಹುಟ್ಟಿಬಂದ ಅಂಬೇಡ್ಕರ್ 140 ಕೋಟಿ ಜನರಿರುವ ಭಾರತಕ್ಕೆ ಸಂವಿಧಾನ ರಚಿಸುವುದೆಂದರೆ ಸಾಮಾನ್ಯವಲ್ಲ, ಅವರೊಬ್ಬ ಮೇಧಾವಿ, ಮಹಾನಾಯಕ, ಮಹಾಜ್ಞಾನಿ ಎಂದರು.

ಅಮೆರಿಕಾದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಭಾರತದ ಪಾರ್ಲಿಮೆಂಟ್‌ನಲ್ಲಿ ಅಂಬೇಡ್ಕರ್ ಫೋಟೊ ನೋಡಿ 'ಅಂಬೇಡ್ಕರ್ ರಚಿಸಿರುವ ಸಂವಿಧಾನದ ಅಡಿಯಲ್ಲಿ ಭಾರತೀಯರು ಒಂದು ಸಾವಿರ ವರ್ಷ ನೆಮ್ಮದಿಯಾಗಿ ಬದುಕಬಹುದು' ಎನ್ನುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಬದ್ಧತೆಯಿಂದ ತಮ್ಮ ಚಾರಿತ್ರ್ಯವನ್ನು ಶುದ್ಧವಾಗಿಟ್ಟುಕೊಂಡು ಅಂಬೇಡ್ಕರ್‌ರವರ ಗುಣಗಳನ್ನು ಬೆಳೆಸಿಕೊಂಡು ಜೀವನದಲ್ಲಿ ಯಶಸ್ವಿಯಾಗಿ ಎಂದರು.

ಸಮಾರಂಭದಲ್ಲಿ ನಗರಪಾಲಿಕೆ ಸದಸ್ಯ ಸಮಿವುಲ್ಲಾ ಅಜ್ಜು, ಸಿ.ಪಿ.ಸಿ. ಪಾಲಿಟೆಕ್ನಿಕ್‌ನ ಪ್ರಾಧ್ಯಾಪಕರಾದ ಡಾ. ದೊಡ್ಡಯ್ಯ, ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗು, ವಾರ್ಡನ್ ಸಂಘದ ಅಧ್ಯಕ್ಷ ರೇವಣ್ಣ ಮಾತನಾಡಿದರು. ಡಾ. ಅರಸುಕುಮಾರ್, ಎನ್.ಆರ್. ಪೊಲೀಸ್ ಠಾಣೆಯ ಎ.ಎಸ್.ಐ ಸುಬ್ರಹ್ಮಣ್ಯ, ಸಿದ್ಧಲಿಂಗಪುರ ಗ್ರಾ.ಪಂ. ಸದಸ್ಯ ಜಬಿವುಲ್ಲಾ ಅಜ್ಜು, ಸಯ್ಯದ್ ಖಲೀಲ್, ನಿಲಯಪಾಲಕರು ಉಪಸ್ಥಿತರಿದ್ದರು. ವಾರ್ಡನ್ ಆರ್.ಕಾರ್ತಿಕ್ ಸ್ವಾಗತಿಸಿದರು. ಹೊಂಗನೂರು ಮಂಜುನಾಥ್ ನಿರೂಪಿಸಿದರು. ಜನಪದ ಗಾಯಕ ಅಮ್ಮ ರಾಮಚಂದ್ರ ಪ್ರಾರ್ಥಿಸಿದರು. ಇದೇ ವೇಳೆ ಅಡುಗೆ ಸಿಬ್ಬಂದಿಗಳನ್ನು ಅಭಿನಂದಿಸಲಾಯಿತು. ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದಲ್ಲಿ ಹಳಿ ತಪ್ಪಿದ ರೈಲು!

2 ತಾಸು ಕಾರ್ಯಾಚರಣೆ ಮೂಲಕ ಪ್ರಯಾಣಿಕರ ರಕ್ಷಣೆ: ಆತಂಕ ಪಡಬೇಡಿ ಇದು ಅಣಕು ಪ್ರದರ್ಶನ





ಮೈಸೂರು, ಮೇ 6(ಆರ್‌ಕೆ)– ಅಲ್ಲೊಂದು ರೈಲು ಹಳಿ ತಪ್ಪಿತ್ತು. ಬೋಗಿಗಳು ಒಂದರ ಮೇಲೊಂದು ಬಿದ್ದಿದ್ದವು. ನೋಡಿದವರಿಗೆ ಭಾರೀ ಆಘಾತ ತರುವಂತಹ ದೃಶ್ಯ. ಎಷ್ಟು ಸಾವು ನೋವುಗಳಾಗಿವೆಯೋ ಎಂದು ನೋವಿನಿಂದಲೇ ಲೆಕ್ಕಾಚಾರ ಹಾಕುವಂತಹ ದೃಶ್ಯ. ಕೆಲವರಂತೂ ಅದನ್ನು ನೋಡಿದ ತಕ್ಷಣ ಏನಾಯ್ತು ಎಂದು ಗಾಬರಿಯಲ್ಲೇ ಪ್ರಶ್ನಿಸಿ ಅಲ್ಲಿದ್ದವರಿಂದ ವಾಸ್ತವ ಸಂಗತಿ ಅರಿತು ಹೌದಾ... ಎಂದು ನೆಮ್ಮದಿ ನಿಟ್ಟುಸಿರು ಬಿಡುತ್ತಿದ್ದರು. ಮೈಸೂರಿನ ಅಶೋಕಪುರಂ ರೈಲು ನಿಲ್ದಾಣದಲ್ಲಿ ನಡೆದಂತಹ ಒಂದು ಕುತೂಹಲಕಾರಿ, ಮುನ್ನೆಚ್ಚರಿಕಾ ಕಾರ್ಯಾಚರಣೆ. ಇದು ರೈಲ್ವೆ ಇಲಾಖೆಯ ಅಣಕು ಕಾರ್ಯಾಚರಣೆ.

ರೈಲು ಅಪಘಾತದ ವೇಳೆ ಗಾಯಗೊಂಡಿದ್ದಂತಹ ಪ್ರಯಾಣಿಕರನ್ನು ರಕ್ಷಿಸುವ 2 ಗಂಟೆಗಳ ಅಣಕು ಕಾರ್ಯಾಚರಣೆ ನೆರೆದವರಲ್ಲಿ ಆರಂಭದಲ್ಲಿ ಆತಂಕ, ನಂತರ ರೋಚಕತೆಗೆ ಸಾಕ್ಷಿಯಾಯಿತು.

ನಂಜನಗೂಡು ಕಡೆಗೆ ಹೋಗುತ್ತಿದ್ದ ರೈಲೊಂದು ಹಳಿ ತಪ್ಪಿ, ಅದರ ಬೋಗಿಗಳು ಸಂಪರ್ಕ ಕಡಿದುಕೊಂಡು ಒಂದರ ಮೇಲೊಂದು ಉರುಳಿ ಬಿದ್ದವು. ವಿಷಯ ತಿಳಿದು. ಬೆಳಗ್ಗೆ 10 ಗಂಟೆಗೆ ಸೈರನ್ ಸೂಚನೆ ಬರುತ್ತಿದ್ದಂತೆಯೇ ಕಾರ್ಯೋನ್ಮುಖರಾದ ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ(ಎನ್‌ಡಿಆರ್‌ಎಫ್), ಆರ್‌ಪಿಎಫ್ ಇಂಜಿನಿಯರಿಂಗ್, ವೈದ್ಯಕೀಯ ವಿಭಾಗದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿ ಅಪಘಾತದಲ್ಲಿ ಗಾಯಗೊಂಡಿದ್ದ ಪ್ರಯಾಣಿಕರನ್ನು ಸ್ಟ್ರೆಚರ್ ಮೂಲಕ ಆಂಬುಲೆನ್ಸ್‌ಗೆ ಸ್ಥಳಾಂತರಿಸಿ, ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ದು ದಾಖಲಿಸುವ ತುರ್ತು ಅಣಕು ಕಾರ್ಯಾಚರಣೆ ಪ್ರದರ್ಶನ ನಡೆಯಿತು.

ಅಶೋಕಪುರಂ ರೈಲ್ವೇ ಸ್ಟೇಷನ್ ಬಳಿ ಭಾರೀ ಅಪಘಾತವಾಗಿದೆಯಂತೆ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ಹರಡುತ್ತಿದ್ದಂತೆಯೇ ನೂರಾರು ಮಂದಿ ಅಲ್ಲಿ ಜಮಾಯಿಸಿ ರಕ್ಷಣಾ ಕಾರ್ಯಾಚರಣೆ ವೀಕ್ಷಿಸುತ್ತಿದ್ದರು. ಅದು ಅಪಘಾತವಲ್ಲ ಬರೀ ಅಣಕು ಪ್ರದರ್ಶನ ಎಂಬುದು ಮನವರಿಕೆಯಾಗುತ್ತಿದ್ದಂತೆ ನಿಟ್ಟುಸಿರು ಬಿಟ್ಟು, ಹಿಂದಿರುಗುತ್ತಿದ್ದರು.

ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರ ಪ್ರಾಣ, ಆಸ್ತಿ ಪಾಸ್ತಿ ರಕ್ಷಿಸಲು ಸುರಕ್ಷತಾ ಅಧಿಕಾರಿ, ಸಿಬ್ಬಂದಿಗಳು ಜಾಗೃತರಾಗಿರಬೇಕೆಂಬುದರ ಬಗೆಗೆ ಅರಿವು ಮೂಡಿಸುವ ಸಲುವಾಗಿ ನಡೆದ ಅಣಕು ರಕ್ಷಣಾ ಪರಿಹಾರ ಕಾರ್ಯಾಚರಣೆಯಲ್ಲಿ ರೈಲ್ವೆ ಇಲಾಖೆಯ ಇಂಜಿನಿಯರಿಂಗ್, ಸೇಫ್ಟಿ, ವೈದ್ಯಕೀಯ ವಿಭಾಗ ಆರ್‌ಪಿಎಫ್, ಎನ್‌ಡಿಆರ್‌ಎಫ್, ಅಗ್ನಿಶಾಮಕ ದಳ, ರೈಲ್ವೆ ಪೊಲೀಸ್ ಘಟಕದ ಸಿಬ್ಬಂದಿ ಪಾಲ್ಗೊಂಡಿದ್ದರು.

ಎನ್‌ಡಿಆರ್‌ಎಫ್‌ನ ಅಸಿಸ್ಟೆಂಟ್ ಕಮಾಂಡೆಂಟ್ ಜೆ. ಸೆಂದಿಲ್‌ಕುಮಾರ್ ನೇತೃತ್ವದ 23 ಮಂದಿ ಸಿಬ್ಬಂದಿ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ರಾಜು ನೇತೃತ್ವದ ಸಿಬ್ಬಂದಿ, ರೈಲ್ವೆ ಆಸ್ಪತ್ರೆ ವೈದ್ಯರು, ನರ್ಸ್ ಹಾಗೂ ಇತರೆ ಸಿಬ್ಬಂದಿಗಳು ಅಪಘಾತದಿಂದ ಜಖಂಗೊಂಡಿದ್ದ ಎರಡು ಬೋಗಿಗಳ 25 ಪ್ರಯಾಣಿಕರನ್ನು ರಕ್ಷಿಸಿ ಆಸ್ಪತ್ರೆಗಳಿಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ ಪ್ರದರ್ಶನ ವಿಶೇಷವೆನಿಸಿತ್ತು.

ಕ್ರೇನ್‌ಗಳ ಮೂಲಕ ಬೋಗಿ ಮೇಲೆ ಬಿದ್ದಿದ್ದ ಮತ್ತೊಂದು ಬೋಗಿಯನ್ನು ತೆರವುಗೊಳಿಸಿದ ಇಂಜಿನಿಯರಿಂಗ್ ವಿಭಾಗದ ತುರ್ತು ಕಾರ್ಯಾಚರಣೆ ತಂಡವು ಕಟರ್‌ಗಳ ಮೂಲಕ ಎರಡು ಬೋಗಿಗಳ ಮಧ್ಯೆ ಸಂಪರ್ಕ ಕೊಂಡಿಯನ್ನು ತುಂಡರಿಸಿ ಅಲ್ಲಿ ಸಿಲುಕಿದ್ದ ಪ್ರಯಾಣಿಕರನ್ನು ರಕ್ಷಿಸಿದರು.

ಮೈಸೂರಿನಿಂದ ನಂಜನಗೂಡು ಕಡೆಗೆ ಹೋಗುತ್ತಿದ್ದ ವಿಶೇಷ ಟೂರಿಸ್ಟ್ ರೈಲಿನ ಎರಡು ಜನರಲ್ ಸ್ಲೀಪರ್ ಕ್ಲಾಸ್‌ನ ಎರಡು ಪ್ಯಾಸೆಂಜರ್ ಕೋಚ್‌ಗಳು ಅಶೋಕಪುರಂ ರೈಲ್ವೆ ಸ್ಟೇಷನ್ ಸಮೀಪ ಹಳಿ ತಪ್ಪಿ ಅಪಘಾತವಾಯಿತು ಎಂಬ ಮಾಹಿತಿ ದೊರೆಯುತ್ತಿದ್ದಂತೆಯೇ ಜಾಗೃತವಾದ ತಂಡ ತಕ್ಷಣವೇ ಕಾರ್ಯಾಚರಣೆ ನಡೆಸಿದ ಪರಿಣಾಮ ಯಾವುದೇ ಸಾವು ನೋವುಗಳಿಲ್ಲದೇ ಪ್ರಯಾಣಿಕರು ಪಾರಾದರು.

ಈ ಸಂದರ್ಭ ವಿಭಾಗೀಯ ರೈಲ್ವೇ ವ್ಯವಸ್ಥಾಪಕರಾದ ರಾಹುಲ್ ಅಗರ್‌ವಾಲ್, ಸಹಾಯಕ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ದೇವ ಸಹಾಯನ್ ಅವರು ಸ್ಥಳಕ್ಕೆ ಧಾವಿಸಿ ಅಣಕು ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಿದರು. ಮೈಸೂರಿನ ಅಗ್ನಿಶಾಮಕ ಠಾಣೆ, ಅಶೋಕಪುರಂ ಠಾಣೆ ಪೊಲೀಸರು ಕಾರ್ಯಾಚರಣೆಯ ಅಣಕು ಪ್ರದರ್ಶನಕ್ಕೆ ಕೈ ಜೋಡಿಸಿದರು.

ಅಂಗನವಾಡಿಗಳನ್ನು ಬಾಲಸ್ನೇಹಿಯಾಗಿಸಲು ಕಾರ್ಯ ಯೋಜನೆ

ಸಾಮಾನ್ಯ ಸಭೆಯಲ್ಲಿ ತಾಪಂ ಇಓ ಗಿರೀಶ್

ಹುಣಸೂರು, ಮೇ 6(ಕೆಕೆ)– ಶಾಸಕ ಹೆಚ್.ಪಿ.ಮಂಜುನಾಥ್ ಅವರ ಆಶಯದಂತೆ ತಾಲೂಕಿನ 194 ಅಂಗನವಾಡಿ ಕೇಂದ್ರಗಳನ್ನು ಬಾಲಸ್ನೇಹಿ ಅಂಗನವಾಡಿಗಳಾಗಿ ಪರಿವರ್ತಿಸಲು ಕಾರ್ಯಯೋಜನೆ ರೂಪಿಸಲಾಗಿದೆ ಎಂದು ತಾಪಂ ಇಓ ಗಿರೀಶ್ ತಿಳಿಸಿದರು.

ತಾಪಂ ಆಡಳಿತಾಧಿಕಾರಿ ನಂದ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ 366 ಅಂಗನವಾಡಿ ಕೇಂದ್ರಗಳಿದ್ದು, ಈಗಾಗಲೇ ಪ್ರಾಯೋಗಿಕವಾಗಿ ಮನುಗನಹಳ್ಳಿ ಗ್ರಾಪಂನ 6 ಕೇಂದ್ರಗಳನ್ನು ಬಾಲಸ್ನೇಹಿ ಮಾದರಿ ಕೇಂದ್ರಗಳಾಗಿ ಮಾಡಲಾಗಿದೆ ಎಂದರು.

ಮೊದಲ ಹಂತದಲ್ಲಿ 194 ಅಂಗನವಾಡಿ ಕೇಂದ್ರಗಳನ್ನು ಮಕ್ಕಳು ಆಕರ್ಷಣೆಗೊಳ್ಳುವಂತೆ ಚಿತ್ರ ಬಿಡಿಸುವುದು, ಕುಡಿಯುವ ನೀರು, ಶೌಚಾಲಯ, ಸೋಲಾರ್, ಪ್ರೊಜೆಕ್ಟರ್, ಆಟಿಕೆಗಳ ಅಳವಡಿಕೆ ಮೂಲಕ ಬಾಲಸ್ನೇಹಿ ಕೇಂದ್ರಗಳನ್ನಾಗಿಸಲು 5.5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ತಾಪಂನ 1.20 ಕೋಟಿ, ಗ್ರಾಪಂನ 15ನೇ ಹಣಕಾಸು ಯೋಜನೆಯಡಿ ಕೋಟಿ ರೂ., ಜಿಪಂನಿಂದ 50 ಲಕ್ಷ ಅನುದಾನ ಸಿಗಲಿದ್ದು ಉಳಿಕೆ ಅನುದಾನಕ್ಕೆ ಶಾಸಕರು ಮತ್ತು ಸಂಸದರಿಗೆ ಮನವಿ ಮಾಡಲಾಗುವುದು ಎಂದರು.



ನಗರದಲ್ಲಿ 20 ಸೇರಿದಂತೆ 81 ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿವೆ. ಈಗಾಗಲೇ 20 ಲಕ್ಷ ವೆಚ್ಚದಲ್ಲಿ 40 ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲಾಗಿದ್ದು, 8 ಕೇಂದ್ರಗಳು ಸಂಪೂರ್ಣ ಶಿಥಿಲಗೊಂಡಿವೆ ಎಂದು ಸಿಡಿಪಿಓ ರಶ್ಮಿ ಸಭೆಗೆ ತಿಳಿಸಿದರು. ನಗರ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ನಿವೇಶನ ಕೊಡಿಸಲು ಕ್ರಮ ವಹಿಸಲಾಗುವುದು ಎಂದು ಪೌರಾಯುಕ್ತ ರವಿಕುಮಾರ್ ತಿಳಿಸಿದರು.

ಹೆಚ್ಚುತ್ತಿರುವ ಬಾಲ್ಯ ವಿವಾಹ: ತಾಲೂಕಿನ ಗಿರಿಜನ ಹಾಡಿಗಳಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗುತ್ತಿವೆ. ಇದನ್ನು ತಡೆಯಲು ನಮ್ಮ ಇಲಾಖೆಯಿಂದ ಕಷ್ಟವಾಗುತ್ತಿದ್ದು, ಬೇರೆ ಇಲಾಖೆಗಳ ಅಧಿಕಾರಿಗಳು ಸಹಕರಿಸಬೇಕು ಎಂದು ಸಿಡಿಪಿಓ ರಶ್ಮಿ ತಿಳಿಸಿದರು.

ವೈದ್ಯಾಧಿಕಾರಿಗಳಿಗೆ ನೋಟಿಸ್: ಆದಿವಾಸಿ ಸಮುದಾಯದ ಗಿರಿಜನ ಅಪ್ರಾಪ್ತೆಯರು ಬಾಲ್ಯ ವಿವಾಹವಾಗಿ ಗರ್ಭಿಣಿಯರಾಗಿ ತಾಯಿ ಕಾರ್ಡ್‌ಗಾಗಿ ವೈದ್ಯರಲ್ಲಿ ಬಂದಾಗ ಎಂಎಲ್‌ಸಿ ಮಾಡದೆ ಪೊಲೀಸರಿಗೆ ಮಾಹಿತಿ ನೀಡದೆ ಕಳುಹಿಸುತ್ತಿದ್ದಾರೆ. ಈ ಕುರಿತು ನೇರಳಕುಪ್ಪೆ ಮತ್ತು ಕರ್ಣಕುಪ್ಪೆ ವೈದ್ಯರಿಗೆ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿಯಿಂದ ನೋಟಿಸ್ ನೀಡಲಾಗಿದೆ ಎಂದು ರಶ್ಮಿ ತಿಳಿಸಿದರು.

ತಾಲೂಕಿನ 8 ಅಂಬೇಡ್ಕರ್ ಭವನ ಸೇರಿದಂತೆ ನಗರಕ್ಕೆ ಹೊಂದಿಕೊಂಡಂತಿರುವ ಚಿಕ್ಕ ಹುಣಸೂರು ಕೆರೆಯನ್ನು ಪ್ರವಾಸಿ ಕೇಂದ್ರವನ್ನಾಗಿಸುವ ಕೋಟಿ ರೂ. ವೆಚ್ಚದ ಯೋಜನೆ ಹಾಗೂ ಇತರೆ ಕಾಮಗಾರಿ ಅಪೂರ್ಣಗೊಂಡಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಆಡಳಿತಾ ಧಿಕಾರಿ ನಂದ ಕಾಮಗಾರಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು ಎಂದು ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಇಂಜಿನಿಯರ್ ವಿಜಯ್‌ಗೆ ಸೂಚಿಸಿದರು. ಅಲ್ಲದೇ ನಗರದ ಬಾಬು ಬಾಬೂಜಿ ಭವನದ ಉಳಿಕೆ ಕಾಮಗಾರಿ ಪೂರ್ಣಗೊಳಿಸಲು ಶಾಸಕರ ಅನುದಾನಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದ್ದಾರೆ ಎಂದು ಸಮಾಜ ಕಲ್ಯಾಣಾಧಿಕಾರಿ ಮೋಹನ್ ತಿಳಿಸಿದರು.

ತಾಲೂಕಿನ ಬಿಳಿಕೆರೆ ಭಾಗದ ವಡ್ಡರಹಳ್ಳಿ ಹಾಗೂ ಇತರೆಡೆ ಜಲಜೀವನ್ ಮಿಷನ್ ಯೋಜನೆಯ 10.28 ಕೋಟಿ ವೆಚ್ಚದ 28 ಕಾಮಗಾರಿ ಪೈಕಿ 24 ಪೂರ್ಣಗೊಂಡಿವೆ ಎಂದು ಎಇಇ ಮಹೇಶ್ ಸಭೆಗೆ ಮಾಹಿತಿ ನೀಡಿದರು. ಕೆಲ ಕಾಮಗಾರಿ ಕಳಪೆಯಾಗಿವೆ ಎಂಬ ದೂರು ಬಂದಿದ್ದು, ಪರಿಶೀಲಿಸಿ ಗುಣಮಟ್ಟದ ಕಾಮಗಾರಿ ನಡೆಸಬೇಕೆಂದು ಅಧಿಕಾರಿಗಳಿಗೆ ನಂದ ಕಟ್ಟುನಿಟ್ಟಾಗಿ ತಿಳಿಸಿದರು. ಹರಿನಹಳ್ಳಿ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸದ ಬಗ್ಗೆ ಪ್ರಶ್ನಿಸಿದ ಅವರು, ಮೇ 10ರೊಳಗೆ ಎಲ್ಲಾ ಕ್ರಿಯಾ ಯೋಜನೆಗಳಿಗೆ ಅನುಮೋದನೆ ಪಡೆದು ತಕ್ಷಣ ಕಾಮಗಾರಿ ಆರಂಭಿಸಬೇಕು ಎಂದು ಇಓ ಗಿರೀಶ್‌ಗೆ ಸೂಚಿಸಿದರು.

ತಾಲೂಕಿನಲ್ಲಿ ವಾಡಿಕೆಗಿಂತ ಶೇ.7ರಷ್ಟು ಮಳೆಯಾಗಿದ್ದು, ಅಲಸಂದೆ, ಉದ್ದು, ಹೆಸರು, ಮುಸುಕಿನ ಜೋಳ ಹಾಗೂ ತಂಬಾಕು ಮತ್ತಿತರ ಬಿತ್ತನೆ ಕಾರ್ಯ ಚುರುಕಾಗಿ ನಡೆಯುತ್ತಿದೆ. ನಮ್ಮಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಇಲ್ಲ ಎಂದು ಕೃಷಿ ಸಹಾಯಕ ನಿರ್ದೇಶಕ ವೆಂಕಟೇಶ್ ತಿಳಿಸಿದರು.

ಕೊಲ್ಲೇಗೌಡನಹಳ್ಳಿ ನಿವೇಶನ ಸಮಸ್ಯೆ ನಿವಾರಣೆ ಸಂತಸದ ವಿಷಯ



ಹೆಚ್.ಡಿ.ಕೋಟೆ, ಮೇ 6(ಮಂಜು)– ಕಳೆದ 20 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕೊಲ್ಲೇಗೌಡನಹಳ್ಳಿ ನಿವೇಶನ ಸಮಸ್ಯೆ ಬಗೆಹರಿದು ನಿವೇಶನ ಹಂಚಿಕೆ ಮಾಡುವ ಹಂತಕ್ಕೆ ಬಂದಿರುವುದು ಸಂತಸ ತಂದಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಕೊಲ್ಲೇಗೌಡನಹಳ್ಳಿಯಲ್ಲಿ ನೂತನ ಬಡಾವಣೆ ನಿವೇಶನಗಳ ಹಂಚಿಕೆ ಕಾರ್ಯಕ್ರಮದಲ್ಲಿ ನಿವೇಶನ ಹಂಚಿಕೆ ಮಾಡಿ ಮಾತನಾಡಿದ ಅವರು, ಇಂದು ನಿವೇಶನ ಹಂಚಿಕೆಗೆ ಪೂರಕವಾಗುವಂತೆ ಶ್ರಮಿಸಿದ ಗ್ರಾಪಂ ಅಧ್ಯಕ್ಷರು, ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಅಭಿನಂದಿಸುತ್ತೇನೆ ಗುಂಪು ಮನೆ ಯೋಜನೆಗೆ ಬೇಡಿಕೆ ಇಟ್ಟಿದ್ದೀರಾ. ಈ ಸಂಬಂಧ ನಾನು ಸಂಬಂಧಪಟ್ಟವರೊಂದಿಗೆ ಚರ್ಚಿಸುತ್ತೇನೆ ಎಂದರು. ಇನ್ನೂ ಈ ಬಡಾವಣೆಗೆ ಮೂಲ ಸೌಕರ್ಯ ಮತ್ತು ಜಲಜೀವನ್ ಮಿಷನ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡುವ ಜೊತೆಗೆ ಆದಷ್ಟು ಬೇಗ ಹಕ್ಕುಪತ್ರ ಕೊಡುವುದಾಗಿ ತಿಳಿಸಿದರು.

ಕಂಚಮಳ್ಳಿ ಬಳಿಯ ಸ್ವಾಗತ ಕಮಾನು ಮಾದರಿಯಲ್ಲೇ ಕೊಲ್ಲೇಗೌಡನಹಳ್ಳಿ ಸರ್ಕಲ್ ಬಳಿ ಕಬಿನಿ ಜಲಾಶಯಕ್ಕೆ ಸ್ವಾಗತ ಕೋರುವ ಸ್ವಾಗತ ಕಮಾನು ನಿರ್ಮಾಣ ಮಾಡಲು ಯೋಜನೆ ಸಿದ್ದವಾಗಿದ್ದು, ಆದಷ್ಟು ಬೇಗ ನಿರ್ಮಾಣಕ್ಕೆ ಮುಂದಾಗುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ತಾಪಂ ಇಓ ಜೆರಾಲ್ಡ್ ರಾಜೇಶ್, ಜಿಪಂ ಕಿರಿಯ ಸಹಾಯಕ ಇಂಜಿನಿಯರ್ ಮೋಹನಶ್ರೀ, ಗ್ರಾಪಂ ಅಧ್ಯಕ್ಷ ಮಹೇಶ್, ಉಪಾಧ್ಯಕ್ಷೆ ಇಂದ್ರಮ್ಮ, ಸದಸ್ಯರಾದ ಸ್ವಾಮಿ, ಭಾಗ್ಯ, ಹೆಚ್.ಸಿ.ರವಿ, ಬಿ.ಪಿ.ದಯಾ ನಂದ, ಕೆಂಡಗಣ್ಣಸ್ವಾಮಿ, ಸ್ವಾಮಿ, ಲಕ್ಷ್ಮಿ, ಜಯಶೀಲಾ, ಗೀತಾ, ಪಿಡಿಓ ಸಂತೋಷ್ ನಾಗ್, ಮುಖಂಡರಾದ ಗೋಕುಲ್, ಮಹೇಶ್, ಸಿಬ್ಬಂದಿ ಸೋಮಣ್ಣ, ರಜನಿ ಹಾಗೂ ಗ್ರಾಮಸ್ಥರಿದ್ದರು.



ಮೈಸೂರು ತಾಲೂಕು ಕಡಕೊಳ ಗ್ರಾಮದ ಕನ್ನಡ ಗೆಳೆಯರ ಬಳಗದಿಂದ ಬಸವ ಜಯಂತಿ ಆಚರಿಸಲಾಯಿತು. ಈ ವೇಳೆ ದಿ.ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕುಮಾರಸ್ವಾಮಿ, ನಿರ್ದೇಶಕರಾದ ನಟರಾಜು, ಶ್ರೀಕಂಠ ತೊಂಡೇಗೌಡ, ಬಳಗದ ಕಾರ್ಯದರ್ಶಿ ಸ್ವಾಮಿನಾಯಕ, ಕಡಕೊಳ ಪಪಂ ಮುಖ್ಯಾಧಿಕಾರಿ ವೆಂಕಟೇಶ್, ಉಪಾಧ್ಯಕ್ಷ ಶಿವಪ್ಪ, ಗ್ರಾಮದ ಮುಖಂಡರಾದ ಕೆಟಿ ಶಿವಣ್ಣ, ಕಡಕೊಳ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ನಂಜಪ್ಪ, ಗೋವಿಂದರಾಜು, ರಂಗಸ್ವಾಮಿ, ಸಿದ್ದೇಶ್ ಮತ್ತಿತರರು ಇದ್ದರು.

ಅಂಬೇಡ್ಕರ್‌ಗೂ ನಮಗೂ ತಾಯಿ ಮಗುವಿನ ಸಂಬಂಧ

ಸಂಸದ ವಿ.ಶ್ರೀನಿವಾಸಪ್ರಸಾದ್



ನಂಜನಗೂಡು, ಮೇ 6(ಸುದರ್ಶನ್)– ಡಾ.ಬಿ.ಆರ್.ಅಂಬೇಡ್ಕರ್ ಅವರಿಗೂ ನಮಗೂ ತಾಯಿ ಮಗುವಿನ ಸಂಬಂಧ. ಶತಮಾನಗಳಾಚೆ ಪ್ರಾಣಿ ಪಕ್ಷಿಗಳಿಗಿಂತ ಹೀನಾಯವಾಗಿ ಬದುಕುತ್ತಿದ್ದ ಅಸ್ಪೃಶ್ಯ ಜನಾಂಗಕ್ಕೆ ಗೌರವಯುತ ಬದುಕು ಕಟ್ಟಿಕೊಟ್ಟವರು ಡಾ.ಬಿ.ಆರ್.ಅಂಬೇಡ್ಕರ್ ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ತಾಲೂಕಿನ ದೇವಿರಮ್ಮನಹಳ್ಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದ ಅವರು, ಒಬ್ಬ ತಾಯಿ ಹೇಗೆ ತನಗೆ ಅನ್ನ, ಬಟ್ಟೆ ಇಲ್ಲದಿದ್ದರೂ ಸಹ ತನ್ನ ಮಗುವಿಗೆ ಅನ್ನ ಬಟ್ಟೆ ಸಿಗಬೇಕೆಂದು ಹಂಬಲಿಸುವಳೋ ಅದೇ ರೀತಿ ಅಪಮಾನ, ದೌರ್ಜನ್ಯಕ್ಕೊಳಗಾಗಿದ್ದ ಜನಾಂಗವನ್ನು ಮೇಲೆತ್ತಲು ಸ್ವತಃ ನೋವನ್ನುಂಡು, ಅಪಮಾನಕ್ಕೊಳಗಾಗಿ ಇತರ ಜನಾಂಗದವರಂತೆ ಗೌರವಯುತವಾಗಿ ಬದುಕಬೇಕೆಂದು ಹೋರಾಡಿದವರು ಅಂಬೇಡ್ಕರ್. ಅವರ ಶ್ರಮದಿಂದಾಗಿ ಇಂದು ದಲಿತರೂ ಸಹ ಶಿಕ್ಷಿತರಾಗಿ ಅಧಿಕಾರವನ್ನು ಪಡೆಯುವಂತಾಗಿದೆ ಎಂದರು. ಅಸ್ಪೃಶ್ಯ ಜನಾಂಗಕ್ಕೆ ಅನಕ್ಷರತೆ, ಕುಡಿತ ಕಾಣದ ಶತ್ರುವಿದ್ದಂತೆ. ಎಲ್ಲರೂ ಶಿಕ್ಷಿತರಾಗಿ ಗೌರವಯುತ ಬದುಕು ನಡೆಸಬೇಕೆಂಬುದು ಅಂಬೇಡ್ಕರ್ ಕನಸು. ಅವರ ಕನಸನ್ನು ನನಸು ಮಾಡಲು ಎಲ್ಲರೂ ಶಿಕ್ಷಿತರಾಗಬೇಕು. ಕುಡಿತ ಬಿಡಬೇಕು, ಜೊತೆಗೆ ಸದಾ ಅವರ ವಿಚಾರಧಾರೆಗಳನ್ನು ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಹಾಗೂ ಪಿಡಿಓ ಮಲ್ಲುಂಡಿ ಮಹದೇವಸ್ವಾಮಿ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ಒಂದು ದಿನ ಕೂಡ ಸುಖಪಡಲಿಲ್ಲ ಬದುಕಿನುದ್ದಕ್ಕೂ ಬರೀ ನೋವುನ್ನುಂಡವರು. ಅವರ ಐವರು ಮಕ್ಕಳಲ್ಲಿ ನಾಲ್ವರು ಹಸಿವಿನಿಂದಲೇ ಸತ್ತರು. ಅವರು ವಿದ್ಯೆ ಪಡೆದು ಸಂವಿಧಾನ ರಚನೆ ಮಾಡುವ ಹೊತ್ತಿಗೆ 8 ಜನರ ಸಾವನ್ನು ಕಂಡಿದ್ದರು. ಆದರೂ ಛಲ ಬಿಡದೆ ಪರಿಶಿಷ್ಟರ ಬದುಕು ಹಸನು ಮಾಡಲು ಶಿಕ್ಷಣ ಪಡೆದು ಹೋರಾಡಿದವರು. ಅವರ ತ್ಯಾಗವನ್ನು ನಾವೆಲ್ಲ ಸ್ಮರಿಸಬೇಕಿದೆ. ಆದರೆ ಇಂದಿನ ಯುವ ಜನತೆ ಅವರ ವಿಚಾರಧಾರೆ ಮರೆತು ದಾರಿ ತಪ್ಪುತ್ತಿದೆ ಎಂದರಲ್ಲದೆ ವಿ.ಶ್ರೀನಿವಾಸ ಪ್ರಸಾದರ ಶ್ರಮದಿಂದ ಚಾಮರಾಜನಗರ ಜಿಲ್ಲೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವಿಶ್ವವಿದ್ಯಾಲಯ ಸ್ಥಾಪನೆಗೊಂಡಿದೆ ಎಂದರು.

ಸಮಾರಂಭದಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರ ಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ಪ್ರಥಮದರ್ಜೆ ಗುತ್ತಿಗೆದಾರರಾದ ಯು.ಎನ್.ಪದ್ಮನಾಭ ರಾವ್, ತಾಪಂ ಮಾಜಿ ಸದಸ್ಯ ಬಿ.ಎಸ್.ರಾಮು, ಎಪಿಎಂಸಿ ಸದಸ್ಯ ಗುರುಸ್ವಾಮಿ, ಮುಖಂಡರಾದ ಸಣ್ಣಯ್ಯ, ಲೋಕೇಶ್, ಇದ್ದರು.

ಸ್ಮಶಾನ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ತಿ.ನರಸೀಪುರ, ಮೇ 6(ಎಸ್‌ಕೆ)– ಗೋಪಾಲಪುರ ಗ್ರಾಮ ಅಭಿವೃದ್ಧಿಯಲ್ಲಿ ತುಂಬಾ ಹಿಂದುಳಿದಿದ್ದು, ವಾರ್ಡ್ ಸದಸ್ಯರು ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕು ಎಂದು ಪುರಸಭಾ ಸದಸ್ಯ ಅರ್ಜುನ್ ಮನವಿ ಮಾಡಿದರು.

14ನೇ ಹಣಕಾಸು ಯೋಜನೆಯಡಿ 17 ಲಕ್ಷ ರೂ. ವೆಚ್ಚದಲ್ಲಿ ಪುರಸಭೆಯಿಂದ ಅಭಿವೃದ್ಧಿ ಪಡಿಸಲಾಗುವ ಗೋಪಾಲಪುರ ಗ್ರಾಮದ ದಲಿತರ ಸ್ಮಶಾನ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಅಭಿ ವೃದ್ಧಿಯಲ್ಲಿ ಅತಿ ಹೆಚ್ಚು ಹಿಂದುಳಿದಿರುವ ಗೋಪಾಲಪುರಕ್ಕೆ ಮೂಲ ಸೌಕರ್ಯಗಳ ಕೊರತೆ ಎದುರಾಗಿದೆ. 2 ಎಕರೆ ವಿಸ್ತೀರ್ಣ ಹೊಂದಿರುವ ಸ್ಮಶಾನ ಅಭಿವೃದ್ಧಿಗೆ ಪುರಸಭೆ ಹಣ ಬಿಡುಗಡೆ ಮಾಡಿದ್ದು, ಗುತ್ತಿಗೆದಾರರು ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದರು.

ವಾರ್ಡ್ ಸದಸ್ಯರು ಗ್ರಾಮದ ಕಾಲೋನಿ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರಲು ಶ್ರಮಿಸಬೇಕು. ಅಲ್ಲದೇ ಗ್ರಾಮದಲ್ಲಿ ಬಾಬು ಜಗಜೀವನರಾಂ ಸಮುದಾಯ ಭವನ ಸಹ ಇದ್ದು ಯುವಕರಿಗೆ ಪುರಸಭೆ ವತಿಯಿಂದ ಕ್ರೀಡಾ ಸಲಕರಣೆ ಕೊಡಿಸುವಂತೆ ಮನವಿ ಮಾಡಿದರು.

ಪುರಸಭಾ ಮಾಜಿ ಸದಸ್ಯ ರಾಘವೇಂದ್ರ ಮಾತನಾಡಿದರು. ಈ ವೇಳೆ ಗ್ರಾಮದ ಮುಖಂಡ ಸಿ.ಮಹದೇವು, ಗುತ್ತಿಗೆದಾರ ರಮೇಶ್ ಎಚ್.ಜಯಪ್ರಕಾಶ್, ಸಿ.ಡಿ.ವೆಂಕಟೇಶ್, ಮಹದೇವ, ರಾಜು ಮತ್ತಿತರರಿದ್ದರು.

ಟಿವಿ, ಸೆಟ್‌ಟಾಪ್ ಬಾಕ್ಸ್ ಕಳವು: ಆರೋಪಿಗಳ ಬಂಧನ

ಬೈಲಕುಪ್ಪೆ, ಮೇ 6(ರಾಜೇಶ್)– 3 ಟಿವಿ, ಸೆಟ್‌ಟಾಪ್ ಬಾಕ್ಸ್‌ಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬೈಲಕುಪ್ಪೆ ಪೊಲೀಸರು ಬಂಧಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆ ಶಾಂಗ್ರಿಲಾ ಬಾರ್ ಅಂಡ್ ರೆಸ್ಟೋರೆಂಟ್‌ನ ರೂಂನಲ್ಲಿ ಅಳವಡಿಸಿದ್ದ 29 ಸಾವಿರ ರೂ. ಬೆಲೆಬಾಳುವ ಟಿವಿ, ಸೆಟ್‌ಟಾಪ್ ಬಾಕ್ಸ್‌ಗಳನ್ನು ಗುರುವಾರ ರಾತ್ರಿ ಕಳ್ಳತನ ಮಾಡಿದ್ದ ಸೋಮಚಾರಿ ಮತ್ತು ಕಾಶಿನಾಥ ಎಂಬುವರನ್ನು ಬೈಲುಕುಪ್ಪೆ ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಎಸ್‌ಐ ಬಸವರಾಜು, ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ವಿಜಯೇಂದ್ರ, ಎಎಸ್‌ಐ ಶಿವರಾಜು, ಲೋಕೇಶ್, ಮುಖ್ಯಪೇದೆ ಸೋಮಶೇಖರ್, ರವಿಕುಮಾರ್, ಸಿಬ್ಬಂದಿ ಅಣ್ಣಯ್ಯ, ನಂದೀಶ, ಮಹದೇವ, ಅಶೋಕ ಇದ್ದರು.

ಕಾರ್ಮಿಕರ ಭವನ ನಿರ್ಮಾಣಕ್ಕೆ ಕ್ರಮ: ಅನಿಲ್ ಚಿಕ್ಕಮಾದು



ಸರಗೂರು, ಮೇ 6(ನಾಗೇಶ್)– ಕಾರ್ಮಿಕ ಇಲಾಖೆಗೆ ಸ್ವಂತ ಕಟ್ಟಡ ಹಾಗೂ ಕಾರ್ಮಿಕರ ಭವನ ನಿರ್ಮಾಣಕ್ಕೆ ಕ್ರಮ ವಹಿಸುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಮೊದಲ ಮುಖ್ಯರಸ್ತೆಯಲ್ಲಿ ನೂತನ ಕಾರ್ಮಿಕರ ನಿರೀಕ್ಷಕರ ಕಚೇರಿ ಉದ್ಘಾಟಿಸಿ, ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಟ್ಟಡ ಕಾರ್ಮಿಕರಿಗೆ ಸರ್ಕಾರ ಅನೇಕ ಯೋಜನೆ ಜಾರಿಗೊಳಿಸಿದ್ದು ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಕಾರ್ಮಿಕರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಮುಂದಾಗಬೇಕು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನ, ಮಕ್ಕಳ ಮದುವೆಗೆ ಧನಸಹಾಯ, ಅಪಘಾತ ಪರಿಹಾರ, ಪಿಂಚಣಿ ಸೌಲಭ್ಯ, ವೈದ್ಯಕೀಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಸರಗೂರು ವೃತ್ತ ಪ್ರಭಾರ ಹಿರಿಯ ಕಾರ್ಮಿಕ ನಿರೀಕ್ಷಕ ಎಸ್.ಶಶಿಧರ್ ಮಾತನಾಡಿ, ಹೆಚ್.ಡಿ.ಕೋಟೆಯಲ್ಲಿ ದಾಸ್ತಾನು ಮಾಡಿದ್ದ ಕಿಟ್‌ಗಳನ್ನು ಸರಗೂರು ತಾಲೂಕು ಸೇರಿದಂತೆ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳ ಕೋರಿಕೆ ಮೇರೆಗೆ ನೂತನ ಕಾರ್ಮಿಕರ ನಿರೀಕ್ಷಕರ ಕಚೇರಿ ಉದ್ಘಾಟನೆ ಸಂದರ್ಭ ವಿತರಣೆ ಮಾಡಲಾಗಿದೆ ಇದರಲ್ಲಿ ಸುರಕ್ಷಾ ಕಿಟ್ 40 ಹಾಗೂ ವಿವಿಧ 70 ಕಿಟ್‌ಗಳನ್ನು ನೀಡಲಾಗಿದೆ ಎಂದರು.

ಇದೇ ವೇಳೆ ಶ್ರಮ ಸಾಮರ್ಥ್ಯ ಯೋಜನೆಯಡಿ ಎಲೆಕ್ಟ್ರಿಷಿಯನ್, ಪೇಂಟರ್, ಪ್ಲಂಬರ್‌ಗಳಿಗೆ ಟೂಲ್ ಕಿಟ್ ಹಾಗೂ ಸುರಕ್ಷಾ ಕಿಟ್‌ಗಳನ್ನು ಶಾಸಕ ಅನಿಲ್ ಚಿಕ್ಕಮಾದು ವಿತರಿಸಿದರು. ಈ ವೇಳೆ ಪಪಂ 9ನೇ ವಾರ್ಡ್ ಸದಸ್ಯ ಶ್ರೀನಿವಾಸ್, ಜಿಲ್ಲಾ ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ್, ಕಾರ್ಮಿಕ ಅಧಿಕಾರಿಗಳಾದ ರಾಜೇಶ್ ಕೆ.ಜಾಧವ್, ಪಿ.ಎಂ.ನಿಖಿಲ್‌ಚಂದ್ರ, ಆರ್.ರವಿ, ಜಯಣ್ಣ, ಸಿಬ್ಬಂದಿಗಳಾದ ಶಿವಣ್ಣ, ಹೆಚ್.ಪಿ.ಶ್ರೀಧರ್, ಸರಿತಾ, ಚಂದ್ರಕಾಂತ್, ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಎಸ್.ಹೆಚ್. ರಮೇಶ್, ಖಜಾಂಚಿ ಆರ್.ಮಣಿ, ಸರಗೂರು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಶಿವರಾಜು, ಬಸವರಾಜು, ಬಿ.ಮಟಕೆರೆ ಭುವನೇಶ್ವರಿ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಜಯಕುಮಾರ್, ಸ್ವಾಮಿ ಇತರರಿದ್ದರು.

ಕನ್ನಡ ಹಿಂದುಳಿಯಲು ಕನ್ನಡಿಗರಲ್ಲಿನ ಅಭಿಮಾನದ ಕೊರತೆಯೇ ಕಾರಣ

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಮರಿಸ್ವಾಮಿ ವಿಷಾದ



ತಿ.ನರಸೀಪುರ, ಮೇ 6(ಎಸ್‌ಕೆ)– ಒಂದೂವರೆ ಸಾವಿರ ವರ್ಷಗಳ ಚಾರಿತ್ರಿಕ ಹಿನ್ನೆಲೆ ಇರುವ ಕನ್ನಡ ಭಾಷೆ ಭರತ ಖಂಡವನ್ನೇ ವ್ಯಾಪಿಸಿದ್ದರೂ ಇಂದಿಗೂ ಬೆಳವಣಿಗೆಯಾಗದಿರಲು ಕನ್ನಡಿಗರಲ್ಲಿನ ಅಭಿಮಾನದ ಕೊರತೆಯೇ ಕಾರಣ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಮರಿಸ್ವಾಮಿ ವಿಷಾದಿಸಿದರು.

ಪಟ್ಟಣದ ಕಸಾಪ ಕಚೇರಿ ಆವರಣದಲ್ಲಿ ನಡೆದ 108ನೇ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಾತೃಭಾಷೆ ಮೇಲೆ ನಿಜವಾದ ಅಭಿಮಾನವಿದ್ದಾಗ ಮಾತ್ರ ಕನ್ನಡ ವ್ಯಾಪಕವಾಗಿ ಬೆಳವಣಿಗೆಯಾಗಲಿದೆ ಎಂದರು.

ನಾಡನ್ನು ಕಟ್ಟಿದ ಮೈಸೂರಿನ ಅರಸರು ಆರಂಭಿಸಿದ ಕಸಾಪ ಶತಮಾನ ಪೂರೈಸಿ, ಸಾಹಿತ್ಯ ಬೆಳವಣಿಗೆಗೆ ಶ್ರಮಿಸುತ್ತಿದೆ. ಕನ್ನಡ ಕಿರುತೆರೆ ಹಾಗೂ ಬೆಳ್ಳಿತೆರೆ ನಟರು ನಾಡು ನುಡಿ ಬೆಳವಣಿಗೆಗೆ ಕಲಾಸೇವೆಯೊಂದಿಗೆ ದುಡಿಯುತ್ತಿದ್ದಾರೆ. ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಅವರು ಸಾಹಿತ್ಯ ಪರಿಷತ್‌ನ ಚಟುವಟಿಕೆಗಳತ್ತ ತಾಲೂಕಿನ ಜನರನ್ನು ಸಮೀಕರಿಸುವ ಕಾಯಕವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಸಾಹಿತ್ಯ ಚಟುವಟಿಕೆಗಳು ಮತ್ತಷ್ಟು ಕ್ರಿಯಾಶೀಲತೆಯಿಂದ ನಡೆಯುವಂತಾಗಲಿ ಎಂದರು.

ಸಾರ್ವಜನಿಕ ಆಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ರೇವಣ್ಣ ಮಾತನಾಡಿ, ಕಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಸರುವಾಸಿಯಾಗಿರುವ ತಾಲೂಕಿನಲ್ಲಿ ಕಲಾ ಭವನದ ಅಗತ್ಯವಿದೆ. ಪುರಸಭೆ ಅಧ್ಯಕ್ಷರು ಈ ಬಗ್ಗೆ ಗಮನಹರಿಸಿ ಸೂಕ್ತ ನಿವೇಶನ ಕಲ್ಪಿಸಬೇಕು. ಸಂಸದರು ಹಾಗೂ ಶಾಸಕರಿಗೆ ಮನವಿ ಸಲ್ಲಿಸಿ, ಕಟ್ಟಡ ನಿರ್ಮಾಣಕ್ಕೆ ನೆರವು ಪಡೆಯಲು ನಿರ್ಣಯವೊಂದನ್ನು ಸದರಿ ಕಾರ್ಯಕ್ರಮದಲ್ಲಿ ಮಾಡಬೇಕು. ಸ್ಥಳೀಯ ಜನಪ್ರತಿನಿಧಿಗಳು ಹಾಗೂ ನಾವೆಲ್ಲರೂ ಒಕ್ಕೊರಲಿನ ಒತ್ತಾಯ ಮಾಡೋಣ ಎಂದರು.

ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಸಾಹಿತ್ಯ ಪರಿಷತ್ ಚರಿತ್ರೆ ತೆರೆದಿಟ್ಟರು. ನಿಸರ್ಗ ಪ್ರಿಯ ಮೆಲೋಡಿಯಸ್‌ನ ಚಂದನಾ ಶ್ರೀನಿವಾಸ್ ದಂಪತಿ ಕನ್ನಡ ಗೀತಗಾಯನ ನಡೆಸಿಕೊಟ್ಟರು. ಹಿರಿಯ ಹಾಸ್ಯ ನಟ ಡಿಂಗ್ರಿ ನಾಗರಾಜು, ಪುರಸಭೆ ಅಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿದರು.

ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಗೌರವ ಕಾರ್ಯದರ್ಶಿ ಎಂ.ವಿ.ಶಿವಶಂಕರಮೂರ್ತಿ, ಕೆ.ಸುಧಾ, ಸಂಚಾಲಕ ಬಿ.ಎಂ.ಶಿವಕುಮಾರ್, ನಾಗರಾಜು, ಸಹ ಕಾರ್ಯದರ್ಶಿ ಸಿ.ಲಿಂಗರಾಜು, ಮಹಿಳಾ ಅಧ್ಯಕ್ಷೆ ಜಿ.ಎಸ್. ರಾಜೇಶ್ವರಿ, ಗೌರವ ಕಾರ್ಯದರ್ಶಿ ಸಂಗೀತ, ಮುಖಂಡರಾದ ಸಂತೃಪ್ತಿ ಕುಮಾರ್, ಡಿ.ಮಾದೇಶ್ ನಾಯಕ, ಮಹದೇವಮ್ಮ, ಹೆಚ್.ಅಣ್ಣಯ್ಯಸ್ವಾಮಿ, ಜಾನಕಿ, ಜಯಲಕ್ಷ್ಮಿ, ಇಂದಿರಾ, ಹೆಚ್.ಎಸ್. ಬಸವರಾಜು, ಎಸ್.ಕೃಷ್ಣಮೂರ್ತಿ, ಬಿ.ಸತ್ಯನಾರಾಯಣ, ನಿಂಗರಾಜು, ಹೆಚ್.ಕೆ.ಕಿರಣ್, ಎ.ಜಿ.ಮಹೇಶ್, ಸುಂದರನಾಯಕ, ಸೌಭಾಗ್ಯ, ಎಂ.ಗಾಯತ್ರಿ, ವೆಂಕಟೇಶ್‌ಮೂರ್ತಿ, ಡಿ.ಎಸ್. ನವೀನ್ ಕುಮಾರ್, ಆರ್.ಸಾಗರ್, ರಾಜು, ಪ್ರಭಾಕರ್, ಬಿ.ಎಂ.ನಾಗೇಶ್, ಶಿವಕುಮಾರ್ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.9.30ಕ್ಕೆ, ಮ.12ಕ್ಕೆ, ಮ.2.25ಕ್ಕೆ, ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ದ್ವಿಮುಖ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.15ಕ್ಕೆ, ರಾ.7.15ಕ್ಕೆ, ಕೆಜಿಎಫ್ 2 (ಕ): ಮ.3.55ಕ್ಕೆ, ಸಿಬಿಐ 5: ದಿ ಬ್ರೈನ್ (ಮ): ರಾ.10ಕ್ಕೆ.
ಸ್ಕ್ರೀನ್ 3	ಪುರುಷೋತ್ತಮ (ಕ): ಬೆ.10.15ಕ್ಕೆ, ಟಕ್ಕರ್ (ಕ): ಮ.1.15ಕ್ಕೆ, ರನ್‌ವೇ 34 (ಹಿಂ): ಸಂ.4ಕ್ಕೆ, ದಿ ಕನ್ವರ್ಷನ್ (ಹಿಂ): ರಾ.7ಕ್ಕೆ, ಮಕಲ್ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.10ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ, ಐಂಗಾರನ್ (ತ): ಮ.1.15ಕ್ಕೆ, ಅವತಾರ ಪುರುಷ (ಕ): ಸಂ.4ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕೆಜಿಎಫ್ 2(ಕ): ಬೆ.9.40ಕ್ಕೆ, ಮ.3.40ಕ್ಕೆ, ರಾ.9.50ಕ್ಕೆ, ಅವತಾರ ಪುರುಷ (ಕ): ಮ.12.55ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಸ್ಟ್ರೇಂಜ್(ಇಂ): ಬೆ.9.30ಕ್ಕೆ, ಮ.3.35ಕ್ಕೆ, ಕೆಜಿಎಫ್ 2 (ಕ): ಮ.12.10ಕ್ಕೆ, ಸಂ.6.15ಕ್ಕೆ, ಡಾಕ್ಟರ್ ಸ್ಟ್ರೇಂಜ್ (ಹಿಂ): ರಾ.9.40ಕ್ಕೆ.
ಸ್ಕ್ರೀನ್ 4	ಅವತಾರ ಪುರುಷ (ಕ): ಬೆ.10.15ಕ್ಕೆ, ಟಕ್ಕರ್ (ಕ): ಮ.1.05ಕ್ಕೆ, ಐಂಗಾರನ್ (ತ): ಮ.3.50ಕ್ಕೆ, ಪುರುಷೋತ್ತಮ (ಕ): ಸಂ.6.40ಕ್ಕೆ, ಸಿಬಿಐ (ಮ): ರಾ.9.50ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪುರುಷೋತ್ತಮ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.30ಕ್ಕೆ, ಸಂ.4.10ಕ್ಕೆ, ಸಂ.6.55ಕ್ಕೆ.
ಸ್ಕ್ರೀನ್ 2	ಅವತಾರ ಪುರುಷ (ಕ): ಬೆ.10.30ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಸ್ಟ್ರೇಂಜ್ (ಇಂ): ಬೆ.10.30ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಟಕ್ಕರ್ (ಕ): ಬೆ.10.30ಕ್ಕೆ, ಸಂ.4.05ಕ್ಕೆ, ಪುರುಷೋತ್ತಮ (ಕ): ಮ.1ಕ್ಕೆ, ಸಿಬಿಐ 5: ದಿ ಬ್ರೈನ್ (ಮ): ಸಂ.6.30ಕ್ಕೆ, ರಾ.9.45ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಆಚಾರ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕೆಜಿಎಫ್ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಜೇಮ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೆಜಿಎಫ್–2(ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟಕ್ಕರ್ (ಕ)	4 ಪ್ರದರ್ಶನಗಳು
ಸಂಗಂ	
ಶೋಕಿವಾಲಾ (ಕ)	4 ಪ್ರದರ್ಶನಗಳು
ಲಿಡೋ	
ಪುರುಷೋತ್ತಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಟಕ್ಕರ್ (ಕ)	4 ಪ್ರದರ್ಶನಗಳು

ಗುಜರಾತ್ ವಿರುದ್ಧ ರೋಹಿತ್ ಪಡೆಗೆ ಜಯ

ಮುಂಬೈ, ಮೇ 6– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಮುಂಬೈ ಇಂಡಿಯನ್ಸ್ ಗುಜರಾತ್ ಟೈಟನ್ಸ್ ವಿರುದ್ಧ 5 ರನ್‌ಗಳ ಗೆಲುವು ಸಾಧಿಸಿದೆ. ಈ ಮೂಲಕ ಮುಂಬೈ ಟೂರ್ನಿಯಲ್ಲಿ 2ನೇ ಗೆಲುವು ದಾಖಲಿಸಿದೆ.



ಇಲ್ಲಿನ ಬ್ರೆಬೋರ್ನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 177 ರನ್ ಗಳಿಸಿತು. ತಂಡದ ಪರ ಆರಂಭಿಕರಾದ ಇಶನ್ ಕಿಶನ್ 45, ರೋಹಿತ್ ಶರ್ಮಾ 43, ಟೀಮ್ ಡೇವಿಡ್ 44, ತಿಲಕ್ ವರ್ಮಾ 21, ಸೂರ್ಯಕುಮಾರ್ ಯಾದವ್ 13 ರನ್ ಗಳಿಸಿದರು. ಗುಜರಾತ್ ಪರ ರಶೀದ್ ಖಾನ್ 2, ಲ್ಯೂಕಿ ಫರ್ಗ್ಯೂಸನ್, ಪ್ರದೀಪ್ ಸಾಂಗ್ವನ್ ಹಾಗೂ ಅಲ್ಜರಿ ಜೋಸೆಫ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಮುಂಬೈ ನೀಡಿದ ಗುರಿ ಬೆನ್ನತ್ತಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 172 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಆರಂಭಿಕರಾದ ವೃದ್ಧಿಮಾನ್ ಸಾಹ 55, ಶುಭ್‌ಮನ್ ಗಿಲ್ 52, ಹಾರ್ದಿಕ್ ಪಾಂಡ್ಯ 24, ಡೇವಿಡ್ ಮಿಲ್ಲರ್ 19, ಸಾಯಿ ಸುದರ್ಶನ್ 14 ರನ್ ಗಳಿಸಿದರು. ಮುಂಬೈ ಪರ ಮುರುಗನ್ ಅಶ್ವಿನ್ 2, ಪೊಲ್ಲಾರ್ಡ್ 1 ವಿಕೆಟ್ ಪಡೆದರು. ಟೀಮ್ ಡೇವಿಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣ



ಮಲ್ಲುಂಡಿ, ಮೇ 6(ಚನ್ನಪ್ಪ)– ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಮಹಾಪುರುಷ ಬಸವಣ್ಣ ಎಂದು ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ ತಿಳಿಸಿದರು.

ಸಮೀಪದ ಹಲ್ಲರೆ ಗ್ರಾಪಂನಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಯೆಯೇ ಧರ್ಮದ ಮೂಲವಯ್ಯ ಎನ್ನುವ ಮೂಲಕ ದಯೆ ಇಲ್ಲದ ಧರ್ಮ ಧರ್ಮವೇ ಅಲ್ಲ ಕಾಯಕವೇ ಕೈಲಾಸ ಎನ್ನುವ ಮೂಲಕ ಕಾಯಕದ ಮಹತ್ವವನ್ನು ಬಸವಣ್ಣನವರು ಸಾರಿದರು ಎಂದರು. ಗ್ರಾಪಂ ಸದಸ್ಯರಾದ ಲಕ್ಷ್ಮಿ, ಸಿದ್ದನಾಯಕ, ಮಲ್ಲಪ್ಪ ಮುಖಂಡ ಶಿವಮೂರ್ತಿ, ಮಹದೇವನಾಯಕ, ಪಿಡಿಓ ವರದರಾಜು ಹಾಜರಿದ್ದರು.

ಕ್ಯಾಪ್ಸಿಕಮ್ ರವಿ ಹತ್ಯೆ ಪ್ರಕರಣ: ಮೂವರು ಪೊಲೀಸ್ ವಶಕ್ಕೆ

ಮೈಸೂರು, ಮೇ 6(ಆರ್‌ಕೆ)–ಬಂಡಿಪಾಳ್ಯ ಎಪಿಎಂಸಿಯಲ್ಲಿನ ತರಕಾರಿ ಏಜೆಂಟ್ ಕ್ಯಾಪ್ಸಿಕಮ್ ರವಿ ಹತ್ಯೆ ಪ್ರಕರಣದ ಆರೋಪಿಗಳೆನ್ನಲಾದ ಮೂವರನ್ನು ಪೊಲೀಸರು ಗುರುವಾರ ರಾತ್ರಿ ಬೆಂಗಳೂರಿನ ಹೊರ ವಲಯದಲ್ಲಿ ವಶಕ್ಕೆ ಪಡೆದಿದ್ದಾರೆ.


ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ರವಿಯನ್ನು ಹತ್ಯೆಗೈದು ಪರಾರಿಯಾಗಿದ್ದ ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಬೆಂಗಳೂರಿನ ಹೊರ ವಲಯದಲ್ಲಿ ಅಡಗಿದ್ದರು. ಸುಳಿವಿನ ಜಾಡು ಹಿಡಿದು ಬೆನ್ನತ್ತಿದ ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಶಶಿಕುಮಾರ್ ನೇತೃತ್ವದ ತನಿಖಾ ತಂಡ, ಭಾತ್ಮೀದಾರರ ನೆರವಿನೊಂದಿಗೆ ಗುರುವಾರ ತಡರಾತ್ರಿ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿಗೆ ಕರೆತಂದು ಅಜ್ಞಾತ ಸ್ಥಳದಲ್ಲಿ ತೀವ್ರ ವಿಚಾರಣೆಗೊಳಪಡಿಸಿರುವ ಪೊಲೀಸರು, ಕೊಲೆಗೆ ಕಾರಣ, ಸಹಕರಿಸಿದವರ ಮಾಹಿತಿ ಕಲೆ ಹಾಕುತ್ತಿದ್ದು, ಇಂದು ಎಪಿಎಂಸಿ ಪ್ರಾಂಗಣಕ್ಕೆ ಕರೆದೊಯ್ದು ರವಿ ಹತ್ಯೆಯಾದ ಸ್ಥಳ ಮಹಜರು ನಡೆಸಿದ್ದಾರೆ. ಕೊಲೆಗೆ ಬಳಸಿದ ಮಾರಕಾಸ್ತ್ರ, ವಾಹನವನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ. ತರಕಾರಿ ವ್ಯಾಪಾರದಲ್ಲಿ ಅಧಿಕ ಲಾಭ ಗಳಿಸಿದ್ದಲ್ಲದೆ, ಕೋಟ್ಯಾಂತರ ರೂ. ಆಸ್ತಿ ಸಂಪಾದನೆ ಮಾಡಿದ್ದ ರವಿ, ಒಂದೆರಡು ಬಾರಿ ಆರ್ಥಿಕ ಸಹಾಯ ಕೇಳಿದಾಗ ನಿರಾಕರಿಸಿದ್ದರಿಂದ ಉಂಟಾದ ದ್ವೇಷ ಕೊಲೆಯಲ್ಲಿ ಅಂತ್ಯವಾಗಿದೆ ಎಂದು ವಿಚಾರಣೆಯಿಂದ ತಿಳಿದು ಬಂದಿದೆ ಎಂದು ಮೂಲಗಳು ತಿಳಿಸಿವೆ.

ತಮ್ಮ ಊರು ಮಹದೇವಪುರದಿಂದ ತರಕಾರಿ ತಂದು ವ್ಯಾಪಾರ ಮಾಡುತ್ತಿದ್ದ ರವಿ, ನಂತರ ಸಾಮಾನ್ಯ ಮಧ್ಯವರ್ತಿಯಾಗಿ ಬಂಡಿಪಾಳ್ಯ ಎಪಿಎಂಸಿಯಲ್ಲಿ ಕ್ಯಾಪ್ಸಿಕಮ್ ವ್ಯಾಪಾರದಲ್ಲಿ ಅಧಿಕ ಲಾಭ ಗಳಿಸಿ, ಬಹಳ ಬೇಗ ಶ್ರೀಮಂತನಾಗಿದ್ದ. ಹಲವು ವರ್ಷಗಳಿಂದ ಸ್ವಂತ ಮಳಿಗೆ ಹೊಂದಿದ್ದರೂ, ತಮ್ಮ ವ್ಯಾಪಾರದಲ್ಲಿ ಯಶಸ್ಸು ಸಾಧ್ಯವಾಗದೇ ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ ಆರಂಭಿಸಿ ಭಾರೀ ದುಡ್ಡು ಮಾಡಿದ್ದಾನೆಂಬ ಹೊಟ್ಟೆಕಿಚ್ಚಿನಿಂದ ರವಿಯನ್ನು ಹತ್ಯೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಹತ್ಯೆಗೈದವರು ಮೈಸೂರಿನವರೇ ಆಗಿದ್ದು, ಬಂಡಿಪಾಳ್ಯ ಎಪಿಎಂಸಿ ವರ್ತಕರೆಂದು ಹೇಳಲಾಗಿದೆ. ಇನ್ನೂ ವಿಚಾರಣೆ ನಡೆಯುತ್ತಿರುವುದರಿಂದ ನಾಳೆ (ಮೇ 7) ಸಂಪೂರ್ಣ ಮಾಹಿತಿ ನೀಡುವುದಾಗಿ ಎಸ್ಪಿ ಆರ್.ಚೇತನ್ ತಿಳಿಸಿದ್ದಾರೆ.

ಶಾಲೆ ಆರಂಭ ಮುಂದೂಡಿ: ಸಿಎಂಗೆ ಹೊರಟ್ಟಿ ಪತ್ರ



ಬೆಂಗಳೂರು, ಮೇ 5– ಕಡು ಬೇಸಿಗೆಯಲ್ಲಿ ಶಾಲೆಗಳನ್ನು ಪುನರಾರಂಭಿಸುವುದು ಸರಿಯಾದ ಕ್ರಮವಲ್ಲ. ಹಾಗಾಗಿ ಜೂನ್ 1ರಿಂದ ಶಾಲೆ ಆರಂಭಿಸುವ ಬಗ್ಗೆ ಸರ್ಕಾರ ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ಸಭಾಪತಿ ಬಸವರಾಜ ಹೊರಟ್ಟಿ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಹಿಂದೆಂದೂ ಕಂಡರಿಯದ ಬಿರು ಬಿಸಿಲಿನ ಬೇಗೆಯು ಈ ವರ್ಷ ದೇಶದಾದ್ಯಂತ ಇದೆ. ರಾಜ್ಯದಲ್ಲೂ ಬಿಸಿಲಿನ ಬೇಗೆಯಲ್ಲಿ ಜನ ಹಾಗೂ ಜಾನುವಾರುಗಳು ತೊಂದರೆ ಪಡುತ್ತಿರುವುದು ತಮಗೂ ಗೊತ್ತಿದೆ. ಅದರಲ್ಲಿಯೂ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉರಿಬಿಸಿಲು ಮಧ್ಯಾಹ್ನದ ಹೊತ್ತಿನಲ್ಲಿ ನೆತ್ತಿಯನ್ನು ಸುಡುತ್ತಲಿದೆ ಎಂದು ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ. ಇಂತಹ ಕಡು ಬೇಸಿಗೆ ಯಲ್ಲಿ ರಾಜ್ಯದಲ್ಲಿನ ಪ್ರಾಥಮಿಕ ಶಾಲೆ ಗಳನ್ನು ಮೇ 16 ರಿಂದ ಪ್ರಾರಂಭಿಸಲು ಶಿಕ್ಷಣ ಇಲಾಖೆ ಆದೇಶಿಸಿರುವುದು ಎಳೆಯ ಮಕ್ಕಳ ಪಾಲಕರಿಗೆ ನುಂಗಲಾರದ ತುತ್ತಾಗಿದೆ. ಆರಂಭಿಸಿದರೂ ಮಕ್ಕಳನ್ನು ಕಳುಹಿಸಲು ಪೋಷಕರು ಸಿದ್ಧರಿಲ್ಲ. ಶಾಲೆ ಆರಂಭವಾದರೆ ಉತ್ತರ ಭಾರತದಂತೆ ಮಕ್ಕಳು ಸನ್ ಸ್ಟ್ರೋಕ್‌ಗೆ ಒಳಗಾಗುವ ಸ್ಥಿತಿ ಇರುತ್ತದೆ. ಮಕ್ಕಳ ಹಿತದೃಷ್ಟಿಯಿಂದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಜೂನ್ 1ರಿಂದ ಆರಂಭಿಸುವಂತೆ ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ. ರಜೆ ಅವಧಿ ವಿಸ್ತರಿಸಿದಲ್ಲಿ ಕಡಿಮೆ ಬೀಳುವ ಶೈಕ್ಷಣಿಕ ದಿನಗಳನ್ನು ಪ್ರತಿ ಶನಿವಾರ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಳ್ಳುವ ಮೂಲಕ ಸರಿಪಡಿಸಬಹುದು ಎಂದೂ ಹೇಳಿದ್ದಾರೆ.

ಇಂದು ಉಪನ್ಯಾಸ

ಮೈಸೂರು, ಮೇ 6– ಮೈಸೂರಿನ ವಿಜಯ ಫೌಂಡೇಶನ್, ಮೈಸೂರು ಯೋಗ ಒಕ್ಕೂಟ ಹಾಗೂ ಸಂಪ್ರದಾಯ ಕ್ಲಬ್ ಬೆಂಗಳೂರು ಸಹಯೋಗದಲ್ಲಿ ನಡೆಸುತ್ತಿರುವ ಸರಣಿ ಉಪನ್ಯಾಸದಲ್ಲಿ ನಾಳೆ(ಮೇ 7) ಸಂಜೆ 4ಕ್ಕೆ ಝೂಮ್ (ID:83082921748, PASSCODE-123456)ಮೂಲಕ ಹೆಸರಾಂತ ವಕೀಲರೂ ಆದ ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕರ್ತ ಓ.ಶಾಮಭಟ್ ಅವರು 'ಭಾರತೀಯ ಸಂಪ್ರದಾಯದ ಮೇಲೆ ಮಹರ್ಷಿ ಅಗಸ್ತ್ಯರ ಪ್ರಭಾವ' ಕುರಿತು ಮಾತನಾಡಲಿದ್ದಾರೆ.

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-231001
E-Mail Address: mimsmandyaoffice@gmail.com , mimsmandya@gmail.com

ಮರು ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)

ಸಂಖ್ಯೆ: ಮಿಮ್ಸ್/ಸರಬ(1)/ಫಿ.ಇನ್ಸ್‌ಟ್ರುಮೆಂಟ್ಸ್/ರಿ.ಇ–ಟೆಂ/17/2021–22, ದಿ:27.04.2022

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೀಲು ಮತ್ತು ಮೂಳೆ ರೋಗ ವಿಭಾಗದ ಫಿಸಿಯೋಥೆರಪಿ ಘಟಕಕ್ಕೆ ಅವಶ್ಯವಿರುವ ವಿವಿಧ Instruments ಗಳನ್ನು ಸರಬರಾಜು ಮಾಡಲು ಉತ್ಪಾದಕರವರಿಂದ/ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.20.00 ಲಕ್ಷಗಳು** (ಎಲ್ಲಾ ತೆರಿಗೆ ಇತ್ಯಾದಿಗಳು ಸೇರಿ). ಇ–ಪೋರ್ಟಲ್‌ನಲ್ಲಿ ಪಾವತಿಸಬೇಕಾದ ಇ.ಎಂ.ಡಿ ಮೊಬಲಗು **ರೂ.50,000/–** ಇ–ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭದ **ದಿನಾಂಕ: 5ನೇ ಮೇ 2022,** ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ **ದಿನಾಂಕ: 20ನೇ ಮೇ 2022 ರ ಸಂಜೆ 5.30 ಗಂಟೆ.** ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತಿತ್ತರ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **www.eproc.karnataka.gov.in** ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು. ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ಕೆಲಸದ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ನಿರ್ದೇಶಕರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಮುಖ್ಯ ಆಡಳಿತಾಧಿಕಾರಿಗಳು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.

ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/054/2022–23